ಪ್ರಾಚ್ಯ ಜಾನಪದ

ಡಾ। ಟಿ. ಗೋವಿಂದರಾಜು



ಜಾನಪದ ಆಕರ ಗ್ರಂಥ ಮಾಲೆ

ಪ್ರಾಚ್ಯ ಜಾನಪದ

(ಹೊಸ ಪರಿಕಲ್ಪನೆಯೊಂದರ ಶೋಧನ)

ಡಾ। ಟಿ. ಗೋವಿಂದರಾಜು

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

PRACHYA JANAPADA (A New conceptual study of Archaic Folklore in Kannada) : by Dr. T. Govinda Raju, Editor, Karnakata Gazetteer, 8th Floor, Kaveri Bhavan, Bangalore - 560 009. Published by V.N. Mallikarjunaswamy, Adminstrative Officer, Kannada Pustaka Pradhikara, Kannada Bhavana, J.C. Road, Bangalore - 560 002.

First Edition : 2006

Pages : xvi + xvi photo pages + 104

Price : Rs. 60.00

ಮೊದಲ ಮುದ್ರಣ : ೨೦೦೬

ಪುಟಗಳು : x + xvi ಚಿತ್ರ ಪುಟಗಳು + 104

ಬೆಲೆ : ರೂ. ೬೦.೦೦

ಪ್ರತಿಗಳು : ೧೦೦೦

ISBN : 81-7713-142-7

ಪ್ರಕಾಶಕರು :
ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - ೫೬೦ ೦೦೨

ಮುದ್ರಕರು
ಶ್ರೀ ವೆಂಕಟೇಶ್ವರ ಪ್ರಿಂಟರ್ಸ್
ಕೆಂಪೇಗೌಡ ನಗರ
ಬೆಂಗಳೂರು - ೫೬೦ ೦೧೯
ದೂ. : ೦೮೦-೨೬೬೭೭೫೫೬

ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾ ದೇವಿಯವರ ಜ್ಞಾನಶಕ್ತಿ 2×2=4 ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹು ಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು ? ಇದು ಇಂದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವಗಳು

ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು ; ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ, ಬೆಳೆದು ಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯಗಳಿಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ಮುಖೇಣ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ.

ಅಲ್ಲಮನ ಒಂದು ವಚನ ಹೀಗಿದೆ -

> **ಹಿಂದಣ ಅನಂತವನು ಮುಂದಣ ಅನಂತವನು**
> **ಒಂದು ದಿನ ಒಳಕೊಂಡಿತ್ತು ನೋಡಾ**
> **ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ**
> **ಕಂಡು ಬಲ್ಲವರಾರಯ್ಯಾ**
> **ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ**
> **ಅಂತೆ ಹೋದರು ಕಾಣಾ ಗುಹೇಶ್ವರ**

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಈ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಗಣಕೀಕರಣದ ಏಕಾಧಿಪತ್ಯಕ್ಕಿಂತ ಬಹುರೂಪಿ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಕ್ಷರ ಲೋಕದ ಮೂರ್ತರೂಪಗಳು ; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

'ಪ್ರಾಚ್ಯ ಜಾನಪದ - ಹೊಸ ಪರಿಕಲ್ಪನೆಯೊಂದರ ಶೋಧನ' ಟಿ. ಗೋವಿಂದರಾಜು ಅವರು ಬರೆದಿರುವ ಈ ಗ್ರಂಥ ಜಾನಪದ ಅಧ್ಯಯನಕ್ಕೆ ಸಂಬಂಧಿಸಿದ್ದು.

ಈ ಕೃತಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಕಟಣೆಗೆ ಆಯ್ಕೆ ಮಾಡಿಕೊಂಡ ನಿಕಟಪೂರ್ವ ಅಧ್ಯಕ್ಷರಾದ ಪ್ರೊ| ಮಲ್ಲೇಪುರಂ ಜಿ. ವೆಂಕಟೇಶ್ ಅವರಿಗೂ ಸಮಿತಿಯ ಸದಸ್ಯ ಬಳಗದವರಿಗೂ ಲೇಖಕರಾದ ಶ್ರೀ ಟಿ. ಗೋವಿಂದರಾಜು ಅವರಿಗೂ ಆತ್ಮೀಯರಾದ ಕಿ.ರಂ ಅವರಿಗೂ ಮುದ್ರಣಕ್ಕೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

ಪ್ರೊ| ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

ಹೀಗೆ ಹುಟ್ಟಿತು ಈ ಕೃತಿ...

'ಜಾನಪದ ಎಂಬುದು ಬಾಯಿಂದ ಬಾಯಿಗೆ ವರ್ಗಾವಣೆಯಾಗುವುದರಿಂದ ಅರ್ಥಾತ್, ಅದಕ್ಕೆ ಲಿಖಿತ ಪುರಾವೆಗಳು ಇಲ್ಲವಾದುದರಿಂದ ಹಿಂದಿನ ಜಾನಪದ ರೂಪ ಹೇಗಿತ್ತು ಎಂಬುದನ್ನು ಅರಿಯುವುದು ಸಾಧ್ಯವಿಲ್ಲ' - ಇದು ನನಗೆ ಜಾನಪದದ ಪಾಠ ಹೇಳಿದವರ ಒಂದು ಸಾಮಾನ್ಯ ಅಭಿಪ್ರಾಯವಾಗಿತ್ತು. ಅದು ಸರಿ ಎಂದು ಬಹಳ ಜನರ ಹಾಗೆ ನಾನೂ ನಂಬಿದ್ದೆ. ಆದರೆ, ನಾನು ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿದವನಾಗಿ, ಹಡಪದ್ ಮಾಸ್ತರ ಕೆನ್‌ಕಲಾಶಾಲೆಯಲ್ಲಿ ಚಿಕಣಿಚಿತ್ರಗಳ ಸಂಪುಟಗಳನ್ನು ತಿರುವಿಹಾಕುತ್ತಿದ್ದಾಗ, ಆ ದೃಶ್ಯನಿರೂಪಣೆಗಳಲ್ಲಿನ ಜನಪದ ಬದುಕು ನನ್ನಲ್ಲಿ ಹೊಸ ತಿಳಿವಳಿಕೆಯೊಂದನ್ನು ಮೂಡಿಸಿತು. ಈ ಬಗ್ಗೆ ಮಾಸ್ತರಿಗೆ ಹೇಳಿ, 'ಇಲ್ಲಿನ ಚಿತ್ರಗಳನ್ನು ಯಥಾವತ್ತಾಗಿ ಪುನರ್‌ಬಳಕೆ ಮಾಡಲು ಸಾಧ್ಯವಾಗಿದ್ದರೆ, ನಾನೊಂದು ಹೊಸ ಲೇಖನ ಬರೆಯುತ್ತಿದ್ದೆ' - ಅಂದೆ. ತಕ್ಷಣ ಅವರು ಎಂದಿನ ಪ್ರೋತ್ಸಾಹದ ನುಡಿಯಲ್ಲಿ, 'ನಿನಗೆ ಬೇಕಾದ್ದನ್ನು ವಿದ್ಯಾರ್ಥಿಗಳಿಂದ ಪ್ರತಿ ಮಾಡಿಸಿಕೊಡುತ್ತೇನೆ, ಲೇಖನ ಬರೆ' ಅಂದರು. ಆದರೆ, ಆಗ (೧೯೮೦) ನಾನೇ ಹಿಂಜರಿದೆ. ಕಾರಣ - ಏನೂ ಹಣಕೊಡದೆ ಆ ವಿದ್ಯಾರ್ಥಿಗಳಿಂದ ಚಿತ್ರ ಬರೆಸಿಕೊಳ್ಳುವುದಕ್ಕೆ ಮನಸ್ಸು ಒಪ್ಪಲಿಲ್ಲ; ಕೊಡುವ ಶಕ್ತಿಯೂ ನನಗೆ ಇರಲಿಲ್ಲ. ಎರಡನೆಯದು, ಹಾಗೆ ನಕಲು ಮಾಡುವಾಗ ಮೂಲ ಚಿತ್ರದಲ್ಲಿನ ಸೂಕ್ಷ್ಮಾಂಶಗಳು ಇಲ್ಲಿ ಬರದೇ ಹೋಗಬಹುದೆಂಬ ಅಳುಕು.

ಮುಂದೆ ನಾನು ಛಾಯಾಚಿತ್ರದ ಬಗೆಗೂ ಆಸಕ್ತನಾದೆ. ಕ್ಯಾಮೆರಾದಲ್ಲಿ ಚಿತ್ರಗಳನ್ನು ಯಥಾವತ್ತಾಗಿ ಪ್ರತಿ ಮಾಡುವುದು ಬಹು ಸುಲಭ ; ಕಡಿಮೆ ಖರ್ಚು ಹಾಗೂ ಅದು ಮೂಲದ್ದೇ ಪಡಿಯಚ್ಚಾಗಿರುತ್ತದೆ. ಅಂತೆಯೇ ಹೆಚ್ಚು ಉತ್ಸುಕತೆಯಿಂದ 'ಪ್ರಾಚ್ಯವಾದ್ಯಗಳು' ಲೇಖನ ಬರೆದೆ. ಅದು ಉದಯವಾಣಿ ದೀಪಾವಳಿ ಸಂಚಿಕೆಯಲ್ಲಿ (೧೯೯೪) ಮುಖ ಪುಟ ಲೇಖನವಾಗಿ, ಸುಂದರವಾಗಿ ಪ್ರಕಟವಾಯಿತು. ಹೀಗೆಯೇ ಪ್ರಾಚೀನ ಜನಪದ ಬದುಕಿನ ವಿವಿಧ ನೆಲೆಗಳನ್ನು ನಾವು ಗುರುತಿಸಬಹುದು ಎಂಬ ಆಲೋಚನೆ ನನ್ನನ್ನು ಕಾಡತೊಡಗಿದ್ದರಿಂದ ಆ ಸಂಬಂಧ ವಿವಿಧ ಮೂಲಗಳಿಂದ ಮಾಹಿತಿ ಸಂಗ್ರಹಕ್ಕೆ ತೊಡಗಿದೆ. ನಾನು ಕಂಡುಕೊಂಡ ಹೊಸ ಸಂಗತಿಯ ಬಗೆಗೆ ವಿದ್ವಾಂಸರ ಪ್ರತಿಕ್ರಿಯೆ ಅರಿವ ಸಲುವಾಗಿ, ಒಂದು ಪರಿಚಯಾತ್ಮಕ ಕಿರುಲೇಖನ ಬರೆದೆ. ಅದು 'ಅಗತ್ಯ ಅಧ್ಯಯನದ ಪ್ರಾಚ್ಯ ಜಾನಪದ' ಹೆಸರಿನಲ್ಲಿ ಪ್ರಜಾವಾಣಿಯಲ್ಲಿ (೧೨.೧೨.೧೯೯೯) ಪ್ರಕಟವಾಯಿತು. ಅದಕ್ಕೆ ಓದುಗರು ಮೆಚ್ಚುಗೆಯಿಂದಲೇ ಪ್ರತಿಕ್ರಿಯಿಸಿದರು. ಖ್ಯಾತ

ಇತಿಹಾಸಜ್ಞರಾದ ಡಾ। ಸೂರ್ಯನಾಥ ಕಾಮತರು ಮಿಥಿಕ್ ಸೊಸೈಟಿಯಲ್ಲಿ (ದಿನಾಂಕ ೨೭-೦೪-೨೦೦೧ರಂದು) ಈ ವಿಷಯ ಕುರಿತಾಗಿ ಒಂದು ವಿಶೇಷ ಉಪನ್ಯಾಸಕ್ಕೆ ಅವಕಾಶ ಮಾಡಿಕೊಟ್ಟರು. ಅದರ ಲೇಖನ ರೂಪವನ್ನು ಮೈಸೂರು ವಿಶ್ವವಿದ್ಯಾನಿಲಯದ ಡಾ। ಅಂಬಳಿಕೆ ಹಿರಿಯಣ್ಣ ಅವರು 'ಮಾನವಿಕ ಕರ್ನಾಟಕ'ದಲ್ಲಿ ಪ್ರಕಟಿಸಿ (ಸಂ. ೩ ಮತ್ತು ೪, ೨೦೦೧), ಸಂಪಾದಕೀಯದಲ್ಲಿ ಬರೆದಿರುವ ಟಿಪ್ಪಣಿ ಹೀಗಿದೆ :

"ಟಿ. ಗೋವಿಂದರಾಜು ಅವರ 'ಪ್ರಾಚ್ಯ ಅಧ್ಯಯನ' ಪ್ರಾಚ್ಯತನವನ್ನು ಹೊಂದಿದ ದಾಖಲೆ, ಮಾಹಿತಿಗಳನ್ನು ಬಳಸಿಕೊಂಡು ನಡೆಸಿದ ಒಂದು ಅಧ್ಯಯನ. ಈವರೆಗೆ ನಿರ್ಲಕ್ಷಿತವಾದ ಪ್ರಾಚೀನ ಆಕರಗಳನ್ನು ಜಾನಪದೀಯ ಅಧ್ಯಯನಕ್ಕೆ ಬಳಸಿಕೊಳ್ಳುವ ಹಾಗೂ ಜಾನಪದ ಅಧ್ಯಯನದ ಆಯಾಮವನ್ನು ವಿಸ್ತರಿಸುವ ಅಕೆಡೆಮಿಕ್ ಉದ್ದೇಶದಿಂದ ನಡೆದಿರುವ ಅಧ್ಯಯನ ಇದು. ಪ್ರಾಚೀನ ಆಕರಗಳು ಇಂದಿನ ಜನಪದ ಬದುಕಿನ ಸ್ಥಿತಿಗತಿಗಳ ಮೂಲ ಮಾತೃಕೆಗಳಾಗಿ ಕಾರ್ಯ ನಿರ್ವಹಿಸುತ್ತವೆ ಎಂಬ ಗ್ರಹಿಕೆಯಿಂದ ಇಲ್ಲಿ ವಿಚಾರ ಮಾಡಲಾಗಿದೆ. ಪ್ರಾಚ್ಯಜಾನಪದೀಯ ಅಧ್ಯಯನ ಬಹುಶಿಸ್ತೀಯ ಅಧ್ಯಯನಕ್ಕೆ ಒಗ್ಗುವ ವಿಷಯವಾಗಿದ್ದು, ಅಧ್ಯಯನಕಾರ ಇತಿಸಾಹದ ಚಿತ್ರ, ಶಿಲ್ಪ, ಛಾಯಾಗ್ರಹಣ, ಪುರಾತತ್ವ, ಮಾನವಶಾಸ್ತ್ರ, ವೈದ್ಯವಿಜ್ಞಾನ ಇವೇ ಮುಂತಾದ ಶಿಸ್ತುಗಳ ಬಗೆಗೆ ಪ್ರಾಥಮಿಕ ಜ್ಞಾನ ಹೊಂದಿರಬೇಕು ಎಂದು ಲೇಖಕರು ಪ್ರತಿಪಾದಿಸುತ್ತಾರೆ. ಇತರ ಅಧ್ಯಯನಕಾರರು ಪ್ರಾಚೀನ ಸಂಸ್ಕೃತಿಯನ್ನು ಇಡಿಯಾಗಿ ನೋಡಿದ ದಾಖಲೆಗಳಿವೆಯೇ ಹೊರತು ಅವುಗಳಲ್ಲಿ ಜನಪದ ಬದುಕಿಗೇ ಅನ್ವಯಿಸಿ ಅಭ್ಯಾಸ ಮಾಡಿ ತೋರಿಸಿದ ಪ್ರಯತ್ನಗಳು ಇಲ್ಲವೇ ಇಲ್ಲ. ಈ ದೃಷ್ಟಿಯಿಂದ ಇದೊಂದು ಮಹತ್ವಪೂರ್ಣವಾದ ಸಂಶೋಧನಾತ್ಮಕ ಬರಹವಾಗಿದೆ".

ಬಳಿಕ ಇದೇ ವಿಷಯ ವಿಸ್ತರಿಸಿ ಒಂದು ಸುದೀರ್ಘ ಪ್ರಬಂಧ ಬರೆದೆ. ಗುರುಗಳಾದ ಪ್ರೊ। ಕಿ.ರಂ. ಅದನ್ನು ಪುಸ್ತಕರೂಪದಲ್ಲಿ ತರಲೂ ಹೇಳಿದರು. ನನ್ನ ವಿದೇಶೀ ಗುರುವಾದ ಪ್ರೊ। ಪೀಟರ್‌ಕ್ಲಾಸ್ ಅವರಲ್ಲಿ 'ಕ್ಯಾಂಡಿಡ್ ಜಾನಪದ' ಹಾಗೂ 'ಪ್ರಾಚ್ಯ ಜಾನಪದ' - ಎಂಬ ಎರಡೂ ಹೊಸ ಪರಿಕಲ್ಪನೆಗಳ ಬಗೆಗೆ ವಿವರಿಸಿದಾಗ, ಅವರು ಮೆಚ್ಚಿ, ತಲೆದೂಗಿ 'You are in right track' ಎಂದು ಖುಷಿಯಿಂದ ಬೆನ್ನುತಟ್ಟಿದರು.

ನನಗೆ ತಿಳಿದಂತೆ ಇದೊಂದು ಹೊಸ ಆಲೋಚನೆ ; ಪ್ರಯತ್ನ. ಏಕೆಂದರೆ, ಬೇರಾವುದೇ ಮಾದರಿ ನನ್ನ ಎದುರಿಗಿಲ್ಲ. ಹೀಗೆ ಮಾಡಬಹುದೆಂದು ಬೇರೆ ಯಾರೂ ಹೇಳಿಲ್ಲ. ಇಂಗ್ಲೀಷ್‌ನಲ್ಲಿ ಕೆಲ ಪುಸ್ತಕಗಳು ಇರುವುದುಂಟು. ಆದರೆ, ಅವು ಬಹುಮಟ್ಟಿಗೆ ಸುಲ್ತಾನರು ಮೊದಲಾಗಿ ಮೇಲುವರ್ಗದವರ ಬದುಕಿನತ್ತ ಗಮನಕೊಟ್ಟದ್ದೇ ಹೆಚ್ಚು. ಅದರಲ್ಲಿ ಅಂತರ್ಗತವಾಗಿರುವ ಇತರ ಮಾಹಿತಿಗಳಿಂದ ಆಯಾ ಕಾಲದ ಜನ ಸಾಮಾನ್ಯರ ಜನಪದ ಬದುಕಿನ ರೀತಿ ನೀತಿಯನ್ನು ಅಧ್ಯಯನ ಮಾಡಬಹುದೆಂದು ಪ್ರತ್ಯೇಕವಾಗಿ ತೋರಿಸಿಕೊಟ್ಟದ್ದು ಇಲ್ಲ. ಒಂದು ವೇಳೆ ಬೇರೆ ಯಾರಾದರೂ ಮಾಡಿದ್ದಾರೆಯೇ ? ನನ್ನ ಕಣ್ಣಿಗಂತೂ ಬಿದ್ದಿಲ್ಲ. ಆದ್ದರಿಂದ, ಈ ಸಂಬಂಧ ನಾನೇ ಈ ಪರಿಕಲ್ಪನೆಯ ರೀತಿ-ನೀತಿ, ತತ್ವ ಸ್ವರೂಪಗಳನ್ನು ಕಲ್ಪಿಸಿಕೊಳ್ಳಬೇಕಾಯಿತು. ಹಾಗೂ ಇಲ್ಲಿ ಸ್ಪಷ್ಟವಾಗಿ ಬರೆಯುವುದೂ ಅನಿವಾರ್ಯವಾಯಿತು.

ಇದೊಂದು ಬಹುಶಿಸ್ತುಗಳ ಆಧಾರದಿಂದ ನಡೆಸಬಹುದಾದ ಅಧ್ಯಯನ. ಹೆಚ್ಚು ಶ್ರಮ, ಆಸಕ್ತಿಗಳೊಂದಿಗೆ ತಾಳ್ಮೆಯೂ ಇರಬೇಕು. ಚಿತ್ರಕಲೆ, ಛಾಯಾಚಿತ್ರ, ಪುರಾತತ್ವ ಮೊದಲಾದವುಗಳ ಬಗ್ಗೆ ಪರಿಶ್ರಮ, ಕುತೂಹಲ ಉಳ್ಳ ಜಾನಪದ ಅಧ್ಯಯನಕಾರರು ನಮ್ಮಲ್ಲಿ ಬಹಳ ಅಪರೂಪವಾದುದೂ ಬೇರೆಯವರಿಗೆ ಇಂಥ ಹೊಳಹು ಬಾರದಿರಲು ಒಂದು ಮುಖ್ಯ ಕಾರಣವಾಗಿರಬಹುದು. ಇಷ್ಟಾಗಿಯೂ ಈ ಪರಿಕಲ್ಪನೆಯ ಶೋಧನದಲ್ಲಿ ಏನಾದರೂ ಹೊಸತು ಇದೆಯೋ? ಇಲ್ಲವೋ ? ಎಂಬುದನ್ನು ಸಹೃದಯ ಓದುಗರ ಚರ್ಚೆಗೇ ಬಿಡುತ್ತೇನೆ. ಇದೀಗ ಚರ್ಚೆ, ವಿಮರ್ಶೆಗೆ ಅವಕಾಶ ಮಾಡಿಕೊಡಲಾಗಿದೆ.

ಈ ಪುಸ್ತಕದಲ್ಲಿ ಎರಡು ಭಾಗಗಳಿದ್ದು, ಮೊದಲ ಭಾಗದಲ್ಲಿ ಪ್ರಾಚ್ಯಜಾನಪದ ಪರಿಕಲ್ಪನೆಯ ಸ್ವರೂಪ, ವಿಶೇಷಗಳನ್ನು ಸ್ಥೂಲವಾಗಿ ಹೇಳಿ, ಕೆಲವು ಸ್ವಾರಸ್ಯದ ನಿದರ್ಶನಗಳೊಂದಿಗೆ ಅದನ್ನು ತೋರಿಸಿಕೊಡುವ ಪ್ರಯತ್ನ ಮಾಡಲಾಗಿದೆ. ಇಲ್ಲಿನ ಕುತೂಹಲದ ನಿದರ್ಶನಗಳು ಹಾಗೂ ಸರಳವಾದ ಭಾಷೆಯು ಸಿದ್ಧಾಂತ ತತ್ವಗಳ ಒಣ ನಿರೂಪಣೆಯಾಗದಿರುವಂತೆ ಮಾಡಿವೆ. ಆ ಮೂಲಕ ಕೇವಲ ವಿದ್ವಾಂಸರೇ ಅಲ್ಲದೇ ಸಾಮಾನ್ಯ ಓದುಗರೂ ಕುತೂಹಲದಿಂದ ಈ ಕೃತಿ ಓದಬಹುದಂತಾಗಿದೆ. ಜೊತೆಗೆ, ಇಲ್ಲಿ ಉಲ್ಲೇಖಿಸಿರುವ ನಿದರ್ಶನಗಳು ಕೆಲವರಿಗೆ 'ಕಟ್ ಅಂಡ್ ಪೇಸ್ಟ್' ಆಗಿ ಕಾಣಬಹುದಾದರೂ ವಾಸ್ತವವಾಗಿ, ಅವನ್ನು ಇಲ್ಲಿನ ಉದ್ದೇಶಕ್ಕೆ ಅನುಗುಣವಾಗಿ, ಉಪಯುಕ್ತವಾಗಿ ಬಳಸಿಕೊಂಡಿರುವುದರಿಂದ ಅವು ಪಠ್ಯದ ಒಳಗೆ ಸೇರಿ, ನಿರೂಪಣೆಯೊಂದಿಗೆ ಅವಿನಾಭಾವ ಸಂಬಂಧ ಪಡೆದುಕೊಂಡಂತಾಗಿವೆ. ಒಟ್ಟಾರೆ ಈ ಭಾಗವು ಪ್ರಾಚ್ಯಜಾನಪದ ಅಧ್ಯಯನದ ಒಂದು ಸ್ಥೂಲ ಮಾದರಿಯೂ ಆಗುತ್ತದೆ. ಅನುಬಂಧವಾಗಿರುವ ಎರಡನೆಯ ಭಾಗವು ಸೂಕ್ಷ್ಮಾಧ್ಯಯನದ ಮಾದರಿಯಾಗಿದ್ದು, ವಾದ್ಯದಂತಹ ಒಂದೇ ಪ್ರಕಾರವನ್ನು ವಿವಿಧ ನೆಲೆಗಳಲ್ಲಿ ಗಂಭೀರವಾಗಿ ಅವಲೋಕಿಸುವ ಪ್ರಯತ್ನವಾಗಿದೆ. ಹೀಗೆಯೇ ಇತರ ಸಂಗತಿಗಳನ್ನಾಗಲೀ ಅಥವಾ ಯಾವುದಾದರೂ ಒಂದೇ ವಿಧದ ವಾದ್ಯವನ್ನಾಗಲೀ ಹೆಚ್ಚುಹೆಚ್ಚು ಆಳವಾಗಿ, ವ್ಯಾಪಕವಾಗಿ ಅಧ್ಯಯನ ಮಾಡಬಹುದಾಗಿದೆ.

ಈ ಅಧ್ಯಯನದಲ್ಲಿ ನಾನು ಮುಖ್ಯವಾಗಿ ಚಿತ್ರ, ಶಿಲ್ಪದಂತಹ ಪ್ರಾಚೀನ ಆಕರಗಳನ್ನು ಬಳಸಿಕೊಂಡಿದ್ದೇನೆ. ಕಾರಣ, ಹೇಳಬೇಕಾದುದರ ವಿವರ ಕಣ್ಣಿಗೇ ಕಾಣುವಂತಾಗುತ್ತದೆ ; ಸ್ಪಷ್ಟವಾಗುತ್ತದೆ - ಎಂಬುದು. ಆದರೂ ಕೆಲವೆಡೆ ಪುಸ್ತಕ / ಲೇಖನಗಳಲ್ಲಿ ಕಂಡುಬಂದ ಅಕ್ಷರರೂಪದ - ಲಿಖಿತ ಮಾಹಿತಿಯನ್ನು ಬಳಸಿಕೊಂಡಿದ್ದೇನೆ. ಆದರೆ, ಮೌಖಿಕ ಪರಂಪರೆಯ ಕಾವ್ಯ-ಪುರಾಣಾದಿಗಳನ್ನು ಇಲ್ಲಿ ಪ್ರಸ್ತಾಪಿಸಲು ಹೋಗಿಲ್ಲ. ಅದರಲ್ಲಿ ಶತಮಾನಗಳ ಹಿಂದಿನ ಜನಪದ ಬದುಕು ಚಿತ್ರಿತವಾಗಿಲ್ಲ - ಎಂದಲ್ಲ. ಒಬ್ಬ ಜಾನಪದ ವಿದ್ಯಾರ್ಥಿಯಾಗಿ ಮೌಖಿಕಕಾವ್ಯಗಳ ಅನನ್ಯತೆಯ ಅರಿವು ನನಗೆ ಇದೆ. ಆದರೆ, ಅಂಥಾ ಕಾವ್ಯಗಳ ಕಾಲವನ್ನು ನಿರ್ದಿಷ್ಟಗೊಳಿಸಿಕೊಳ್ಳುವುದು ಕಷ್ಟ ; ಮಾತಿನಲ್ಲಿ ಪ್ರಸ್ತಾಪಿತವಾದ ವಸ್ತು, ವಿಚಾರದ ವಾಸ್ತವ ಸ್ವರೂಪ ಹೇಗಿದ್ದಿತೆಂದು ಕಲ್ಪಿಸಿಕೊಳ್ಳುವುದೂ ಕಷ್ಟ. ಹಾಗೆ ಕಲ್ಪಿಸಿಕೊಂಡಾಗಲೂ ಹಳೆಗನ್ನಡ ಕಾವ್ಯದಲ್ಲಿ ಅಕ್ಷರ ಮೂಲಕ ಪ್ರಸ್ತಾಪಿತವಾದ ಒಂದು ವಸ್ತು - ವಿಚಾರವನ್ನು ಅಂದಾಜಿನಲ್ಲಿ

ಕಲ್ಪಿಸಿಕೊಂಡಷ್ಟೇ ಅನಿರ್ದಿಷ್ಟವಾಗಿ ಉಳಿಯುತ್ತದೆ. ಅದಾಗ್ಯೂ ಪ್ರಯತ್ನಪೂರ್ವಕವಾಗಿ ಬರೆದ ಲೇಖನ ವಡ್ಡಾರಾಧನೆಯಲ್ಲಿ ಜಾನಪದ ಎಂಬಂತಹ ಇನ್ನೊಂದು ನಿದರ್ಶನವಾಗುತ್ತದೆಯೇ ಹೊರತು, ಹೊಸತೇನೂ ಆಗುವುದಿಲ್ಲ. ಅಷ್ಟಕ್ಕೂ ಮೌಖಿಕ ಸಂಪ್ರದಾಯಗಳೂ ಜಾನಪದದ ಒಂದು ಭಾಗ ಆಗುತ್ತವೆಯೇ ಹೊರತು, ಅವಷ್ಟೇ ಜಾನಪದ ಅಲ್ಲವಲ್ಲ. ಆದ್ದರಿಂದ ನಾನು ಇಲ್ಲಿ ಜಾನಪದ ಅಧ್ಯಯನದ ನಮ್ಮ ಸಾಂಪ್ರದಾಯಿಕ ಕ್ರಮಗಳಿಗಿಂತ ಆಚೆ, ಮುಂದೆಹೋಗಿದ್ದೇನೆ. ಜಾನಪದ ಅಧ್ಯಯನದಲ್ಲಿ ಮೌಖಿಕ ಜಾನಪದದಂತೆ ಚಾಕ್ಷುಷ ಜಾನಪದವೂ ಇರುತ್ತದೆ. ಇಲ್ಲಿನ ಆಕರಗಳು ಅಂಥಾ ಚಾಕ್ಷುಷ ಜಾನಪದದ ಒಂದು ಮಾದರಿ ಆಗುತ್ತವೆ. ಈ ದೃಷ್ಟಿಯಿಂದಲಾದರೂ ಇದೊಂದು ಹೊಸಪ್ರಯತ್ನ ಆದೀತಲ್ಲವೇ ?

ಈ ಕೃತಿಯಲ್ಲಿ ಪ್ರಸ್ತಾಪವಾಗಿರುವ ಹೆಚ್ಚಿನ ಎಲ್ಲಾ ಸಂಗತಿಗಳೂ ಸುಲಭವಾಗಿ ಮನನವಾಗಬೇಕಾದರೆ ಸಂಬಂಧಿಸಿದ ಚಿತ್ರಗಳೂ ಜೊತೆಗಿರಬೇಕಾಗುತ್ತದೆ. ಅವು ವರ್ಣದಲ್ಲಿ, ಸಾಕಷ್ಟು ದೊಡ್ಡ ಅಳತೆಯಲ್ಲಿದ್ದರೆ ಇನ್ನೂ ಹೆಚ್ಚು ಉಪಯುಕ್ತ. ಕನ್ನಡದ ಓದುಗರಿಗಂತೂ ಪ್ರಾಚೀನ ಚಿಕಣಿ ಚಿತ್ರಗಳ ಪರಿಚಯ ವ್ಯಾಪಕವಾಗಿ ಆದದ್ದು ಕಡಿಮೆ. ಈ ದೃಷ್ಟಿಯಿಂದಲೂ ದೊಡ್ಡ ಅಳತೆಯ ವರ್ಣಚಿತ್ರಗಳನ್ನೂ ಸೇರಿಸಿ ಇದನ್ನೊಂದು ವಿಶೇಷ ಮಾಹಿತಿ-ಚಿತ್ರ ಸಂಪುಟ ಮಾಡುವ ಅಪೇಕ್ಷೆ ಇತ್ತು. ಅದಕ್ಕಾಗಿಯೇ ಪ್ರಾಧಿಕಾರಕ್ಕೆ ಹಸ್ತಪ್ರತಿ ನೀಡಿದೆ ಹಾಗೂ ಬರಹವೇ ದೊಡ್ಡ ಪುಸ್ತಕವಾದರೆ ಪ್ರಕಟಣೆ ಕಷ್ಟವಾಗಬಹುದೆಂದು ಸಂಗ್ರಹಿಸಿದ್ದ ಒಂದಷ್ಟು ಮಾಹಿತಿಯನ್ನು ಕೈಬಿಟ್ಟು ಕಡಿಮೆ ಪುಟಗಳಿಗೆ ಸೀಮಿತ ಮಾಡಿದೆ. ಆದಾಗ್ಯೂ ಎಲ್ಲಾ ಚಿತ್ರಗಳನ್ನೂ ಇಲ್ಲಿ ಸೇರಿಸಲೂ ಸಾಧ್ಯವಾಗಲಿಲ್ಲ.

ಇದು ಸುಮಾರು ಕಾಲು ಶತಮಾನದಷ್ಟು ದೀರ್ಘಕಾಲದ ಅಧ್ಯಯನದ ಪ್ರಯತ್ನ. ಈ ಅವಧಿಯಲ್ಲಿ ಮಾಹಿತಿ ಹಾಗೂ ಚಿತ್ರಗಳ ಸಂಗ್ರಹಕ್ಕಾಗಿ ನಾನು ಬೆಂಗಳೂರಿನ ವಾರ್ತಾ ಇಲಾಖೆ, ಮಿಥಿಕ್ ಸೊಸೈಟಿ, ಮೈಸೂರಿನ ಪುರಾತತ್ವ ಇಲಾಖೆ, ವಿಶ್ವವಿದ್ಯಾಲಯದ ಕಾಲೇಜು, ಅಷ್ಟೇ ಅಲ್ಲದೆ ಲಲಿತಕಲಾ ಅಕಾಡೆಮಿ, ಸಾರ್ವಜನಿಕ ಗ್ರಂಥಾಲಯ ಮೊದಲಾದೆಡೆ ಹಲವಾರು ಗ್ರಂಥಗಳನ್ನು ಪರಾಮರ್ಶಿಸಿದ್ದೇನೆ. ಅವಲ್ಲದೆ ಇನ್ನಷ್ಟು ಮಾಸಪತ್ರಿಕೆ, ದಿನಪತ್ರಿಕೆಗಳಿಂದ ಮಾಹಿತಿಯನ್ನೂ ಚಿತ್ರಗಳನ್ನೂ ಕೃತಜ್ಞತಾಪೂರ್ವಕವಾಗಿ ಪಡೆದಿದ್ದೇನೆ. ಆ ಎಲ್ಲಾ ಗ್ರಂಥ, ಲೇಖನ ಕರ್ತೃಗಳಿಗೂ, ಚಿತ್ರಗಳು ಹಾಗೂ ಮಾಹಿತಿ ನೀಡಿದ ನನ್ನ ಸಹೋದರರಿಗೂ, ಮುಖಪುಟ ಮಾಡಿಕೊಟ್ಟ ಕಲಾವಿದ ಮಿತ್ರ ಎಚ್.ಎಸ್. ವೇಣುಗೋಪಾಲ್ ಅವರಿಗೂ, ಮುದ್ರಕರಿಗೂ ಈ ವಿಷಯಕ್ಕೆ ಸಂಬಂಧಿಸಿದಂತೆ ನನ್ನ ಕೆಲವು ಲೇಖನಗಳನ್ನು ಪ್ರಕಟಿಸಿದ ವಿವಿಧ ಪತ್ರಿಕಾ ಸಂಪಾದಕರಿಗೂ, ಪುಸ್ತಕ ಹೊರಬರಲು ಸಹಕರಿಸಿದ ಪ್ರಾಧಿಕಾರದ ಎಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

- ಟಿ. ಗೋವಿಂದರಾಜು

ಜಾನಪದ : ಹೀಗೊಂದು ಪ್ರಮಾಣು

ಮೌಖಿಕ ಪರಂಪರೆ ಹಾಗೂ ಲಿಖಿತ ಪರಂಪರೆಗೆ ಒದಗಿಬರುವ ಸಾಂಸ್ಕೃತಿಕ ಸಾಮಗ್ರಿಗಳನ್ನು ಕಲೆ ಹಾಕುವ ಕೆಲಸ ಜಗತ್ತಿನಾದ್ಯಂತ ವ್ಯಾಪಕವಾಗಿ ನಡೆಯುತ್ತಲಿದೆ. ಇದರೊಂದಿಗೆ ಆಕರಗಳನ್ನು ಗ್ರಹಿಸುವ ಬೇರೆ ಬೇರೆ ಕ್ರಮಗಳು ಚಾಲ್ತಿಯಲ್ಲಿವೆ. ಮೌಖಿಕ ಸಂಪ್ರದಾಯಕ್ಕೂ, ಲಿಖಿತ ಸಂಪ್ರದಾಯಕ್ಕೂ ಇರುವ ಸಂಬಂಧಾಂತರಗಳ ವಹಿವಾಟು ಕೊನೆ ಇಲ್ಲದ್ದು. ನಾವು ಕೇವಲ ಮೌಖಿಕ ಗತವನ್ನು ಮಾತ್ರ ಅನ್ವೇಷಿಸುತ್ತ ಹೋಗುವುದರಲ್ಲಿ ಅಷ್ಟಿಷ್ಟು ಪ್ರಯೋಜನ ಇದ್ದೀತು. ಆದರೆ, ಈ ಹುಡುಕಾಟ ವರ್ತಮಾನದೊಂದಿಗೆ ಸಂಬಂಧ ಪಡೆಯುವ ಪ್ರಕ್ರಿಯೆಯ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡಂತೆ ಕಾಣುವುದಿಲ್ಲ. ಡಾ। ಟಿ.ಗೋವಿಂದರಾಜು ಅವರು ಪ್ರಾಚ್ಯ ಜಾನಪದ ಎಂಬ ಪರಿಕಲ್ಪನೆಯತ್ತ ಕಣ್ಣು ಹಾಯಿಸಿ ಈ ಪುಸ್ತಕವನ್ನು ಬರೆದಿದ್ದಾರೆ.

ಜಾನಪದ ಅಧ್ಯಯನವು ಈಗಾಗಲೇ ಸೂತ್ರೀಕರಿಸಿದ ಕೆಲವು ನೆಲೆಗಳ ಮಧ್ಯೆ ಸಿಲುಕಿಕೊಂಡು ಒಂದು ಬಗೆಯ ಚರ್ವಿತಚರ್ವಣವೆನ್ನಬಹುದಾದ ಆಲೋಚನೆಗಳಿಗೆ ಮುಗಿಬಿದ್ದಿದೆ ಎನಿಸುತ್ತದೆ. ಲಿಖಿತ ಪರಂಪರೆಯನ್ನಾಗಲೀ, ಜನಪದ ಪರಂಪರೆಯನ್ನಾಗಲೀ ವಿವೇಚಿಸುವಾಗ ಒಂದು ಬಗೆಯ ಪ್ರತ್ಯೇಕತೆಯನ್ನು ಸ್ಥಾಪಿಸಿಕೊಂಡು ಅದಕ್ಕೆ ಬದ್ಧರಾಗಿಬಿಟ್ಟಿದ್ದೇವೆ. ಈ ಬದ್ಧ ನೆಲೆಗಳನ್ನು ದಾಟಿ ಈ ಹೊತ್ತಿಗೆ ಮುಖ್ಯವೆನ್ನಿಸುವ ಸಂಸ್ಕೃತಿ ಚಿಂತನೆಗಳತ್ತ ಚಲಿಸಬೇಕಾದ ಅಗತ್ಯವಿದೆ. ಆಧುನಿಕ ಜಗತ್ತೇ ಒಂದು ರೀತಿಯಲ್ಲಿ ಲಿಖಿತ ಹಾಗೂ ಅಲಿಖಿತ, ಶಾಸ್ತ್ರ ಹಾಗೂ ಶಾಸ್ತ್ರಗಳನ್ನು ಮೀರಿದ ನಿರ್ಮಿತಿಗಳ ಒಂದು ವಲಯ. ಜಾನಪದವೆಂದ ಮಾತ್ರಕ್ಕೆ ಅದು ಪ್ರಾಚೀನವೂ, ಅರ್ವಾಚೀನವೂ ಆದ ಒಂದು ಸಮ್ಮಿಶ್ರ ಕಲ್ಪನೆ ಎಂಬುದನ್ನು ನಾವು ಗಮನಕ್ಕೆ ತಂದುಕೊಂಡು ಯೋಚಿಸಬೇಕಾಗಿದೆ. ವರ್ತಮಾನದಲ್ಲಿ ಪ್ರಾಚೀನತೆಯ ಅಂಶಗಳು, ಪ್ರಾಚೀನದಲ್ಲಿ ಅದಕ್ಕೂ ಪ್ರಾಚೀನವಾದ ಅಂಶಗಳು ತಳುಕುಹಾಕಿಕೊಂಡೇ ವರ್ತಮಾನದಲ್ಲಿ ನೆಲೆಗೊಂಡಿರುತ್ತದೆಂಬುದನ್ನು ನಾವು ತಿಳಿದಿದ್ದೇವೆ.

ಜನಪದ ಸಂಸ್ಕೃತಿಯನ್ನು ಯಾವುದೇ ನೆಲೆಯಿಂದ ನೋಡಿದರೂ ಅದಕ್ಕೆ ತನ್ನದೇ ಆದ ಪ್ರಬುದ್ಧತೆ, ಪಕ್ವತೆ ಹಾಗೂ ವೈಚಾರಿಕ ಸೂಕ್ಷ್ಮಗಳು ಇರುವುದನ್ನು ಅದರ ಎಲ್ಲ ಅಭಿವ್ಯಕ್ತಿಗಳಲ್ಲಿಯೂ ಕಾಣುತ್ತೇವೆ. ಶಿಲ್ಪ, ಚಿತ್ರ, ಸಂಗೀತ, ಶಾಬ್ದಿಕ ಅಭಿವ್ಯಕ್ತಿ ಹೀಗೆ ಅಸಂಖ್ಯ ಅಭಿವ್ಯಕ್ತಿ ವಿಧಾನಗಳಲ್ಲಿ ಜನಪದ ಸಂವೇದನೆ ಮೈಪಡೆಯುತ್ತಲೇ ಇರುತ್ತದೆ. ಸ್ವಪ್ನವೋ,

ಮಾರ್ಗವೋ ಆದ ನೆಲೆಗಳು ಕೇವಲ ಶಿಷ್ಟ ಅಥವಾ ಮಾರ್ಗ ಎಂಬ ಖಚಿತ ಕಲ್ಪನೆಗಳಿಗೆ ಎಂದಿಗೂ ಸಲ್ಲುವುದಿಲ್ಲ. ಈ ನೆಲೆಗಳು ಜಾನಪದೀಯವನ್ನು ಒಳಗೊಳ್ಳುತ್ತ ಜಾನಪದವೆಂಬುದು ಶಿಷ್ಟ-ಮಾರ್ಗಗಳ ಅಂಶಗಳನ್ನು ಸ್ವೀಕರಿಸುತ್ತ ಸಂಸ್ಕೃತಿಯ ವಿಕಸನದ ಪ್ರಕ್ರಿಯೆಯ ಮೂಲಕ ಪ್ರವಹಿಸುತ್ತ ಸಾಗುತ್ತದೆ. ಯಾವುದೇ ಆಕರವನ್ನು ನೋಡುವ ಕ್ರಮ, ಹಾಗೆ ನೋಡಿ ಅದನ್ನು ವಿವರಿಸಿಕೊಳ್ಳುವ ಕ್ರಮ ತುಂಬ ಮುಖ್ಯವಾದುದು. ಹೀಗೆ ನೋಡುವ ಕ್ರಮ ಮೇಲುನೋಟಕ್ಕೆ ಸರಳವೆಂಬಂತೆ ತೋರಿದರೂ ಅದು ಅಷ್ಟು ನೇರವಲ್ಲ. ನಾನು ಈ ಮೊದಲೇ ಹೇಳಿದಂತೆ ಶಿಷ್ಟ ಮತ್ತು ಜಾನಪದೀಯ ಸಂಸ್ಕೃತಿಗಳ ಸೂಕ್ಷ್ಮತೆ ಹಾಗೂ ಅದರ ಪ್ರಬುದ್ಧತೆಯ ಚಲನಶೀಲತೆಯನ್ನು ಸಮಗ್ರವಾಗಿ ಗ್ರಹಿಸುವ, ನೋಡುವಿಕೆಗೆ ಸಂಬಂಧಿಸಿದ ಆಸಕ್ತಿ ಇದಾಗಿದೆ.

ಈ ಹೊತ್ತಿನ ಎಲ್ಲ ತಾಂತ್ರಿಕ ಸಾಧನೆಗಳ ತಳಹದಿಯೇ ಪ್ರಾಚೀನ ಮನುಷ್ಯನ ಅನ್ವೇಷಣೆಯ ಮೂಲನೆಲೆಗಳನ್ನು ಒಳಗೊಂಡದ್ದಾಗಿದೆ. ನಮಗೆ ವಿಜ್ಞಾನದ ಇತಿಹಾಸವನ್ನು ಗುರುತಿಸುವುದು ಅಭ್ಯಾಸಗತವಾಗಿಬಿಟ್ಟಿದೆ. ವಿಜ್ಞಾನದ ಇತಿಹಾಸವನ್ನು ದಾಖಲಿಸುವುದಕ್ಕಿಂತ ಆದಿಮ ಮನುಷ್ಯನಿಂದ ಈ ಹೊತ್ತಿನ ತನಕ ಸಾಗಿಬಂದಿರುವ ಮನುಷ್ಯನ ಇತಿಹಾಸದಲ್ಲಿ ವಿಜ್ಞಾನ ಹೇಗೆ ಹಾಸುಹೊಕ್ಕಾಗಿದೆ ಎಂಬುದನ್ನು ತಿಳಿಯುವುದೇ ಹೆಚ್ಚು ಮಹತ್ವದ್ದು.

ಜಾನಪದದ ಗ್ರಹಿಕೆಗೆ ಕಾಲ ನಿರ್ದಿಷ್ಟವಾದುದಲ್ಲ ಎಂಬ ನಿಲುವನ್ನೇನೋ ಅಷ್ಟಿಷ್ಟು ಒಪ್ಪಬಹುದು. ಆದರೆ, ಇಡೀ ಜಾನಪದ ಚೈತನ್ಯದಲ್ಲಿ ಕಾಲವೆನ್ನುವುದು ನಿರಂತರವಾಗಿ ಪ್ರವಹಿಸುತ್ತಲೇ ಇದೆ. ಈ ಹೊತ್ತು ನಾವು ತೇದಿಯ ಲೆಕ್ಕಾಚಾರದಲ್ಲಿ ಯೋಚಿಸುವಂತೆ ಜಾನಪದ ಅಭಿವ್ಯಕ್ತಿಯನ್ನು ಯೋಚಿಸದಿದ್ದರೂ ಈ ಅಭಿವ್ಯಕ್ತಿಯನ್ನು ಕಾಲದ ವಿಭಿನ್ನ ಅವಸ್ಥಾಂತರಗಳಿಗೆ ಒಳಪಡಿಸಿ ನೋಡುವುದಕ್ಕೆ ಸಾಧ್ಯವಿದೆ ಎನ್ನುವುದು ನನ್ನ ತಿಳಿವಳಿಕೆ. ಜಾನಪದದ ಅಭಿವ್ಯಕ್ತಿಗಳಲ್ಲಿ ಈ ಕಾಲ ಚೈತನ್ಯವು ಅನೇಕ ಅವಸ್ಥಾಂತರಗಳನ್ನು ಹೊಂದುತ್ತ ವರ್ತಮಾನದಲ್ಲಿ ಅವತರಣಗೊಂಡಿದೆ. ಹೀಗಾಗಿ, ಲೋಕದ ಎಲ್ಲ ವಸ್ತು ಚೈತನ್ಯದೊಂದಿಗೆ ಮನುಷ್ಯ ನಿರಂತರ ಸಂಬಂಧವನ್ನು ಸ್ಥಾಪಿಸಿಕೊಳ್ಳುತ್ತ ನಡೆಯುತ್ತಿದ್ದಾನೆ. ಆದ್ದರಿಂದ, ಈ ಎಲ್ಲ ವಸ್ತು ಪ್ರಪಂಚದಲ್ಲಿ ಮಾನವತೆಯ ಸತ್ವ ಒಂದಲ್ಲ ಒಂದು ರೀತಿಯಿಂದ ತಳುಕು ಹಾಕಿಕೊಂಡಿದೆ. ಇದೊಂದು ಸಂಕೀರ್ಣವೂ, ಗಾಢವೂ ಆದ ಸಂಬಂಧ. ಸಂಸ್ಕೃತಿಯ ಚಿಂತಕನೊಬ್ಬನಿಗೆ ಯಾವುದೇ ವಸ್ತು, ಯಾವುದೇ ಅಭಿವ್ಯಕ್ತಿಯ ವಿವರ ಅದು ಮೂರ್ತವಾದುದಾಗಿರಲಿ, ಅಮೂರ್ತವಾದುದಾಗಿರಲಿ, ಅಲ್ಲೆಲ್ಲಾ ಸಂಸ್ಕೃತಿಯ ಸೂಕ್ಷ್ಮಾಂಶಗಳು ಗೋಚರಗೊಳ್ಳುತ್ತಲೇ ಇರುತ್ತದೆ. ಸಂಸ್ಕೃತಿಯ ಇಂಥ ಸೂಕ್ಷ್ಮಾಂಶಗಳನ್ನು ಗ್ರಹಿಸಲು ಶಿಷ್ಟ, ಅಶಿಷ್ಟ, ಮಾರ್ಗ, ದೇಸಿ ಎಂಬ ಯಾವುದೇ ಕಲ್ಪನೆ ಅಡ್ಡಿ ಬರುವುದಿಲ್ಲ. ಸಂಸ್ಕೃತಿಯ ಜ್ಞಾನಾಸಕ್ತಿಗೆ ಒದಗಿಬರುವ ಪರಿಕರಗಳೆಲ್ಲವೂ ಮಹತ್ವದ್ದೇ ಎಂದು ತಿಳಿಯದೇ ನಾವು ಮುಂಚಲಿಸುವಂತಿಲ್ಲ.

ಡಾ। ಟಿ.ಗೋವಿಂದರಾಜು ತಮ್ಮ ಅಧ್ಯಯನದಲ್ಲಿ ಜಾನಪದ ಅಧ್ಯಯನಕ್ಕೆ ಹೇಗೆ ಪ್ರಾಚೀನ ಆಕರಗಳು ಒದಗಿಬರುತ್ತವೆ ಎಂಬುದನ್ನು ವಿಶ್ಲೇಷಿಸಿದ್ದಾರೆ. ಅದನ್ನು ಅವರು ಪ್ರಾಚ್ಯ ಜಾನಪದ ಎಂದು ಕರೆದಿದ್ದಾರೆ. ಈ ಪರಿಕಲ್ಪನೆಯು ಅನೇಕ ಮಟ್ಟದ ಕುತೂಹಲಕ್ಕೆ


ಎಡೆಮಾಡಿಕೊಟ್ಟಿದೆ. ಬೇಟೆ ಪೂರ್ವ ಸಂಸ್ಕೃತಿ, ಮನುಷ್ಯನ ಉಡುಗೆ-ತೊಡುಗೆಗಳು, ಸಂಸ್ಕೃತಿಯ ನೆಲೆಗಳು, ಶಿಲ್ಪ ಮತ್ತು ಚಿತ್ರಗಳ ಮೂಲಕ ಸ್ಫುರಿಸುವ ಮನುಷ್ಯ ಜೀವನದ ನೋಟಗಳು ಹಾಗೂ ಮನುಷ್ಯ ತನ್ನ ವಾಸಸ್ಥಾನದ ನೆಲೆಗಳನ್ನು ರೂಪಿಸಿಕೊಂಡ ವಿವರಗಳನ್ನು ಇಲ್ಲಿ ವಿಪುಲ ಮಾಹಿತಿಗಳ ಮೂಲಕ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಮನುಷ್ಯನ ಅಂತರ್ಗತ ಪ್ರಜ್ಞೆಯೇ ಆಗಿ ಹರಿದುಬಂದಿರುವ ಅವನ ಕಲೆಯ ನೆಲೆ, ಅಂಥ ಕಲೆಗಳು ಹಂತಹಂತವಾಗಿ ಆವಿಷ್ಕಾರಗೊಂಡು ಬೆಳೆದ ಬಗೆಯನ್ನು ವಿವರಿಸಿದ್ದಾರೆ. ಈ ದೃಷ್ಟಿಯಿಂದ ಮನುಷ್ಯನ ಇತಿಹಾಸದಲ್ಲಿಯೇ ಸುಪ್ತವಾಗಿರುವ ಅವನ ಪ್ರಾತಿಭ ಸತ್ವಗಳನ್ನು ಸೂಕ್ಷ್ಮವಾಗಿ ಹುಡುಕಿ ತೆಗೆದಿದ್ದಾರೆ. ಹೀಗಾಗಿ ನಮ್ಮ ಜಾನಪದ ಅಧ್ಯಯನಕ್ಕೆ ಇದೊಂದು ಗಮನಾರ್ಹ ಕೊಡುಗೆಯಾಗಿದೆ.

ನಮ್ಮ ಜಾನಪದ ಅಧ್ಯಯನವು ಈ ಹೊತ್ತಿನ ಸಮಕಾಲೀನ ಬದುಕಿನೊಂದಿಗೆ ಅರ್ಥಪೂರ್ಣ ಸಂಬಂಧಗಳನ್ನು ಕಲ್ಪಿಸಿಕೊಳ್ಳದೇ ಹೋದರೆ ಅದೊಂದು ಜಡ ಶೈಕ್ಷಣಿಕ ಶಿಸ್ತಾಗಿ ಮಾತ್ರ ನಿಂತು ಪಳೆಯುಳಿಕೆಯಾಗುವ ಎಲ್ಲ ಸಾಧ್ಯತೆಗಳು ಈಗಾಗಲೇ ಆವರಿಸಿಬಿಟ್ಟಿವೆ. ಅಂಥ ಸ್ಥಿತಿಯಿಂದ ಜಾನಪದ ಅಧ್ಯಯನವನ್ನು ಪಾರುಮಾಡುವ ಅಗತ್ಯವಂತೂ ಇದ್ದೇ ಇದೆ. ಈ ದಿಕ್ಕಿನಲ್ಲಿ ಡಾ। ಗೋವಿಂದರಾಜು ಅವರ 'ಪ್ರಾಚ್ಯ ಜಾನಪದ' ಹೊಸ ಚರ್ಚೆ ಹಾಗೂ ವಿವಾದಕ್ಕೆ ಆಹ್ವಾನವನ್ನು ನೀಡಿದೆ.


ನಮ್ಮ ಜಾನಪದ ಚಿಂತನೆಯು ಹೊಸ ಅನ್ವೇಷಣೆಗಳ ದಿಕ್ಕಿನಲ್ಲಿ ಸಾಗಬೇಕಾದರೆ ನಮಗೆ ದೊರೆಯುತ್ತಲೇ ಇರುವ ಎಲ್ಲ ಮಟ್ಟದ ಅಭಿವ್ಯಕ್ತಿ-ಸಾಮಗ್ರಿಗಳ ಮೂಲಕ ಸಮಸ್ಯಾತ್ಮಕತೆಯ ನೆಲೆಗಳನ್ನು ಸೃಷ್ಟಿಸಿಕೊಳ್ಳಬೇಕಿದೆ. ಇಂಥ ಹೊಸ ಸಮಸ್ಯಾತ್ಮಕ ನೆಲೆಗಳನ್ನು ಈ ಹೊತ್ತಿನ ಜಾನಪದ ಚಿಂತನೆ ರೂಪಿಸಿಕೊಳ್ಳುವುದರಲ್ಲಿ ಅಷ್ಟಾದ ತೀವ್ರತೆಯನ್ನು ತೋರುತ್ತಿಲ್ಲ. ಇಂಥ ಹೊಸ ಸಮಸ್ಯೆಗಳ ಕಡೆ ನಮ್ಮ ಜಾನಪದ ಚಿಂತಕರು ಗಮನ ಹರಿಸಬೇಕಾದ ಅಗತ್ಯವಿದೆ. ಅಂಥ ಪ್ರಯೋಗಗಳನ್ನು ಎಂದಿನಿಂದಲೂ ಮಾಡುತ್ತಾ ಬಂದಿರುವ ಗೋವಿಂದರಾಜು ಅವರ ಈ ಅಧ್ಯಯನ ಜಾನಪದ ಚಿಂತಕರಿಗೆ ಮಹತ್ವದ ಕೈದೀವಿಗೆಯಾಗಿದೆ. ತಮ್ಮ ಸಮರ್ಥನೆಗೆ ಡಾ। ಗೋವಿಂದರಾಜು ಅವರು ಬಳಸಿಕೊಡಿರುವ ಚಿತ್ರ, ಶಿಲ್ಪ, ಪ್ರಾಚ್ಯ ಪಳೆಯುಳಿಕೆ ಮೊದಲಾದ ಆಕರಗಳಲ್ಲಿ ಜಾನಪದೀಯತೆ ಇದೆ ಅಥವಾ ಇಲ್ಲ ಎಂಬುದು ಅವರವರ ತಿಳಿವಳಿಕೆ ಹಾಗೂ ಮನೋಭಾವಕ್ಕೆ ತಕ್ಕಂತೆ 'ಪ್ರಮಾಣು'ವಾಗುತ್ತದೆ. ಅಲ್ಲಮ ಹೇಳಿರುವಂತೆ-

ನಾನೆಂಬುದು ಪ್ರಮಾಣು, ನೀನೆಂಬುದು ಪ್ರಮಾಣು,
ಸ್ವಯವೆಂಬುದು ಪ್ರಮಾಣು, ಪರವೆಂಬುದು ಪ್ರಮಾಣು,
'ಪ್ರಮಾಣವೆಂಬುದು' ಪ್ರಮಾಣು, ಗೊಹೇಶ್ವರನೆಂಬುದು ಅಪ್ರಮಾಣು !


ಪ್ರೊ। ಕಿ.ರಂ. ನಾಗರಾಜ
ಬೆಂಗಳೂರು ವಿಶ್ವವಿದ್ಯಾಲಯ



೫೦೦೦ ವರ್ಷಗಳ ಹಿಂದೆ ಸಂಧಿವಾತದಿಂದ ಸತ್ತವನು ...ಪುಟ ೬೬



ಎರಡನೇ ಶತಮಾನದಲ್ಲಿನ ಮರದ ಬಾಚಣಿಗೆ



ಒಂದನೇ ಶತಮಾನದ ಹೇನಿನ ಪಳೆಯುಳಿಕೆ


...ಪುಟ ೩೨



ಕ್ರಿ.ಶ. ೪ನೇ ಶತಕದ ರೋಮನ್ ತುತ್ತೂರಿ ವಾದಕ (ಒಂದು ಮೊಸಾಯಿಕ್ ಚಿತ್ರದ ಆಧಾರದಿಂದ) ...ಪುಟ ೯೦



ಜಿಂಕೆ ವೇಷಹಾಕಿ ಬೇಟೆಗೆ ಹೊರಟ ಆದಿ ಮಾನವ (ಕ್ರಿ.ಪೂ. ೩೦ ಸಾವಿರ ವರ್ಷಗಳ ಹಿಂದಿನ ಗುಹಾ ಚಿತ್ರ) ...ಪುಟ ೧೨




ಜೋಡಿ ಪಿಳ್ಳಂಗೋವಿ, ವೀಣೆ ಹಾಗೂ ಹಾರ್ಪ್ ವಾದಕಿಯರು
(ಈಜಿಪ್ಟ್ ಭಿತ್ತಿ ಚಿತ್ರ, ಕ್ರಿ.ಪೂ. ೧೪೦೦) ...ಪುಟ ೮೩




ತಮಟೆ ವಾದನ ಕ್ರಮ (ಅಮರಾವತಿ ಶಿಲ್ಪ)



ಆಧುನಿಕ ತಮಟೆ ವಾದನ ...ಪುಟ ೯೮



ಬಟ್ಟೆ ನೇಯ್ಗೆಯ ಸಾಂಪ್ರದಾಯಿಕ ತಂತ್ರಗಳು (೧೫೯೦ರ ಮುಘಲ್ ಶೈಲಿ ಚಿತ್ರ) ...ಪುಟ ೫೦




ದೊಂಬರಾಟದ ಕಸರತ್ತುಗಳು (ಚಿಕಣಿ ಚಿತ್ರ)
ಸುಮಾರು ೩೦೦ ವರ್ಷಗಳ ನಂತರವೂ ದೊಂಬರಲ್ಲಿ ಇವೇ ಕಸರತ್ತುಗಳಿವೆ ...ಪುಟ ೫೫



ಕೃಷ್ಣನ ಕಿನ್ನರಿವೀಣೆಗೆ ತಂಬೂರಿ, ತಾಳ ಮೃದಂಗ ಸಂಗಾತಿಯರು
(ರಾಗಮಾಲಾ-೧೮ನೆಯ ಶತಮಾನ)



ಕೃಷ್ಣನ ಕೊಳಲು, ರಾಧೆಯ ಡಪ್ಪು.(ಮೇವಾರ ಚಿತ್ರ)



೨೦೦ ವರ್ಷಗಳ ಹಿಂದಿನ ಅಡುಗೆ ಮನೆ (ಚಿಕಣಿ ಚಿತ್ರ) ...ಪುಟ ೩೯



ಜೋಡಿ ಪಿಳ್ಳಂಗೋವಿ, ತಾಳ ಹಾಗೂ ಡಪ್ಪು ವಾದಕರು
(ಪಾಂಪೆ, ಕ್ರಿ.ಪೂ. ೨ನೇ ಶತಮಾನದ ಮೊಸಾಯಿಕ್ ಚಿತ್ರ) ...ಪುಟ ೬೭



ಕೊಂಬು, ಪಿಳ್ಳಂಗೋವಿ, ಮೃದಂಗ, ಚಂಡೆ, ಕುಣಿಮಿಣಿ ಮತ್ತಿತರ ವಾದಕರು
(ಸಾಂಚಿ ಶಿಲ್ಪ)




ತುತ್ತೂರಿ, ಮೃದಂಗ, ಜಾಲರಿ, ನಗಾರಿ ಹಾಗೂ ಡೋಲು ವಾದಕರು
(ಮೇವಾರ ಚಿತ್ರ-ಕ್ರಿ.ಶ. ೧೬೫೦)




ಪ್ರಾಣಿ-ಪಕ್ಷಿ ಆಕಾರದ ಮಣ್ಣಿನ ಪೀಪಿಗಳು (ರಷ್ಯಾ)



ಶತಮಾನದ ಹಿಂದಿನ ಒಂದು ಹಳ್ಳಿಯ ದೃಶ್ಯಗಳು (ಚಿಕಣಿ ಚಿತ್ರ) ...ಪುಟ ೪೫




ದನ ಮೇಯಿಸಲು ಹೊರಟ ಹುಡುಗರು ಹಾಗೂ ದನದ ಕೊಟ್ಟಿಗೆ (ಕವೆ-ಗುಜ್ಜು ಹಾಗೂ ಕಣ್ಣಿಯ ವಿನ್ಯಾಸ ಗಮನಿಸಿ) - (ಚಿಕಣಿ ಚಿತ್ರ) ...ಪುಟ ೩೮




ಮೊಘಲರ ಕಾಲದ ಕೋಟೆಗೋಡೆ ನಿರ್ಮಾಣ ತಂತ್ರಜ್ಞಾನ
(ಮೊಘಲ್‌ಶೈಲಿ ವರ್ಣಚಿತ್ರ) ...ಪುಟ ೪೭




ಶಿವನ ನರ್ತನಕ್ಕೆ ವೈವಿಧ್ಯಮಯ ವಾದ್ಯಗಳು (ಚಂಬಾ ಶೈಲಿ ಚಿತ್ರ - ೧೯ನೆಯ ಶತಮಾನ)




ಸಿಂಧೂನಾಗರಿಕತೆಯ ಒಂದು
ಜೇಡಿಮಣ್ಣಿನ ಪ್ರತಿಮೆಯ ಅವಶೇಷ



ಮಣಿಸರವೇ ಮೇಲುಡುಗೆಯಾದ
ಹಾಲಕ್ಕಿ ಒಕ್ಕಲಿಗ ಮಹಿಳೆ



ರವಿಕೆ ತೊಡದ ಬುಡಕಟ್ಟು ಮಹಿಳೆಯರು ...ಪುಟ ೧೭



ಹಾವಾಡಿಗನ ಹಾವು-ಮುಂಗುಸಿ ಕಾಳಗ (ಕ್ರಿ.ಶ. ೧೭೬೦ರ ಬುಂದಿ ಶೈಲಿ ಚಿತ್ರ)
ನೆಲಕ್ಕೆ ಹಾಸಿದ ಬಣ್ಣದ ಬಿಲ್ಲೆ (ಟೈಲ್ಸ್)ಗಳನ್ನೂ ಗಮನಿಸಿರಿ ...ಪುಟ ೫೪



‘ಒಂಟೆ-ನಗಾರಿ’ - ಸೋಮನಾಥಪುರ ಕೇಶವ ದೇವಾಲಯದ ಶಿಲ್ಪ




ಬಸವನ ನಗಾರಿ - (ದಂಡಿನಶಿವರದ ಹೊನ್ನಾದೇವಿ ಉತ್ಸವ) ...ಪುಟ ೮೬




ಸೋಮನಾಥಪುರದ ಕೇಶವದೇವಾಲಯದ
ಒಂದು ಶಿಲ್ಪ



ಆಧುನಿಕ ಕಾಲದ ಕಿನ್ನರಿ-ಜೋಗಿ ...ಪುಟ ೮೨



ಹಕ್ಕಿಮೂಳೆಯ ಪೀಪಿ (ರಷ್ಯಾ-ಕ್ರಿ.ಪೂ.
೨ನೆಯ ಮಿಲಿನಿಯಂ) ... ಪುಟ ೮೭



೩೦,೦೦೦ ವರ್ಷಗಳ ಹಿಂದಿನ
ದಂತದ ಕೊಳಲು ... ಪುಟ ೮೮

ಪ್ರಾಚ್ಯ ಜಾನಪದ

'ಜಾನಪದ'ವೆಂಬುದು ಹಳೆಯದು ; ಗ್ರಾಮೀಣರಲ್ಲಿ ಅದರಲ್ಲೂ ಅನಕ್ಷರಸ್ಥರಲ್ಲಿ ಮಾತ್ರ ಕಾಣಬರುವಂತಹದ್ದು - ಎಂಬ ಭಾವನೆ ಅಧ್ಯಯನಕಾರರಲ್ಲಿ ಈ ಹಿಂದೆ ಸರ್ವವ್ಯಾಪಕವಾಗಿತ್ತು. ಅಧ್ಯಯನ ಸಾಗಿದಂತೆ, ಆಧುನಿಕ ಕಾಲದಲ್ಲೂ, ನಗರವಾಸಿಗಳ ಬದುಕಿನಲ್ಲೂ ಜಾನಪದ ಪ್ರವೃತ್ತಿ ವಿವಿಧ ರೂಪಗಳಲ್ಲಿ ಜೀವಂತವಾಗಿರುತ್ತದೆ - ಎಂಬುದನ್ನು ಸಾಧಿಸಿ ತೋರಿಸಲಾಯಿತು. 'ಕಾಲೇಜು ಜಾನಪದ', 'ಕಾರ್ಖಾನೆ ಜಾನಪದ'ಗಳಂತಹ ಪರಿಕಲ್ಪನೆಗಳು ಈ ಹಿನ್ನೆಲೆಯವು ಎಂಬುದನ್ನು ಇಲ್ಲಿ ಸ್ಮರಿಸಬಹುದು.

'ಜಾನಪದ' ವೆಂಬುದು ತೋಂಡಿ ರೂಪದ್ದು. ಅಂದರೆ, ಅದು ಬಾಯಿಂದ ಬಾಯಿಗೆ, ಒಬ್ಬರಿಂದ ಒಬ್ಬರಿಗೆ ಹರಡುವಂತಹದ್ದು ; ತೋಂಡಿಯಲ್ಲೇ ಇರುವಂತಹದ್ದು, ಅದು ಅಲಿಖಿತವಾದುದು. ಅಂದರೆ, ಅದು ಬರಹ ರೂಪದಲ್ಲಿ ಇರಲಾರದು; ಆದ್ದರಿಂದ, 'ಜಾನಪದ'ಕ್ಕೆ ಪ್ರಾಚೀನ ದಾಖಲೆಗಳು ಇರುವುದಿಲ್ಲ ಎಂಬ ನಂಬಿಕೆಗಳೂ ತೀರಾ ಈಚಿನವರೆಗೂ ನಮ್ಮ ವಿದ್ವಾಂಸರಲ್ಲಿ ಇದ್ದವು. ಆದರೆ, ಮತ್ತೆ ಜಾನಪದವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದ ವಿದೇಶೀ ವಿದ್ವಾಂಸರು ಜಾನಪದ ಪ್ರವೃತ್ತಿ ಆಧುನಿಕ ಬದುಕಿನಲ್ಲಿ ಲಿಖಿತ ರೂಪದಲ್ಲೂ ಜೀವಂತವಾಗಿರುವುದನ್ನು ತೋರಿಸಿಕೊಟ್ಟರು.

ಇಷ್ಟಾಗಿಯೂ 'ಜಾನಪದ' ಕುರಿತ ನಮ್ಮ ತಿಳುವಳಿಕೆಯ ಅಂಚುಗಳು ಇನ್ನೂ ವಿಸ್ತೃತಗೊಳ್ಳಬೇಕಾದ ಅಗತ್ಯವಿದೆ. ಈಗಿನ ನಮ್ಮ ಗ್ರಹಿಕೆಗಳು 'ಸಮಗ್ರ'ವಾದುವಲ್ಲ ಎಂಬುದು ಆಗಬೇಕಾದ ಅಧ್ಯಯನಗಳ ಸೂಚನೆಯೇ ಆಗುತ್ತದೆ.

ಉದಾಹರಣೆಗೆ 'ಲಿಖಿತ ಜಾನಪದ' ಕುರಿತು ಮಾತನಾಡುವಾಗಲೂ ಒಟ್ಟಾರೆ ವಿದ್ವಾಂಸರು ಆಧುನಿಕ ಸಂದರ್ಭದ ಲಿಖಿತ ರೂಪಗಳನ್ನು ಕುರಿತೇ ಬಹುವಾಗಿ ಪ್ರಸ್ತಾಪಿಸುತ್ತಾರೆ. ಹೀಗಾಗಿ, ಜಾನಪದದ ಪ್ರಾಚೀನ ರೂಪಗಳ ಬಗೆಗೆ ನಾವು ಅಜ್ಞಾನಿಗಳಾಗಿಯೇ ಉಳಿಯುವಂತಾಗಿದೆ.

ಜಾನಪದ ತಲೆಮಾರಿನಿಂದ ತಲೆಮಾರಿಗೆ ಹರಿದುಬಂದರೂ ಮುಖ್ಯವಾಗಿ ಅದು ಬಾಯಿ - ಕಿವಿಗಳಲ್ಲೇ ಹರಿದಾಡುವುದರಿಂದ ಅರ್ಥಾತ್, ಅದನ್ನು ಬರವಣಿಗೆ ಇತ್ಯಾದಿ ರೂಪಗಳಲ್ಲಿ ದಾಖಲಿಸುವ ಪರಿಪಾಠ ಇರಲಿಲ್ಲವಾದುದರಿಂದ ನಾಲ್ಕೈದು ಸಾವಿರ ವರ್ಷಗಳಷ್ಟು ಅತಿ ಪ್ರಾಚೀನ ಕಾಲದ್ದು ಹೋಗಲಿ, ೫೦ - ೧೦೦ ವರ್ಷಗಳಷ್ಟು ತೀರಾ ಈಚಿನ ಕಾಲಮಾನದ ಜನಪದ ಬದುಕಿನ ವಿವಿಧ ರೂಪಗಳ ಸ್ವರೂಪ ಏನಾಗಿದ್ದಿತು - ಎಂಬುದನ್ನು ಗುರುತಿಸುವುದೂ ಅಧ್ಯಯನ ಮಾಡುವುದೂ ಅಸಾಧ್ಯವಾದುದೆಂಬ ಭಾವನೆ ಜಾನಪದ ಅಧ್ಯಯನಕಾರರಲ್ಲಿ ಸಾಮಾನ್ಯವಾಗಿದೆ. ತೀರಾ ಒಬ್ಬಿಬ್ಬರು 'ದಾಸ ಸಾಹಿತ್ಯದಲ್ಲಿ ಜಾನಪದ ಅಂಶಗಳು', 'ವಡ್ಡಾರಾಧನೆಯ ಜಾನಪದ ಅಧ್ಯಯನ'.... ಇಂತಹ ವಸ್ತುಗಳನ್ನು ಕುರಿತು ಅಭ್ಯಾಸ ಮಾಡಿದ್ದರೂ ತೀರಾ ಪ್ರಾಚೀನ ಕಾಲಮಾನದ - ಇತಿಹಾಸ ಪೂರ್ವದ - ಜನಪದ ಬದುಕನ್ನು ಕುರಿತು ಅರಿಯುವ ಸಾಹಸಕ್ಕೆ ಯಾರೂ ಕೈಹಾಕಿದ್ದಿಲ್ಲ. ಇದರ ಅರ್ಥ ಪ್ರಾಚೀನ ಮಾನವನ ಬದುಕು ಕುರಿತು ಯಾವ ಶೋಧನೆ - ಅಧ್ಯಯನಗಳೂ ಆಗಿಲ್ಲವೆಂದು ಅಲ್ಲ ; ಬಹಳಷ್ಟು ಆಗಿವೆ. ಆದರೆ, ಅವೆಲ್ಲವೂ ಬಹುವಾಗಿ ಆಯಾ ಕಾಲದ ಇತಿಹಾಸ, ರಾಜಕೀಯ, ಕಲೆ, ಸಂಸ್ಕೃತಿ.... ಇಂತಹ ವಸ್ತು - ವಿಷಯಗಳನ್ನೇ ಕೇಂದ್ರವಾಗಿ ಇಟ್ಟುಕೊಂಡಿವೆ. ಅಂದರೆ, ಅವೆಲ್ಲವೂ ಹೆಚ್ಚಾಗಿ ಮಾತನಾಡುವುದು ರಾಜರನ್ನು ಹಾಗೂ ಅವರನ್ನು ಅವಲಂಬಿಸಿದ ಮೇಲುವರ್ಗದವರ ಬದುಕನ್ನು ಕುರಿತು.

ರಾಜ ಇದ್ದ ಮೇಲೆ ಊಳಿಗದವರೂ ಇರಲೇಬೇಕು. ಶ್ರೀಮಂತರಿದ್ದ ಮೇಲೆ ರೈತಾಪಿ ಜನರೂ, ಕೂಲಿಕಾರರೂ ಇರಲೇಬೇಕು. ಹಾಗಿದ್ದರೆ, ಅವರ ಬದುಕು ಹೇಗಿತ್ತು ? ಅವರ ಉಡುಗೆ - ತೊಡುಗೆ, ಮನೆ - ಮಾರು ಹೇಗಿದ್ದವು?

ಆ ಕಾಲದಲ್ಲೂ ಗಂಡನಿಗೆ ಕಾಣದಂತೆ ಹೆಂಡತಿ, ಹೆಂಡತಿಗೆ ಕಾಣದಂತೆ ಗಂಡ 'ಹೊರಚಾಳಿ' ಹೋಗುವ ಅಭ್ಯಾಸ ಇಟ್ಟುಕೊಂಡಿದ್ದರೆ ? ಇದ್ದರೆ, ಯಾವ ನೆಪಗಳಲ್ಲಿ, ಎಂಥಾ ಸ್ಥಳಗಳಲ್ಲಿ ಇವರು ಸೇರುತ್ತಿದ್ದರು ?

ಗ್ರಾಮೀಣ ಜನಪದ ಬದುಕಿನ ಅವಿಭಜಿತ ಭಾಗವಾದ ಹಾವಾಡಿಗರು, ದೊಂಬರು ಹಿಂದೆ ಇದ್ದರೇ ? ಹಾಗಿದ್ದರೆ, ಆಗ ಅವರು ಜನಾಕರ್ಷಣೆಗಾಗಿ ತೋರುತ್ತಿದ್ದ ಚಮತ್ಕಾರಗಳಾವುವು ? ಪ್ರದರ್ಶನ ಸ್ಥಳ, ವೇಷ - ಭೂಷಣ ಹೇಗಿರುತ್ತಿದ್ದವು ? ಈಗಿನ ಹರೆ- ತಮಟೆ, ಕೊಂಬು - ಕಹಳೆಯಂತಹ ವಾದ್ಯಗಳು ಎಷ್ಟು ಹಿಂದಿನವರೆಗೂ ಇದ್ದವು ? ಅವುಗಳ ಸಹವಾದ್ಯಗಳು ಯಾವುವು ? ಆಗ ಅವುಗಳನ್ನು ಹೇಗೆ ನುಡಿಸುತ್ತಿದ್ದರು ? ಸಾವಿರಾರು ವರ್ಷಗಳ ಹಿಂದಿನಿಂದ ಈವರೆಗಿನ ಈ ಸುದೀರ್ಘ ಅವಧಿಯಲ್ಲಿ ಆ ವಾದ್ಯಗಳ ಆಕಾರದಲ್ಲಾಗಲೀ, ವಾದನದ ಕ್ರಮದಲ್ಲಾಗಲೀ ಏನಾದರೂ ವ್ಯತ್ಯಾಸ ಆಗಿವೆಯೇ ? ಇಂದಿನ ಜನಪದ ವರ್ಗವನ್ನು ಕಾಡುವ ಹೇನು, ಕೂರೆಗಳಾಗಲೀ, ಕೀಲು ನೋವಿನಂತಹ ಭಯಂಕರ ರೋಗವಾಗಲೀ, ಹತ್ತಾರು ಸಾವಿರ ವರ್ಷಗಳ ಹಿಂದಿನ ಜನವರ್ಗವನ್ನು ಕಾಡುತ್ತಿದ್ದವೇ ? - ಇಂತಹ ನೂರಾರು ಕುತೂಹಲಕರವಾದ ಪ್ರಶ್ನೆಗಳಿಗೆ ಉತ್ತರ ಬೇಡವೇ ? ಖಂಡಿತಾ ಬೇಕು.

ನಿಜ. ಜಾನಪದದ ಪ್ರಾಚೀನ ಭಾಷಿಕ ಬಗೆಗಳನ್ನು ನಾವಿಂದು ಯಥಾವತ್ತಾಗಿ ಕಿವಿಯಾರ ಕೇಳಲು ಸಾಧ್ಯವಾಗುವುದಿಲ್ಲ. ಆದರೆ, ಜಾನಪದಕ್ಕೆ ಭೌತಿಕ ರೂಪ ಎಂಬುದೂಇದೆಯಲ್ಲಾ ? ಅದರ ಸ್ಥಿತಿ - ಗತಿಗಳನ್ನು ಅಭ್ಯಾಸ ಮಾಡುವುದೂ ಪ್ರಾಚೀನ ಜಾನಪದದ ಒಂದು ಮುಖ್ಯ ಅಧ್ಯಯನವೇ ಆಗುತ್ತದೆಯಲ್ಲಾ ? ಈ ದೃಷ್ಟಿಯಿಂದ ಪ್ರಾಚ್ಯ ಜಾನಪದದ ಅಧ್ಯಯನ ಅಗತ್ಯವಾಗಿ ಆಗಬೇಕಾಗಿದೆ.

ಇದೊಂದು ಮಹತ್ವದ ಅಧ್ಯಯನ ವಿಧಾನವಾದರೂ ಇಂಗ್ಲಿಷ್‌ನಲ್ಲಾಗಲೀ, ನಮ್ಮಲ್ಲಾಗಲೀ ಯಾರೂ ಈ ಅಗತ್ಯದ ಬಗೆಗಾಗಲೀ, ಅಧ್ಯಯನದ ರೀತಿ ಕುರಿತಾಗಲೀ ತಿಳಿಸಿಕೊಡುವ ಪ್ರಯತ್ನ ಮಾಡಿದ್ದು ಕಂಡು

ಬಂದಿಲ್ಲ. ಮೊದಲೇ ಹೇಳಿದಂತೆ ಪ್ರಾಚೀನ ಆಕರಗಳನ್ನು ಇಟ್ಟುಕೊಂಡು ಆಗಿರುವ ಅಭ್ಯಾಸಗಳು ವಿಶೇಷವಾಗಿ ಮೇಲುವರ್ಗವನ್ನು ಕುರಿತಾದವು ; ಅದೂ ಇಂಗ್ಲಿಷ್‌ನಂತಹ ಭಾಷೆಯಲ್ಲೇ ಹೊರತು ಕನ್ನಡದಲ್ಲಿ ತೀರಾ ವಿರಳವಾಗಿ, ಆಂಶಿಕವಾಗಿ ಮಾತ್ರ ಆಗಿವೆ. ಹೀಗಾಗಿ ಅದೊಂದು ಕೊರತೆಯಾಗಿಯೇ ಉಳಿದಿದೆ.

ಜಾನಪದ ಅಧ್ಯಯನ ಸೂಕ್ಷ್ಮವೂ, ವ್ಯಾಪಕವೂ ಆದಂತೆಲ್ಲಾ ನಮ್ಮ ಹಿಂದಿನ ಅಧ್ಯಯನಗಳ 'ದೋಷ'ಗಳೂ, ಕೊರತೆಗಳೂ ಕಾಣಿಸಿಕೊಳ್ಳತೊಡಗುತ್ತವೆ. ಅಧ್ಯಯನದಲ್ಲಿ ತನ್ನನ್ನು ವಿಶೇಷವಾಗಿ ತೊಡಗಿಸಿಕೊಂಡ, ಸೂಕ್ಷ್ಮಜ್ಞಾನದ ವಿದ್ವಾಂಸನಿಗೆ ಅಂತಹ ಕೊರತೆಗಳ ಜೊತೆಗೆ ಅವುಗಳನ್ನು ಸರಿಪಡಿಸಬಹುದಾದ ಹೊಸಹೊಸ ಸಾಧ್ಯತೆಗಳು ಗೋಚರವಾಗುತ್ತವೆ. ಅಧ್ಯಯನವೆಂಬುದು ಕಾಲದಿಂದ ಕಾಲಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಬೆಳೆಯುತ್ತಾ ಹೋಗುವ ಒಂದು ಮೌಲಿಕ ಪ್ರಕ್ರಿಯೆ, ಅಲ್ಲವೇ ?

ಈ ಹಿನ್ನೆಲೆಯಲ್ಲಿ, ಪ್ರಾಚೀನ ಜನಪದ ಬದುಕನ್ನು ಪುನರ್ ರಚಿಸಿ ಕೊಳ್ಳುವ ಒಂದು ಹೊಸ ಸಾಧ್ಯತೆಯಾಗಿ ಪ್ರಸ್ತುತದ 'ಪ್ರಾಚ್ಯ ಜಾನಪದ' ಎಂಬ ಪರಿಕಲ್ಪನೆಯನ್ನು ರೂಪಿಸಿಕೊಳ್ಳಲಾಗಿದೆ. ವಿದ್ವಾಂಸರ ಹೆಚ್ಚಿನ ಪರಿಶೀಲನೆ ಹಾಗೂ ಚರ್ಚೆಗಾಗಿ ಈ ಅಧ್ಯಯನ ವಿಧಾನದ ಸ್ವರೂಪ, ಅದರ ವ್ಯಾಪ್ತಿ.... ಇತ್ಯಾದಿಗಳನ್ನು ಇಲ್ಲಿ ವಿವರಿಸ ಬಯಸುತ್ತೇನೆ.

ಪ್ರಾಚೀನ ಆಕರಗಳು ಇಂದಿನ ಜನಪದ ಬದುಕಿನ ಸ್ಥಿತಿ-ಗತಿಗಳ 'ಮೂಲ ಮಾತೃಕೆ' ಗಳಾಗಿಯೂ ಕಾರ್ಯನಿರ್ವಹಿಸುತ್ತವೆ. ಆದ್ದರಿಂದ, ಅಂಥವುಗಳನ್ನು ಆಧರಿಸಿ ನಡೆವ 'ಪ್ರಾಚ್ಯ ಜಾನಪದ ಅಧ್ಯಯನ' ಜನಪದ ಸಂಸ್ಕೃತಿಯ ಪ್ರಾಚೀನತೆಯನ್ನು ಅಧಿಕೃತಗೊಳಿಸುತ್ತದೆ.

'ಪ್ರಾಚ್ಯ ಜಾನಪದ ಅಧ್ಯಯನ' ಎಲ್ಲ ರೀತಿಯ ಪ್ರಾಚೀನ ಆಕರಗಳನ್ನು ಆಧರಿಸಿ ನಡೆಯುವಂತಹದ್ದು. ಈ ಆಕರಗಳ ಪ್ರಾಚೀನತೆಗೆ ಕಾಲಮಿತಿ ಇಲ್ಲ.

ಅವು ಕನಿಷ್ಠ ಒಂದು ದಶಕದಷ್ಟು ಹಿಂದಿನಿಂದ ಹಿಡಿದು ಕ್ರಿ. ಪೂ. ೪-೫ ಸಾವಿರದಷ್ಟು ಅಥವಾ ಅದಕ್ಕೂ ಹಿಂದಿನದೂ ಆಗಬಹುದು. ನಮ್ಮ ಅಧ್ಯಯನಕ್ಕೆ ಅಗತ್ಯವಾದ ಮಾಹಿತಿ ಹೊಂದಿದ ಅಂತಹ ಯಾವುದೇ ವಸ್ತು ವಿಚಾರ ನಮಗೆ ಅಮೂಲ್ಯ ಆಕರವಾಗುತ್ತದೆ. ಪ್ರಸ್ತುತ ಜೀವಂತವಿಲ್ಲದ ಅಥವಾ / ಹಾಗೂ ಸದ್ಯದ ರೂಪಕ್ಕೆ ಭಿನ್ನವಾಗಿರುವ ಅದರ ಗುಣ ಅಧ್ಯಯನ ಸಂದರ್ಭದಲ್ಲಿ ಗಮನಾರ್ಹವಾಗುತ್ತದೆ. ಆಕಸ್ಮಿಕವಾಗಿ ಅದು ಇಂದಿನ 'ರೂಪ'ವನ್ನೇ ಹೋಲುತ್ತಿದ್ದರೂ ತೌಲನಿಕ ಅಧ್ಯಯನದಲ್ಲಿ ಇದಕ್ಕೂ ಮೌಲಿಕತೆ ಇದ್ದೇ ಇರುತ್ತದೆ. ಏನೆಲ್ಲಾ ಸಾಂಸ್ಕೃತಿಕ ಸಂಘರ್ಷ, ಏಳು ಬೀಳುಗಳ ನಡುವೆಯೂ ಪ್ರಾಚೀನವಾದುದು 'ಹಾಗೇ' ಉಳಿದಿದ್ದರೆ, ಅದು ಅದರ ಅನನ್ಯತೆಯ ಲಕ್ಷಣವೇ ಆಗುತ್ತದೆ.

ಇಂತಹ ದಾಖಲೆಗಳೆಂದರೆ ಉತ್ಖನನವೇ ಮೊದಲಾದ ಪುರಾತತ್ವ ಶೋಧನೆಗಳಲ್ಲಿ ಕಂಡುಬಂದ ನಿವೇಶನ ಮಾದರಿಗಳು, ಸಮಾಧಿಗಳು, ಪಾತ್ರೆ - ಪಡಗಗಳು, ಆಯುಧಗಳು, ಆಟಿಕೆಗಳು, ಮುದ್ರಿಕೆಗಳು, ನಗ - ನಾಣ್ಯಗಳು, ಗುಹಾಚಿತ್ರ, ಭಿತ್ತಿ ಚಿತ್ರ, ಚಿಕಣಿ ಚಿತ್ರ ಮೊದಲಾದ ಪ್ರಾಚೀನ ವರ್ಣ ಚಿತ್ರಗಳು, ಶಿಲ್ಪಗಳು, ಕರಕುಶಲ ವಸ್ತುಗಳು, ಪ್ರವಾಸೀ ಬರಹಗಳು, ಪತ್ರಾಗಾರ ಇಲಾಖೆಯ ದಾಖಲೆಗಳು, ಗ್ಯಾಸೆಟಿಯರ್‌ಗಳು, ಶಾಸನಗಳು, ನಿಘಂಟುಗಳು, ಕೋಶಗಳು, ಕೈಫಿಯತ್ತುಗಳು, ಪ್ರಾಚೀನ ಶಾಸ್ತ್ರ - ಸಾಹಿತ್ಯ ಕೃತಿಗಳು, ದಶಕಗಳ ಹಿಂದಿನ ವಿವಾಹ, ನಾಮಕರಣ ಮೊದಲಾದ ಆಚರಣೆಗಳ ಸಂದರ್ಭದ ಛಾಯಾ ಚಿತ್ರಗಳು, ವಿಡಿಯೋ ಟೇಪುಗಳು.... ಹೀಗೆ ಇವುಗಳ ಪಟ್ಟಿಯನ್ನು ಬೆಳೆಸಬಹುದು.

ಒಟ್ಟಾರೆ ಗಮನಿಸಬೇಕಾದುದೆಂದರೆ - ಇಲ್ಲಿ ಪರಾಮರ್ಶಿತವಾಗುವ ದಾಖಲೆಗಳು 'ಪ್ರಾಚ್ಯ'ತನವನ್ನು ಹೊಂದಿರಬೇಕು. ಅವು ಹಳತಾದಷ್ಟೂ ಅವುಗಳ ಮೌಲಿಕತೆ (Antique value) ಅಧಿಕವಾಗುತ್ತದೆ. ಇಂತಹ ಪ್ರಾಚ್ಯ ಆಕರಗಳ ಉಲ್ಲೇಖ / ಪರಾಮರ್ಶನವಿರದ ಅಧ್ಯಯನ 'ಪ್ರಾಚ್ಯ ಜಾನಪದ ಅಧ್ಯಯನ'

ಎನಿಸಲಾಗದು - ಎಂಬುದನ್ನು ಅಗತ್ಯ ಗಮನಿಸಬೇಕು. ಹಾಗೆಂದಾಗ ಸಮಕಾಲೀನ ರೂಪಗಳು / ದಾಖಲೆಗಳುಈ ವಿಭಾಗದಲ್ಲಿ ಅನರ್ಹ ಅಥವಾ ನಿರುಪಯುಕ್ತವೆಂದಲ್ಲ. ಅವುಗಳನ್ನು ಯಥೋಚಿತವಾಗಿ ತೌಲನಿಕ ಅಧ್ಯಯನಕ್ಕೆ ಸಮರ್ಥವಾಗಿ ಬಳಸಿಕೊಳ್ಳುವ ಅಗತ್ಯ ಬಹಳವಾಗಿರುತ್ತದೆ. 'ಪ್ರಾಚ್ಯ ಜಾನಪದ' ಹಾಗೂ 'ಆಧುನಿಕ ಜಾನಪದ'ಗಳು ಕಾಲಮಾನದ ದೃಷ್ಟಿಯಿಂದ ಪರಸ್ಪರ ಭಿನ್ನ ಎನ್ನಿಸಬಹುದೇ ಹೊರತು ಸಮಕಾಲೀನ ಜಾನಪದದ ಅಧ್ಯಯನಕ್ಕೆ ಪ್ರಾಚ್ಯ ಜಾನಪದ ಪೂರಕವಾಗಿಯೇ ಇರುತ್ತದೆ ಎಂಬುದನ್ನು ಮರೆಯಬಾರದು.

ಪ್ರಾಚೀನವಾದುದು ಮಾತ್ರ 'ಜಾನಪದ' ಎಂಬ ನಂಬಿಕೆ 'ಪ್ರಾಚ್ಯ ಜಾನಪದ'ದ್ದಲ್ಲ. ಬದಲಿಗೆ, ಈವರೆಗೆ ನಿರ್ಲಕ್ಷಿತವಾದ ಪ್ರಾಚೀನ ಆಕರಗಳನ್ನು ಜಾನಪದ ಅಧ್ಯಯನಕ್ಕೂ ಹೇಗೆ ಬಳಸಿಕೊಳ್ಳಬಹುದು - ಎಂಬುದನ್ನು ಸಾಧಿಸಿ ತೋರಿಸುವುದು. ಅಲ್ಲದೆ, ಜಾನಪದ ಅಧ್ಯಯನದ ಆಯಾಮವನ್ನು ವಿಸ್ತರಿಸುವ ಅಕಾಡೆಮಿಕ್ ಉದ್ದೇಶವನ್ನೊಳಗೊಂಡಿದ್ದು. ಇದರ ಮೂಲಕ ಈವರೆಗೆ ಪ್ರತ್ಯೇಕವಾಗಿಯೇ ಉಳಿದಿರುವ ಇತಿಹಾಸ, ಮಾನವಶಾಸ್ತ್ರ, ಪುರಾತತ್ವಶಾಸ್ತ್ರ, ವಾಸ್ತು, ಚಿತ್ರ, ಶಿಲ್ಪ ಮೊದಲಾದ ಮಾನವಿಕಗಳೊಂದಿಗೆ ಬಾಂಧವ್ಯ ಬೆಳೆಸುವುದೂ ಆಗಿದೆ. ಈಗಾಗಲೇ ಬೆಳೆದಿರುವ ಈ ಪ್ರೌಢ ಮೂಲಗಳಿಂದ ಅಗತ್ಯ ಸತ್ವವನ್ನು ಹೀರಿ ಜಾನಪದ ವಿಜ್ಞಾನವೂ ಸದೃಢವಾಗಿ ಬೆಳೆಯುತ್ತದೆ - ಎಂಬುದರಲ್ಲಿ ಅನುಮಾನ ಇರಲಾರದು. 'ಜಾನಪದ'ವನ್ನು ವಿಶಾಲ ಅರ್ಥದಲ್ಲಿ ಪರಿಗಣಿಸಿದಾಗಲಂತೂ ಪ್ರಾಚ್ಯ ಆಕರಗಳು ಜಾನಪದ ಅಧ್ಯಯನದಲ್ಲಿ ಹೊಸ ಸಾಧ್ಯತೆಗಳೇ ಆಗುತ್ತವೆ. ಏಕೆಂದರೆ, ಇತಿಹಾಸ ಪೂರ್ವಕಾಲದ ಬದುಕಿನಲ್ಲಿ ಬುಡಕಟ್ಟು, ಗ್ರಾಮೀಣ, ನಾಗರಿಕ, ಜನಪದ..... ಈ ಒಂದೊಂದೂ ಕಣ್ಣಿಗೆ ಕಟ್ಟುವಷ್ಟು ಢಾಳಾಗಿ ತೀರಾ ಭಿನ್ನವಾಗಿದ್ದವು ಎಂದು ಹೇಳುವುದು ಕಷ್ಟ (ಇಂದೂ ಇವುಗಳನ್ನು ಗೆರೆ ಎಳೆದಂತೆ ಪ್ರತ್ಯೇಕಿಸುವುದು ಕಷ್ಟ ಅಲ್ಲವೇ). ಆದಿಮ ಬದುಕಿನಲ್ಲಂತೂ ಎಲ್ಲವೂ 'ಒಂದೇ' ಆಗಿತ್ತು. ಹೀಗಾಗಿ ಅಂದಿನ ಆಕರಗಳಲ್ಲಿ ಈ ಒಂದೊಂದನ್ನು ಪ್ರತ್ಯೇಕಿಸಿ ನೋಡುವುದೂ ಕಷ್ಟವಾದೀತು. ಹಾಗೆಂದು, ನಾವು ಅಧೀರರಾಗುವ, ಕೈಚೆಲ್ಲಿ ಕೂರುವ ಅಗತ್ಯವೂ ಇಲ್ಲ. ಪ್ರಾಚ್ಯ ಆಕರಗಳ

ಸಾಂಸ್ಕೃತಿಕ ಅಂಶಗಳಲ್ಲಿ ಆ ಕಾಲದ ಜನಪದ ಬದುಕಿನ ಎಳೆಗಳು ಬಹಳ ಸಂದರ್ಭಗಳಲ್ಲಿ ಸ್ವಯಂ ಗೋಚರವಾಗುವಂತಿರುತ್ತವೆ. ಆದ್ದರಿಂದ 'ಪ್ರಾಚ್ಯ ಜಾನಪದ' ಎಂಬ ಈ ನೂತನ ಅಧ್ಯಯನ ವಿಧಾನದಲ್ಲಿ ಗತಕಾಲದ ಜನಪದ ಬದುಕನ್ನು ಕುರಿತು ಅಭ್ಯಾಸ ಮಾಡುವುದು ಅಸಾಧುವೂ ಅಲ್ಲ, ಅಸಾಧ್ಯವೂ ಆಗಲಾರದು.

ಇತಿಹಾಸ ಪೂರ್ವಕಾಲದ ಆಕರಗಳಲ್ಲಿ ಜಾನಪದ, ಗ್ರಾಮೀಣ, ನಾಗರಿಕ ಅಥವಾ ಬುಡಕಟ್ಟಿನ ಬದುಕೆಂಬುದನ್ನು ಎಲ್ಲಾ ಸಂದರ್ಭಗಳಲ್ಲಿ ವಿಭಾಗೀಕರಿಸಿ ನೋಡುವುದು ಸಾಧ್ಯವೂ ಅಲ್ಲ, ಸಾಧುವೂ ಅಲ್ಲ. ಆದಿಮ ಬದುಕಿನಲ್ಲಿ ಎಲ್ಲವೂ ಒಂದೇ ಆಗಿತ್ತು. ಅರ್ಥಾತ್ ಆದಿಮಕ್ಕೆ ಹೊರತಾದುದು ಯಾವುದೂ ಇರಲಿಲ್ಲ. ಜೊತೆಗೆ, ಆ ಕಾಲದ ಬದುಕಿಗೆ ಸಂಬಂಧಿಸಿ ಲಭ್ಯವಾಗುವ ಆಕರಗಳೇ ಸೀಮಿತವಾದುವಾದುದರಿಂದ ಆ ಬದುಕಿನ ಎಲ್ಲ ಮಗ್ಗುಲುಗಳನ್ನೂ ಗ್ರಹಿಸುವದೂ ಆಗದ ಮಾತು.

ಜಾನಪದದ ಎಲ್ಲ ಅಂಗಗಳನ್ನು ಪ್ರಾಚ್ಯ ಪಳೆಯುಳಿಕೆಗಳಲ್ಲಿ ಗುರುತಿಸಲಾಗುವುದಿಲ್ಲ ನಿಜ. ಆದರೆ, ಪ್ರಾಚ್ಯ ಆಕರಗಳಲ್ಲಿ ಅಡಕವಾಗಿರುವ ಎಷ್ಟೋ ಸಾಂಸ್ಕೃತಿಕ ಅಂಶಗಳಲ್ಲಿ ಆ ಕಾಲದ ಜಾನಪದೀಯ ಬದುಕಿನ ಎಳೆಗಳೂ ಇರುತ್ತವೆ ಎಂಬುದು ಸುಳ್ಳಲ್ಲ. 'ಜಾನಪದ'ವನ್ನು ವಿಶಾಲ ಅರ್ಥದಲ್ಲಿ ಪರಿಗಣಿಸಿದಾಗಲಂತೂ ಈ ಸಾಮಗ್ರಿಗಳು ಜಾನಪದ ಅಧ್ಯಯನದಲ್ಲಿ ಹೊಸ ಸಾಧ್ಯತೆಗಳೇ ಆಗುತ್ತವೆ.

ಉತ್ಖನನವೇ ಮೊದಲಾದ ಪ್ರಾಚ್ಯ ಆಕರಗಳಲ್ಲಿ ದೊರೆಯುವ ಪಾತ್ರೆಗಳು, ಆಯುಧಗಳು, ಆಟಿಕೆಗಳು, ನಿವೇಶನ, ಸಮಾಧಿ ಮಾದರಿಗಳು, ಚಿತ್ರ - ಶಿಲ್ಪಗಳಲ್ಲಿ ಅಭಿವ್ಯಕ್ತವಾದ ಉಡುಪು, ಆಚರಣೆ, ಚಟುವಟಿಕೆಗಳು.... ಇವೆಲ್ಲ ಅಂದಂದಿನ ಭೌತಿಕ ಜಾನಪದದ ಮೇಲೆ ಸ್ಥೂಲ ಬೆಳಕು ಚೆಲ್ಲುವುದಲ್ಲದೆ, ಇಂದಿನ ಸ್ಥಿತಿಗತಿಗಳ ಮೂಲಮಾತೃಕೆಗಳಾಗಿಯೂ ಕೆಲಸಮಾಡುತ್ತವೆ. ನಿದರ್ಶನಕ್ಕೆ - ಜನಪದ ದೈವಗಳ ಮೂಲ ಮಾತೃಕೆಯೂ,

ದೈವಗಳಲ್ಲಿ ಪ್ರಧಾನವೂ ಆದ ಮಾತೃದೇವತೆಯ ಪ್ರಾಚೀನರೂಪ ನಮಗೆ ಹರಪ್ಪ ಸಂಸ್ಕೃತಿಯ ಪಳೆಯುಳಿಕೆಯಲ್ಲಿಯೇ ದೊರೆಯುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಪ್ರಾಚ್ಯ ಆಕರಗಳಲ್ಲಿ ಜನಪದ ಬದುಕಿಗೆ ಸಂಬಂಧಿಸಿ ದೊರೆಯುವ ವೈವಿಧ್ಯದ ಮಾಹಿತಿಗಳನ್ನು ಆಧರಿಸಿ ಎರಡು ರೀತಿಯ ಅಧ್ಯಯನ ಮಾಡಬಹುದು. ಒಂದು - ಆಕರವಾರು ಅಧ್ಯಯನ. ಅಂದರೆ, ಈ ಒಂದೊಂದೂ ಆಕರದಲ್ಲಿ ಕಂಡುಬರುವ ಜಾನಪದೀಯ ಅಂಶಗಳನ್ನು ಆಧರಿಸಿ ಅಭ್ಯಾಸ ಮಾಡುವುದು. ಉದಾಹರಣೆಗೆ - ವಚನಗಳಲ್ಲಿ ಜಾನಪದ ಅಂಶಗಳು, ಶಾಸನಗಳಲ್ಲಿ ಸ್ತ್ರೀ ಸಮಾಜ.... ಇತ್ಯಾದಿ. ಅಥವಾ, ಇನ್ನೂ ಸೀಮಿತಗೊಳಿಸಿ ಕೊಂಡು ಒಂದೇ ನಿರ್ದಿಷ್ಟ ಅಂಶ ಕುರಿತೂ ಅಭ್ಯಸಿಸಬಹುದು. ಇನ್ನೊಂದು - ವಿಷಯವಾರು ವಿಸ್ತೃತ ಅಧ್ಯಯನ. ಅಂದರೆ, ಯಾವುದಾದರೊಂದು ಜಾನಪದೀಯ ವಿಷಯವನ್ನು ಆರಿಸಿಕೊಂಡು ಅದು ಕಾಲಕಾಲಕ್ಕೆ ವಿವಿಧ ಆಕರಗಳಲ್ಲಿ ಹೇಗೆ ವ್ಯಕ್ತಗೊಂಡಿದೆ ಎಂಬುದನ್ನು ಪರಸ್ಪರ ಹೋಲಿಸಿ ಅಧ್ಯಯನ ಮಾಡುವುದು. ಉದಾಹರಣೆಗೆ - 'ಬೇಟೆ' ವಿಷಯ ಕುರಿತು ಅತಿ ಪ್ರಾಚೀನ ಗುಹಾ ಚಿತ್ರಗಳಿಂದ ಹಿಡಿದು ಈಚೆಗಿನ ಆಕರಗಳನ್ನೆಲ್ಲಾ ಸೇರಿಸಿ ಅಧ್ಯಯನ ನಡೆಸುವುದು.

ಪ್ರಾಚ್ಯ ಜಾನಪದ ಅಧ್ಯಯನ ಯಶಸ್ವಿಯಾಗಬೇಕಾದರೆ ಎರಡು ಅಗತ್ಯಗಳು ತೀರಾ ಮುಖ್ಯ. ಒಂದು - ವಿವಿಧ ಮಾನವಿಕಗಳಿಗೆ ಸಂಬಂಧಿಸಿದ ವಿಪುಲವಾದ ಮಾಹಿತಿಗಳನ್ನು ಆಯಾ ಕ್ಷೇತ್ರದ ತಜ್ಞರು ಪ್ರಕಟಿಸಿರಬೇಕು. ಜಾನಪದ ಅಧ್ಯಯನಕಾರ ಅಂತಹ ಅಧಿಕೃತ ಮಾಹಿತಿಗಳನ್ನೇ, ಆದಷ್ಟೂ ಹೆಚ್ಚಿನ ಸಂಖ್ಯೆಯಲ್ಲಿ ಪರಾಮರ್ಶನ ಮಾಡಬೇಕು.

ಎರಡನೆಯದಾಗಿ - ಪ್ರಾಚ್ಯ ಜಾನಪದ ಅಧ್ಯಯನವೆಂಬುದನ್ನು ಕೇವಲ ಅನ್ಯ ಶಿಸ್ತಿನ ಅಧ್ಯಯನ ಎನ್ನುವುದಕ್ಕಿಂತ 'ಬಹುಶಿಸ್ತಿನ'ನ (Multi Disciplinary) ಅಧ್ಯಯನ ಎನ್ನುವುದೇ ಸೂಕ್ತ. ಈ 'ಬಹು ಶಿಸ್ತು'ಗಳಲ್ಲಿ ಚಿತ್ರ, ಶಿಲ್ಪ,

ಛಾಯಾಗ್ರಹಣ, ಪುರಾತತ್ವ, ಮಾನವಶಾಸ್ತ್ರ, ಇತಿಹಾಸದಂತಹ ಶಾಖೆಗಳು ಮುಖ್ಯವಾಗಿರುತ್ತವೆ. ಆದ್ದರಿಂದ, ಪ್ರಾಚ್ಯ ಜಾನಪದ ಅಧ್ಯಯನಕಾರ ಈ ವಿವಿಧ ಅಧ್ಯಯನ ಶಿಸ್ತುಗಳಲ್ಲಿ ಸ್ವತಃ ಪರಿಶ್ರಮ ಇರುವವನಾಗಿರಬೇಕು. ಅಥವಾ ಅಂತಹ ಶಿಸ್ತುಗಳ ಬಗೆಗೆ ಸ್ಥೂಲ ಪರಿಚಯವುವನ್ನಾದರೂ ಹೊಂದಿದವನಾಗಿರಬೇಕು. ಆಗ ಮಾತ್ರ ಆತನಿಗೆ ಎಲ್ಲೆಲ್ಲಿ ಏನೇನನ್ನು ಶೋಧಿಸಬಹುದು, ಅರ್ಥಾತ್, ಯಾವ ಯಾವ ಮಾಹಿತಿಯನ್ನು ಎಲ್ಲೆಲ್ಲಿಂದ ದೊರಕಿಸಿಕೊಳ್ಳಬಹುದು ಎಂಬುದು ಸುಲಭವಾಗುತ್ತದೆ.

ಹೀಗಾಗಿ, ಇದೊಂದು ಬಹುತಜ್ಞತೆಯ ಅಧ್ಯಯನ ವಿಧಾನ. ಇದು ಹೆಚ್ಚು ಶ್ರಮ, ಕಾಲ ಹಾಗೂ ತಾಳ್ಮೆಯನ್ನು ನಿರೀಕ್ಷಿಸುವಂತಹದ್ದು.

ಬಹುಶಃ ಈ ಎಲ್ಲಾ ಕಾರಣಗಳಿಗಾಗಿಯೇ ಇರಬೇಕು, ನಮ್ಮ ಹಿಂದಿನ ಅಧ್ಯಯನಕಾರರಿಗೆ ಹೀಗೊಂದು ಅಧ್ಯಯನ ವಿಧಾನವನ್ನು ರೂಪಿಸಿಕೊಳ್ಳಬಹುದು ಎಂದು ಹೊಳೆಯದ್ದು. ಚಿತ್ರಕಲಾ ವಿದ್ಯಾರ್ಥಿಯೂ ಆಗಿದ್ದ ನನಗೆ ಸುಮಾರು ೧೫ ವರ್ಷಗಳ ಹಿಂದೆಯೇ ಇಂತಹ ಒಂದು ಹೊಸ ಅಧ್ಯಯನವನ್ನು ಪ್ರಾರಂಭಿಸಬಹುದೆಂದು 'ಜ್ಞಾನೋದಯ' ವಾದರೂ ನನಗಿದ್ದ ಸಲಕರಣೆ - ಸೌಲಭ್ಯಗಳ ಕೊರತೆಯಿಂದ ಅದನ್ನು ಲೇಖನ ರೂಪದಲ್ಲಿ ಕಾರ್ಯಗತಗೊಳಿಸಿ ತೋರಿಸಲು ಸಾಧ್ಯವಾಗಲಿಲ್ಲ. ಮುಂದೆ ಛಾಯಾಗ್ರಹಣವನ್ನು ಅಭ್ಯಾಸ ಮಾಡಿದ ಮೇಲೆ, ೧೯೯೪ರಲ್ಲಿ, ಬರೆದದ್ದೇ 'ಪ್ರಾಚೀನ ವಾದ್ಯಗಳು' ಲೇಖನ. ಆ ನಂತರವೂ ಮಾಹಿತಿ ಸಂಗ್ರಹ, ಅಧ್ಯಯನ ನಡೆದಂತೆ ಈ ಬಗೆಗೆ ಬೇರಾರೂ ಕೆಲಸ ಮಾಡಿಲ್ಲದ್ದೂ ಗಮನಕ್ಕೆ ಬಂದದ್ದಲ್ಲದೆ, ಇದನ್ನೊಂದು ಹೊಸ ಅಧ್ಯಯನ ವಿಧಾನವಾಗಿಯೂ ರೂಪಿಸಬಹುದು ಎಂಬುದೂ ಸ್ಪಷ್ಟವಾಗತೊಡಗಿತು. ಆ ಹಿನ್ನೆಲೆಯಲ್ಲಿ ಬರೆದದ್ದೇ "ಅಗತ್ಯ ಅಧ್ಯಯನದ ಪ್ರಾಚ್ಯ ಜಾನಪದ" ಲೇಖನ / (೧೯೯೨ರಲ್ಲಿ 'ಬಾಗಿಲು' ಕುರಿತ ಲೇಖನವೂ ಪ್ರಕಟವಾಗಿತ್ತು ಮಿಥಿಕ್ ಸೊಸೈಟಿಯಲ್ಲಿ 'ಪ್ರಾಚೀನ ಜಾನಪದ' ಕುರಿತು ಇತಿಹಾಸಜ್ಞ ಸೂರ್ಯನಾಥ ಕಾಮತ್ ಅವರು೨೭-೦೪-೨೦೦೧ರಂದು

ನನ್ನಿಂದ ಒಂದು ಸಾರ್ವಜನಿಕ ಉಪನ್ಯಾಸವನ್ನು ಏರ್ಪಡಿಸಿದ್ದರು). ಆದರೂ, ಒಂದು ಹೊಸ ಪರಿಕಲ್ಪನೆಯನ್ನು ಪ್ರಸ್ತುತಪಡಿಸುವಾಗ ಅದರ ಸ್ವರೂಪ, ವಿಧಿ - ವಿಧಾನ...... ಇತ್ಯಾದಿಗಳೆಲ್ಲವನ್ನೂ ಕ್ರಮಬದ್ಧವಾಗಿ, ಸೈದ್ಧಾಂತಿಕವಾಗಿ ನಿರೂಪಿಸುವುದು ವೈಜ್ಞಾನಿಕ ಅಧ್ಯಯನದ ಅಗತ್ಯವಾದುದರಿಂದ ಇಲ್ಲಿ ಆದಷ್ಟೂ ವಿವರವಾಗಿ ಅದರ ನೆಲೆ - ಹಿನ್ನೆಲೆಗಳನ್ನು ವಿಶದೀಕರಿಸಲಾಗಿದೆ. ವಿದ್ವಾಂಸರ ಅಧ್ಯಯನ, ಚರ್ಚೆಗಳ ಸಂದರ್ಭದಲ್ಲಿ ಅಗತ್ಯವೆನಿಸಿದಲ್ಲಿ ಹೆಚ್ಚಿನ ಸ್ಪಷ್ಟನೆ ನೀಡುವುದು ಕಷ್ಟವಾಗಲಾರದು.

ಪ್ರಸ್ತುತ ಇಲ್ಲಿ ಮಾದರಿಗಾಗಿ ಪ್ರಸ್ತಾಪಿಸಿರುವ 'ಬೇಟೆ' ಅಥವಾ ಯಾವುದೇ ವಿಷಯಕ್ಕೆ ಸಂಬಂಧಿಸಿ ನೀಡಿರುವ ಉಲ್ಲೇಖಗಳ ಬಗ್ಗೆ ಒಂದು ಸ್ಪಷ್ಟನೆ. ಈ ಸಂಗತಿಗಳ ಬಗೆಗೆ ವಿವಿಧ ಪ್ರಾಚ್ಯ ದಾಖಲೆಗಳಲ್ಲಿ ದೊರೆಯುವ ಮಾಹಿತಿಗಳು ಇಷ್ಟೇ ಎಂದು ಯಾರೂ ಭಾವಿಸಬೇಕಿಲ್ಲ. ದೊರೆತದ್ದು ಎಲ್ಲವನ್ನೂ ಇಲ್ಲಿ ಪ್ರಸ್ತಾಪಿಸಿಲ್ಲ. ಅಧ್ಯಯನಕಾರರು ಇನ್ನೂ ತಮ್ಮ ಗಮನಕ್ಕೆ ಬಂದಿರುವುದನ್ನು ಸೇರಿಸಿ - ಅವರವರ ಅಗತ್ಯಕ್ಕನುಗುಣವಾಗಿ - ಬೆಳೆಸಬಹುದು. ಹೀಗಾಗಿ, ಈ ಅಧ್ಯಯನಕ್ಕೆ 'ಕೊನೆ' ಎಂಬುದು ಇರದು.

ಇನ್ನೊಂದು ಅಂಶ : ಚಿದಾನಂದಮೂರ್ತಿ ಅವರು ಜಾನಪದ ಅಧ್ಯಯನದಲ್ಲಿ "ಪುರಾವಸ್ತು ಶಾಸ್ತ್ರ" (Antique lore) ಎಂಬ ವಿಚಾರ ಕುರಿತು ಅಧ್ಯಯನ ನಡೆಯಬೇಕಾದುದರ ಬಗ್ಗೆ ಅಭ್ಯಾಸಿಗಳ ಗಮನ ಸೆಳೆದಿದ್ದಾರೆ (ನೋಡಿ: ಚಿದಾನಂದ ಮೂರ್ತಿ ೧೯೯೩ : ೩೭೮-೮೦). 'ಪ್ರಾಚ್ಯ ಜಾನಪದ ಅಧ್ಯಯನ' ಪರಿಕಲ್ಪನೆಯು ಅದಕ್ಕಿಂತ ವಿಭಿನ್ನವಾದುದು, ವ್ಯಾಪಕವಾದುದು. ಇದರಲ್ಲಿ 'ಪುರಾವಸ್ತು ಶಾಸ್ತ್ರ' ಒಂದು ಉಪಾಂಗವಾಗಬಹುದು, ಅಷ್ಟೆ.

ಬೇಟೆ

ಆದಿಮಾನವನಿಗೆ ಬೇಟೆಯೇ ಮುಖ್ಯ ಜೀವನಾಧಾರವಾಗಿದ್ದಿತು. ಗ್ರಾಮೀಣ ಪ್ರದೇಶಗಳಲ್ಲಿ ಇಂದೂ 'ಬೇಟೆ' ಒಂದು ಹವ್ಯಾಸವಾಗಿ,

ಆಚರಣೆಯಾಗಿ ಉಳಿದಿದೆ. ಕೆಲವು ದೇವರುಗಳ 'ಜಾತ್ರೆ'ಗಳಲ್ಲಿ ಬೇಟೆ ಆಚರಣಾ - ಉತ್ಸವಗಳೂ ನಡೆಯುತ್ತವೆ. ಊರ ಜನ ವರ್ಷದ ನಿಗದಿತ ಕಾಲದಲ್ಲಿ ಸಾಂಪ್ರದಾಯಿಕವಾಗಿ ಬೇಟೆಗೆ ಹೊರಟಾಗ ಬೇಟೆ ಸಮೃದ್ಧವಾಗಿ ಆಗಲಿ, ಸುಲಭವಾಗಿ ಆಗಲಿ - ಎಂಬ ಆಶಯದಿಂದ ಕೆಲವೊಂದು ವಿಧಿಕ್ರಿಯೆಗಳನ್ನು ನಡೆಸುವ ರೂಢಿಯನ್ನು ಇಟ್ಟುಕೊಂಡಿದ್ದಾರೆ (ವಿವರಕ್ಕೆ ನೋಡಿ : ಗೋವಿಂದರಾಜು ೧೯೯೩ : ೨೬೧-೨೬೩).

ಕೆಲವೊಂದು ಬೇಟೆ ತಂತ್ರಗಳೂ ಕುತೂಹಲಕರವಾಗಿವೆ. ಆಹಾರ ಸಂಪಾದನೆಗೆ ಬೇಟೆಯನ್ನು ವಿಶೇಷವಾಗಿ ಅವಲಂಬಿಸಿದ 'ಹಕ್ಕಿ-ಪಿಕ್ಕಿ' ಯಂತಹ ಅಲೆಮಾರಿ ಜನರು ತಾವು ಬೇಟೆಯಾಡಬೇಕಾದ ಪಕ್ಷಿ ಅಥವಾ ಪ್ರಾಣಿಯಂತೆ ಅನುಕರಣ ದನಿ ಮಾಡಿ ಅವು ತಮ್ಮ ಸನಿಹ ಬರುವಂತೆ ಆಕರ್ಷಿಸುತ್ತಾರೆ. ಕೆಲವೊಮ್ಮೆ ಬೇಟೆಗಾರ ಬಟ್ಟೆ ಮತ್ತು ಸಣ್ಣ ಕಡ್ಡಿಗಳಿಂದ ಮಾಡಿದ ವಿಶೇಷ ರೀತಿಯ ಟೋಪಿ ಅಥವಾ ಮುಖವಾಡ ಹಾಕಿಕೊಂಡು ತನ್ನ ಪಳಗಿದ ಸಾಕುಪ್ರಾಣಿ ಹಸುವಿನ ಪಕ್ಕ ತಾನೂ ಜಾಣ್ಮೆಯಿಂದ ಅಡಗಿ ನಡೆಯುತ್ತಾನೆ. ಹುಲ್ಲುಗಾವಲಲ್ಲಿ ಈ ಹಸುವನ್ನು ಕಂಡ ಆ ವನ್ಯಜೀವಿ (ಹಸುವಿನ ಮೈಯ ಉಣ್ಣೆಗಳು ಅಥವಾ ಹುಲ್ಲಿನಿಂದ ಏಳುವ ಮಿಡತೆಯಂತಹ ಕೀಟಗಳನ್ನು ಆಯ್ದು ತಿನ್ನಲು ಬರುವ ಕೊಕ್ಕರೆ ಇತ್ಯಾದಿ) ಈತನನ್ನೂ ಒಂದು ಮಿಕವೆಂದೇ ಭ್ರಮಿಸಿ, ಹತ್ತಿರ ಬಂದು ಸುಲಭವಾಗಿ ಈತನ ಉರುಳಿಗೆ ಬಲಿಯಾಗುತ್ತದೆ.

ಇವೆಲ್ಲಾ ಪ್ರಾಚೀನ ಮಾನವನ ಬೇಟೆ ಬದುಕಿನ ಕೆಲವೊಂದು ಪಳೆಯುಳಿಕೆಗಳು ಎಂಬುದು ಊಹಿಸಬಹುದಾದ ಅಂಶ. ಆದರೆ, ಬೇಟೆಯನ್ನೇ ಮುಖ್ಯ ಜೀವನಾಧಾರ ಮಾಡಿಕೊಂಡಿದ್ದ ಆದಿ ಮಾನವನಲ್ಲೂ ಇಂತಹ ನಡವಳಿಗಳು ನಿಜಕ್ಕೂ ಇದ್ದವೇ ? ಅವನು ಎಂತಹ ಆಯುಧಗಳನ್ನು ಬಳಸುತ್ತಿದ್ದ ? ಭೇಟೆ ಬಗೆಗಿನ ಅವನ ನಂಬಿಕೆಗಳೇನು ? ತಂತ್ರಗಳೇನು ? .... ಇಂತಹ ಹಲವಾರು ಮೂಲಭೂತ ಪ್ರಶ್ನೆಗಳು ನಮ್ಮ ಎದಿರಾಗುತ್ತವೆ. ಇವುಗಳ ಬಗೆಗೆ ಹೇಳಲು ಆದಿ ಮಾನವ ನಮ್ಮ 'ಎದುರಿಗೆ' ಇಲ್ಲ ಅಥವಾ

ಅವನ ಕಥೆ ಹೇಳುವ 'ಆಗಿನ' ಪುಸ್ತಕಗಳೂ ಇಲ್ಲ (ಆಗ ಅಕ್ಷರಗಳೇ ಹುಟ್ಟಿರಲಿಲ್ಲ). ಹಾಗಿದ್ದರೆ, ನಮ್ಮ ಈಗಿನ ಜನಪದರ ಬೇಟೆ ಬದುಕಿನ ಆದಿಮ ರೂಪಗಳನ್ನು ಅರಿಯುವುದು ಹೇಗೆ ?

ಇದು ಅಸಾಧ್ಯವೆನಿಸಿದರೂ ಅಧ್ಯಯನ ಸಾಧ್ಯವಿದೆ. ದಾಖಲೆ ಇಲ್ಲದ ಜನಪದ ಬದುಕಿನ ಮೂಲ ದಾಖಲೆಗಳಾಗಿ ಗುಹಾ ಚಿತ್ರಗಳು ನಮಗೆ ಅಂದಿನ ಬದುಕನ್ನು ಕಣ್ಮುಂದೆ ಸ್ಪಷ್ಟವಾಗಿ ತೆರೆದಿಡುತ್ತವೆ.

ಆಗಿನ ಗುಹೆಗಳಲ್ಲಿ ವಿಶೇಷವಾಗಿ ಚಿತ್ರಿತವಾಗಿರುವ ಬೇಟೆಯ ಸನ್ನಿವೇಶಗಳನ್ನು ಗಮನಿಸಿದಾಗ ಅದಾಗಲೇ ಅವರಲ್ಲಿ ಸಮೂಹ ಜೀವನ ಆರಂಭವಾಗಿದ್ದಿತು. ಬೇಟೆಗೂ ಗುಂಪಾಗಿಯೇ ಹೋಗುತ್ತಿದ್ದರು. ಈಟಿ, ಬಾಣ, ಕೋಲು ಮೊದಲಾದ ಆಯುಧಗಳಿಂದ ಸುತ್ತುವರೆದು ಇವರು ಪ್ರಾಣಿಯ ಹತ್ಯೆ ಮಾಡುತ್ತಿದ್ದರು - ಎಂಬುದು ವೇದ್ಯವಾಗುತ್ತದೆ. ಈ ಪ್ರಾಣಿಗಳು ಬಹುವಾಗಿ ಜಿಂಕೆ, ಆನೆ, ಕಾಡೆಮ್ಮೆ ಮೊದಲಾದ ಸಸ್ಯಾಹಾರಿ ಸಸ್ತನಿಗಳಾಗಿ ಕಾಣಬರುತ್ತವೆ.

ಸು. ಕ್ರಿ. ಪೂ. ೩೦ ಸಾವಿರ ವರ್ಷಗಳಿಗೂ ಹಿಂದಿನ ಕಾಲದ ಇಂತಹ ಚಿತ್ರಗಳನ್ನು ಅಭ್ಯಾಸ ಮಾಡಿದ ವಿದ್ವಾಂಸರು ಸಾಮಾನ್ಯವಾಗಿ ಅಭಿಪ್ರಾಯ ಪಡುವಂತೆ - ಬೇಟೆಗೆ ಹೊರಡುವ ಮೊದಲು, ಸುಲಭವಾಗಿ ಬೇಟೆ ಕೈಗೂಡಲಿ ಎಂಬ ಮಹದಾಶಯದಿಂದ ಅವರು ಕೆಲ ವಿಧಿಕ್ರಿಯೆಗಳನ್ನು ನೆರವೇರಿಸುತ್ತಿದ್ದರು. ಪ್ರಾಣಿಯ ಚಿತ್ರ ಬರೆದು ಅದರ ಮೈಮೇಲೆ ಬಾಣಗಳಿಂದ ಚುಚ್ಚಿದರೆ, ಆ ಚಿತ್ರವೇ ಪ್ರಾಣಿಯಾಗಿ, ಬೇಟೆಯಲ್ಲಿ ಅದು ಸುಲಭವಾಗಿ ತಮ್ಮ ಬಾಣಕ್ಕೆ ಗುರಿಯಾಗುತ್ತದೆಂಬ ನಂಬಿಕೆ ಅವರದು. ಇದಲ್ಲದೆ, ತಾವು ಬೇಟೆಯಾಡಿದ ಪ್ರಾಣಿಯ ಚರ್ಮವನ್ನು ಹೊದೆದು ಅದೇ ಪ್ರಾಣಿಯ ಮೊಗವಾಡ ಧರಿಸಿ ಕುಣಿವ ಆಚರಣೆಯೂ ಅವರಲ್ಲಿತ್ತು. ಒಂದು ಚಿತ್ರದಲ್ಲಿ ಬೇಟೆಗಾರನೊಬ್ಬ ಜಿಂಕೆಯ ಚರ್ಮ ಹೊದೆದು, ಅದರದೇ ಮೊಗವಾಡಧರಿಸಿ, ಅದರದೇ ಕೊಂಬುಗಳನ್ನು ಹೊತ್ತು ಆ ಪ್ರಾಣಿಯನ್ನು ಅನುಕರಿಸುವಂತಿದೆ. ಅವನ ಒಂದು ಕೈಯಲ್ಲಿ 'ಚಿತ್ರ ಕೆತ್ತಿದ ಒಂದು ಮಂತ್ರದ ಕಡ್ಡಿ ಇದ್ದರೆ ಇನ್ನೊಂದು ಕೈಯಲ್ಲಿ ಮತ್ತೊಂದು

ಕೋಲಿದೆ. ಜೊತೆಗೆ ಇವನಂತೆ ಕೋಲು ಹಿಡಿದ ಉಳಿದವರೂ ಇದ್ದಾರೆ. ಹೀಗೆ ಅವರು ತಮ್ಮ ಬೇಟೆಯ ಪ್ರಾಣಿಯೊಂದರ ಸತ್ವವನ್ನು ತಮ್ಮಲ್ಲಿ ತುಂಬಿಕೊಂಡು ಪೂಜೆಯ ಕುಣಿತ ಕುಣಿದಿದ್ದಾರೆ. ಇದರಿಂದ ಪ್ರಾಣಿಗಳ ವಂಶ ಬೆಳೆದು ಅವು ತಮಗೆ ವಶವಾಗುತ್ತವೆಂಬ ನಂಬಿಕೆಯೂ ಇದೆ (ಶಿವರಾಮ ಕಾರಂತರ 'ಸಾಗರಿಕತೆಯ ಹೊಸ್ತಿಲಲ್ಲಿ' ಇಂದ ಉಲ್ಲೇಖ : ದೇರ್ಲ ೧೯೬೫ : ೩೪).

ಇದೊಂದು ರೀತಿ 'ಸಾದೃಶ ಮಾಟ'ದ ಪರಿಕಲ್ಪನೆಗೆ ಸಂಬಂಧಿಸಿದ ನಂಬಿಕೆ ಎನ್ನಬಹುದು ಅಥವಾ ಪ್ರಾಣಿಯ ವೇಷ ಧರಿಸಿ ನಟನೆ ಮಾಡುವಲ್ಲಿ, ಹಕ್ಕಿ - ಪಿಕ್ಕಿಗಳ ತಂತ್ರದಲ್ಲಿನಂತೆ ವನ್ಯಜೀವಿಯನ್ನು ಮರುಳು ಮಾಡಿ ಬೇಟೆಯಾಡುವ ಹವಣಿಕೆಯೂ ಇದ್ದಿರಬಹುದು.

ನಮ್ಮ ಈಗಿನ ಜನಪದರಲ್ಲಿನ ಒಂದು ಕುಶಲ ಬೇಟೆ ತಂತ್ರ ಎಂದರೆ ದೀಪದ ಬೇಟೆ : ತಮ್ಮ ಹಣೆಗೆ ಪ್ರಜ್ವಲವಾದ ಬೆಳಕು ಬೀರುವ ಬ್ಯಾಟರಿಗಳನ್ನು ಕಟ್ಟಿಕೊಂಡು ಬೇಟೆಯಾಡುವುದು. ರಾತ್ರಿಯಲ್ಲಿ ಮೇಯಲು ಬರುವ ಮೊಲ ಮೊದಲಾದ ಪ್ರಾಣಿಗಳ ಮೇಲೆ ಈ ಬೆಳಕು ಬಿದ್ದಾಗ, ಅವು ಕಣ್ಣು ಕೋರೈಸುವ ಆ ಬೆಳಕಿನ ಮೂಲವನ್ನೇ ದಿಟ್ಟಿಸುತ್ತಾ ಅಲುಗಾಡದೆ ನಿಂತುಬಿಡುತ್ತವೆ. ಬೆಳಕಿನ ಹಿಂದಿನ ಕತ್ತಲೆಯಲ್ಲಿ ಕಾಣದೆ, ನಿಶ್ಯಬ್ದವಾಗಿ ನಿಲ್ಲುವ ಬೇಟೆಗಾರ ಕ್ಷಣ ಮಾತ್ರದಲ್ಲಿ ಅವುಗಳನ್ನು ಗುರಿಯಿಟ್ಟು ಹೊಡೆದುರುಳಿಸುತ್ತಾನೆ.

ನಾಗರಿಕತೆ, ತಂತ್ರ ಜ್ಞಾನದ ಫಲವಾಗಿ ಬಂದ ಬ್ಯಾಟರಿ, ಬಂದೂಕುಗಳು ಜನಪದರಿಗೆ ಹೊಸವೇ ಹೊರತು, ಈ ಬೇಟೆ ತಂತ್ರವೇ ಅವರಿಗೆ ಹೊಸದೇನೂ ಅಲ್ಲ. ನೂರಾರು ವರ್ಷಗಳ ಹಿಂದಿನ ನಮ್ಮ ಜನಪದರೂ ಈ ತಂತ್ರ ಕುಶಲತೆಯಲ್ಲಿ ನಿಪುಣರಾಗಿದ್ದರೆಂಬುದನ್ನು ಸಾಬೀತು ಪಡಿಸುವ ಪ್ರಾಚೀನ ದಾಖಲೆಗಳು ನಮಗೆ ಲಭ್ಯವಿವೆ. ಪಂಪನ 'ವಿಕ್ರಮಾರ್ಜುನ ವಿಜಯ'ದಲ್ಲಿ (೫:೩೮) ಈ ದೀಪದ ಬೇಟೆಯ ಪ್ರಸ್ತಾಪ ಬರುತ್ತದೆ. ಈ ಪದ್ಧತಿ ಭಾರತದ ಇತರ ಭಾಗದಲ್ಲಿಯೂ ಇದ್ದಿತು ಎಂಬುದಕ್ಕೆ ಒಂದು ಚಿಕಣಿ ಚಿತ್ರವೂ ಸಾಕ್ಷಿಯಾಗಿದೆ. ಬುಟ್ಟಿಯೊಂದರಲ್ಲಿ ದೀಪ ಇಟ್ಟು, ಅದರ ಬೆಳಕಿಗೆ

ಆಕರ್ಷಿತವಾದ ಕೃಷ್ಣಮೃಗವೊಂದನ್ನು ಬೇಟೆಗಾರ ದಂಪತಿಗಳು ಬೇಟೆಯಾಡಲು ಹವಣಿಸುತ್ತಿರುವ ಸನ್ನಿವೇಶ ಆ ಚಿತ್ರದಲ್ಲಿ ನಿರೂಪಿತವಾಗಿದೆ.

ಬೇಟೆಗಾರರು ಇತರ ಸಾಧನಗಳಿಂದ ತಮ್ಮನ್ನು ಮರೆಮಾಡಿಕೊಂಡು ಅವಿತು ಕೂತು ಪ್ರಾಣಿ, ಪಕ್ಷಿಗಳನ್ನು ಬಲೆಗೆ ಕೆಡಹುವ ಮರಸು ಬೇಟೆಯ ತಂತ್ರವು ಸಾಕಷ್ಟು ಹಳೆಯದು ಎಂಬುದಕ್ಕೆ 'ಬಾಬರ್ ನಾಮಾ'ದಲ್ಲಿ ಸಾಕ್ಷ್ಯವಿದೆ. ಅದರಲ್ಲಿನ ಒಂದು ಚಿತ್ರದಲ್ಲಿ ಮರದ ಹಿಂದೆ ಕೂತ ಬೇಟೆಗಾರನೊಬ್ಬ ಸೊಪ್ಪಿನಿಂದ ಮಾಡಿದ ತಟಿಕೆಯಂತಹ ಅಗಲ ಸಾಧನವನ್ನು ತನ್ನ ಎಡಗೈಲಿ ಹಿಡಿದು, ತನ್ನನ್ನು ಮರೆಸಿಕೊಂಡು, ಬಲಗೈಲಿ ಬಲೆಯ ದಾರ ಹಿಡಿದಿದ್ದಾನೆ. ಈ ತಂತ್ರವನ್ನು ಅರಿಯದ ಹಕ್ಕಿಗಳು ಒಂದೊಂದಾಗಿ ಬಲೆ ಹತ್ತಿರ ಬಂದಿರುವುದನ್ನು ಚಿತ್ರಿಸಲಾಗಿದೆ (ನೋಡಿ : Randhawa 1983. Plate VIII).

ಕುರಿ, ಮೇಕೆಯಂತಹ ಪ್ರಾಣಿಯ ರುಂಡ ಕತ್ತರಿಸಿದ ಮೇಲೆ ಅದರ ಚರ್ಮ ಸುಲಿಯಬೇಕಾದರೆ ಸ್ವಚ್ಛತೆ ಮತ್ತು ಸುಲಭದ ಕಾರಣಕ್ಕಾಗಿ, ಅದರ ಹಿಂಗಾಲುಗಳ ಮಂಡಿ ಭಾಗದಲ್ಲಿ ಕೊಕ್ಕೆಯಂತಹ ಸಾಧನ ತೂರಿಸಿ, ಕುತ್ತಿಗೆ ಕೆಳಗಾಗುವಂತೆ ಮುಂಡವನ್ನು ನೇತುಹಾಕಿ ಬಳಿಕ ಆ ಮಂಡಿಗಳ ಭಾಗದಿಂದಲೇ ಚೂರಿಯ ಸಹಾಯದಿಂದ ಚರ್ಮ ಸುಲಿಯುತ್ತಾರೆ. ಇಂದೂ ಎಲ್ಲೆಡೆ ಇರುವ ಈ ಸಾಮಾನ್ಯ ಕ್ರಮ ೫೦೦ ವರ್ಷಗಳಷ್ಟು ಹಿಂದೆಯೂ ಇದ್ದಿತೆಂಬುದು ಗಮನಾರ್ಹ. 'ಬಾಬರ್ ನಾಮಾ'ದಲ್ಲಿನ ಒಂದು ಚಿತ್ರದಲ್ಲಿ (Plate IX) ಬಾಬರನಿಗೆ ಅಡುಗೆ ಸಿದ್ಧಪಡಿಸುತ್ತಿರುವ ಚಿತ್ರಣ ಇದ್ದು, ಮೇಕೆಯಂತಹ ಪ್ರಾಣಿಯ ಮುಂಡವನ್ನು ಒಂದು ಮರದ ಕಂಬದ ಕವಟಿಗೆ ನೇತುಹಾಕಿ, ಉದ್ದನೆಯ ಅಲಗಿನಿಂದ ಚರ್ಮ ಬಿಡಿಸುತ್ತಿರುವುದು, ಕೆಂಡದ ಮೇಲೆ ಬಾಡು ಸುಡುತ್ತಿರುವುದು, ಒಲೆ ಮೇಲೆ ಮಡಕೆಯಲ್ಲಿ ಬೇಯಿಸುತ್ತಿರುವುದು ಮೊದಲಾದ ಸನ್ನಿವೇಶಗಳಿವೆ.

ಉಡುಗೆ - ತೊಡುಗೆ

ಕೆಲವರು ಮೈತುಂಬಾ ಬಟ್ಟೆ ಹಾಕಿಕೊಳ್ಳುತ್ತಾರೆ. ಕೆಲವರಿಗೆ ಅರೆ ಬೆತ್ತಲೆ. ಸಾಮಾಜಿಕ - ಆರ್ಥಿಕ ದೃಷ್ಟಿಕೋನದಿಂದ ನೋಡುವವರು ಈ ತಾರತಮ್ಯಕ್ಕೆ ಆರ್ಥಿಕ ಅಸಮತೋಲನವೇ ಕಾರಣ ಎಂದು ಭಾವಿಸುತ್ತಾರೆ. ಆದರೆ, ಪ್ರಾಚ್ಯ ಜಾನಪದ ಅಧ್ಯಯನವು ಕೆಲವು ಭಿನ್ನ ಅಂಶಗಳತ್ತ ಬೆರಳು ಮಾಡಿ ತೋರುವಂತಿದೆ. ಹಾಗೆ ನೋಡಿದರೆ, ಕೆಲ ಮೇಲು ವರ್ಗದ ಶ್ರೀಮಂತ ಹುಡುಗಿಯರು ಕನಿಷ್ಠ ಉಡುಗೆಯಲ್ಲಿ ಕಾಣಿಸಿಕೊಳ್ಳುವುದೇ ಫ್ಯಾಷನ್, ಸೌಂದರ್ಯ, ನಾಗರಿಕತೆ ಎಂದು ಭಾವಿಸುತ್ತಾರೆ. ಇಂಥ ನಾಗರಿತೆಯ ಕಾಲದಲ್ಲಿಯೇ ಇನ್ನೊಂದೆಡೆ ಬದುಕುತ್ತಿರುವ ನಮ್ಮ ಕೆಲ ಆದಿವಾಸಿ, ಬುಡಕಟ್ಟಿನ ಹೆಣ್ಣುಮಕ್ಕಳು ರವಿಕೆ ತೊಡುವುದನ್ನು ತಮ್ಮ 'ಸಂಪ್ರದಾಯ'ಕ್ಕೆ ವಿರುದ್ಧವಾದುದೆಂದು ನಂಬುತ್ತಾರೆ. ಏಕೆ ಹೀಗೆ ? ಅರೆ - ಬೆತ್ತಲೆಯಲ್ಲಿರುವುದು ಮನುಷ್ಯನ ಸಹಜ ಪ್ರವೃತ್ತಿಯೇ ? ಬಟ್ಟೆಗೆ ಬದಲಾಗಿ - ಅಥವಾ ಅದಕ್ಕಿಂತಲೂ ಹೆಚ್ಚಾಗಿ - ಒಡವೆ ಹಾಗೂ ಬಣ್ಣಗಳಿಂದ ಮನುಷ್ಯ ತನ್ನ ದೇಹವನ್ನು ಅಲಂಕರಿಸಿಕೊಳ್ಳಲು - ಅರ್ಥಾತ್, ಮುಚ್ಚಿಕೊಳ್ಳಲು ಅಪೇಕ್ಷಿಸುತ್ತಾನೆ. ಏಕೆ ? ಇದು ಕೇವಲ ಸೌಂದರ್ಯ ಪ್ರಶ್ನೆಯೇ ? ನಮ್ಮ ಪ್ರಾಚೀನ ಜನಪದರು, ಮೂಲ ಜನಪದರು ಧರಿಸುತ್ತಿದ್ದ ಒಡವೆ ವಸ್ತ್ರಗಳು ಹೇಗಿದ್ದವು ? ಇಂತಹ ಕ್ಲಿಷ್ಟ ಪ್ರಶ್ನೆಗಳಿಗೂ ಪ್ರಾಚ್ಯ ಜಾನಪದ ದಾಖಲೆಗಳನ್ನು ಸಂಗ್ರಹಿಸಿಕೊಡುತ್ತದೆ.

ಪ್ರಾಚೀನ ಮಾನವ ತಾನು ಬೇಟೆಯಾಡಿದ ಪ್ರಾಣಿಗಳ ಮಾಂಸವನ್ನು ಆಹಾರಕ್ಕೆ ಬಳಸಿದರೆ, ಅವುಗಳ ಚರ್ಮ, ತುಪ್ಪಳ, ಮೂಳೆ ಹಾಗೂ ಪಕ್ಷಿಗಳ ಬಣ್ಣದ ಗರಿಗಳನ್ನು ಉಡುಗೆ - ತೊಡುಗೆ, ಅಲಂಕಾರಗಳಿಗಾಗಿ ಬಳಸಿಕೊಳ್ಳುವುದನ್ನು ಅಭ್ಯಾಸ ಮಾಡಿಕೊಂಡ. ಮಹಿಳೆಯರಂತೂ ಮೈ-ಕೈ ತುಂಬಾ ಹಚ್ಚೆ -ಆಭರಣಗಳಿಗೇ ಆದ್ಯತೆ ನೀಡಿದರು. ನಿದರ್ಶನಕ್ಕೆ ಲಂಬಾಣಿ ಮಹಿಳೆಯರು ಕೈ ಮತ್ತು ತೋಳು ತುಂಬಾ ಒಂದು ರೀತಿಯ ಬಳೆಗಳನ್ನು ಹಾಕಿಕೊಳ್ಳುತ್ತಾರೆ. ಕವಡೆ, ಕನ್ನಡಿಗಳೊಂದಿಗೆ ಕಸೂತಿ ಮಾಡಿದ ಬಣ್ಣದ ಉಡುಗೆ

ಧರಿಸುತ್ತಾರೆ. ಮುಂಗೈ, ತೋಳು, ಹಣೆ, ಕಾಲು, ಕೆನ್ನೆ, ಗದ್ದ, ಹುಬ್ಬುಗಳ ಬದಿಯಲ್ಲೆಲ್ಲಾ ವಿವಿಧ ನಮೂನೆಯ ಹಚ್ಚೆ ಹುಯ್ಯಿಸಿಕೊಳ್ಳುತ್ತಾರೆ. ಈ ಪ್ರವೃತ್ತಿ ಹಿಂದಿನ ಕಾರಣಗಳನ್ನು ಗುರುತಿಸುತ್ತಾ ಅಧ್ಯಯನಕಾರರು 'ಕಾಡು ಮೇಡುಗಳಲ್ಲಿ ಅಲೆದಾಡುವಾಗ ಪ್ರಾಣಿಗಳಿಂದ, ವಿಷ ಜಂತುಗಳಿಂದ, ಮುಳ್ಳು ಪೊದೆಗಳಿಂದ, ಕಳ್ಳಕಾಕರಿಂದಲೂ ತಮ್ಮನ್ನು ರಕ್ಷಿಸಿಕೊಳ್ಳಲು ಇಂತಹ ಅತಿಯಾದ ಆಭರಣ - ವಸ್ತ್ರಗಳನ್ನು ಧರಿಸುತ್ತಾರೆ' - ಎಂದು ಅಭಿಪ್ರಾಯ ಪಡುತ್ತಾರೆ (ಖಂಡೋಬಾ ೧೯೯೧ : ೬೨ - ೬೬).

ಇದು ಒಂದು ಕಾರಣವಿದ್ದಿರಬಹುದು. ಇದರ ಹಿಂದೆ ಬೇರೊಂದು ಮೂಲಭೂತ ಕಾರಣವಿದ್ದಂತಿದೆ. ಹಾಗೆ ನೋಡಿದರೆ, ರಟ್ಟೆ ಹಾಗೂ ಮುಂಗೈ ತುಂಬಾ ಬಳೆಗಳನ್ನು ತೊಡುವ ಅಭ್ಯಾಸ ಕೇವಲ ಲಂಬಾಣಿಗಳಲ್ಲಷ್ಟೇ ಅಲ್ಲದೆ ಹಾಲಕ್ಕಿ ಒಕ್ಕಲಿಗ ಮಹಿಳೆಯರಲ್ಲೂ ಕಾಣಬರುತ್ತದೆ. ಇನ್ನೂ ವಿಶೇಷವೆಂದರೆ ಹರಪ್ಪಾ - ಮೊಹೆಂಜೋದಾರೋ ಕಾಲದ ಮುದ್ರಿಕೆಗಳಲ್ಲೂ ತೋಳು ತುಂಬಾ ಬಳೆ ಹಾಕಿಕೊಂಡ ಸ್ತ್ರೀಯರು (ಉದಾಹರಣೆಗೆ 'ನರ್ತಕಿ'ಯ ಚಿತ್ರ ಗಮನಿಸಿ) ಕಂಡುಬರುತ್ತಾರೆ. ಕೇವಲ ದೇಹ ರಕ್ಷಣೆಗಾಗಿಯೇ ಹೀಗೆ ಬಳೆ ತೊಡುವುದಿದ್ದರೆ, ಅದಕ್ಕೆ ಬದಲು ತುಂಬುದೋಳಿನ ರವಿಕೆಯಂತಹ ಉಡುಪು ಧರಿಸಬಹುದಿತ್ತಲ್ಲವೇ ?

ಈ ಹಿನ್ನೆಲೆಯಲ್ಲಿ ಇನ್ನಷ್ಟು ಸೂಕ್ಷ್ಮವಾಗಿ ಗಮನಿಸುತ್ತಾ ಹೋದರೆ ನಮ್ಮಲ್ಲಿ ಈಗಲೂ ಕಾಡುಗೊಲ್ಲರು, ತಿಗಳರು ಮೊದಲಾದ ವರ್ಗದ ಕೆಲ ವೃದ್ಧ ಮಹಿಳೆಯರಲ್ಲಿ ಕುಪ್ಪಸ ತೊಡುವ ಅಭ್ಯಾಸವಿಲ್ಲದ್ದು ಗಮನ ಸೆಳೆಯುತ್ತದೆ. ಸೋಲಿಗ, ಕಾಡುಕುರುಬರಂತಹ ಆದಿವಾಸಿ ಮಹಿಳೆಯರು ಸೀರೆಯ ಸೆರಗಿನಿಂದಲೇ ಎದೆ ಮರೆ ಮಾಡಿಕೊಳ್ಳುತ್ತಾರೆ. ಹಾಲಕ್ಕಿ ಒಕ್ಕಲಿಗ ಮಹಿಳೆಯರು ಕೊರಳ ತುಂಬಾ ಹಾಕಿಕೊಂಡ ಅಸಂಖ್ಯ ಮಣಿಸರಗಳಿಂದಲೇ ತಮ್ಮ ಎದೆಭಾಗವನ್ನು ಮುಚ್ಚಿಕೊಳ್ಳುತ್ತಾರೆ, ಇವರಾರಿಗೂ ಕುಪ್ಪಸದ ಪರಿಚಯವೇ ಇಲ್ಲದಂತೆ ! ಮಲೆನಾಡು ಹಾಗು ಕೊಡಗಿನ

ಮಹಿಳೆಯರು ಸೀರೆ ಉಡುವಲ್ಲಿನ ಸಾಂಪ್ರದಾಯಿಕ ವಿನ್ಯಾಸವನ್ನು ಗಮನಿಸಿದರೆ - ಬಹುಶಃ ಮೂಲತಃ ಅವರಲ್ಲಿಯೂ ರವಿಕೆ ತೊಡುವ ಅಭ್ಯಾಸವಿರಲಿಲ್ಲ - ಎನಿಸುತ್ತದೆ. ಕೇರಳ ನಾರಿಯರೂ ಟಿಪ್ಪುವಿನ ಕಾಲದಿಂದೀಚೆಗೆ ಕುಪ್ಪಸ ತೊಡುವಂತಾದರು - ಎಂಬ ಅಭಿಪ್ರಾಯವೂ ಇದೆಯಲ್ಲವೇ ? ಉತ್ತರ ಭಾರತದ ಅಸ್ಸಾಂ, ತ್ರಿಪುರಾ ಮೊದಲಾದ ಪ್ರಾಂತ್ಯಗಳಲ್ಲಿನ ಆದಿವಾಸಿ / ಬುಡಕಟ್ಟು ಮಹಿಳೆಯರು ನಮ್ಮ ಹಾಲಕ್ಕಿ ಮಹಿಳೆಯರಂತೆ ಈಗಲೂ ಸಮೃದ್ಧವಾದ ಮಣಿಸರಗಳನ್ನೇ ತಮ್ಮ ಎದೆಯುಡುಗೆ ಮಾಡಿಕೊಂಡಿದ್ದಾರೆ. ಇನ್ನೂ ವಿಶೇಷವೆಂದರೆ, ನಮ್ಮ ಶಿಷ್ಟವರ್ಗದವರು ಅತ್ಯಂತ ಭಕ್ತಿ - ಗೌರವಗಳಿಂದ ಪೂಜಿಸುವ ದೇವ ದೇವಿಯರೂ - ಪ್ರಾಚೀನ ಚಿತ್ರ ಶಿಲ್ಪಗಳಲ್ಲಿ - ಅರೆ ನಗ್ನರಾಗಿಯೇ ಚಿತ್ರಿತರಾಗಿದ್ದಾರೆ. ರಾಮ, ಕೃಷ್ಣರಂತಹ ಪುರುಷ ದೈವಗಳಿಗೂ ಎದೆಯ ಮೇಲೆ ಒಂದು ಉತ್ತರೀಯವಿದ್ದರೆ, ಶಿವನಿಗೆ ಚರ್ಮದ ತುಂಡು ಅಥವಾ ಹಾವೇ ಭೂಷಣವಾಗಿದೆ. ಇಂದೂ ನಮ್ಮ ವೈದಿಕ ವರ್ಗದವರು ನಿತ್ಯದಲ್ಲಿ ಸೂಟು, ಬೂಟು ಹಾಕಿದರೂ ತಮ್ಮ ಧಾರ್ಮಿಕ ಆಚರಣೆಗಳಲ್ಲಿ ಮಾತ್ರ ಸೊಂಟಕ್ಕೆ ಕಚ್ಚೆಯುಟ್ಟು, ಮೈಮೇಲೆ ಉತ್ತರೀಯ ಹಾಕಿಕೊಳ್ಳುವುದೇ ಸಂಪ್ರದಾಯ ಎಂದು ನಂಬುತ್ತಾರೆ. ಪಂಚೆ ಉಟ್ಟವರು ಜುಬ್ಬಾ / ಕುರ್ತಾ ನಿರಾಕರಿಸುವುದು ಏಕೆ ?

ನಮ್ಮ ಸ್ತ್ರೀ - ಪುರುಷರ ಈ ಅರೆಬೆತ್ತಲೆ ಸಂಪ್ರದಾಯಕ್ಕೆ ಒಂದೇ ಕಾರಣ - ನಮ್ಮ ಪ್ರಾಚೀನರಿಗೆ ಬಟ್ಟೆ ತಯಾರಿಸುವುದು ಗೊತ್ತಿದ್ದರೂ ಅದನ್ನು ಅಂಗಿಯಂತೆ ಹೊಲಿದುಕೊಳ್ಳುವುದು ಗೊತ್ತಿರಲಿಲ್ಲ. ಪ್ರಾಚೀನ ಆಕರಗಳನ್ನು ಅಧ್ಯಯನ ಮಾಡಿರುವ ವಿದ್ವಾಂಸರ ಪ್ರಕಾರ ಈ 'ಅಂಗಿ'ಗಳ ಪರಿಕಲ್ಪನೆ ನಮ್ಮವರಿಗೆ ವಿದೇಶೀಯರಾದ ಶಕ ಹಾಗೂ ಹೂಣರ ಸಂಪರ್ಕದಿಂದಾಗಿ ಬಂದಿತು. ಇದರ ಫಲವಾಗಿಯೇ ಗುಪ್ತರ ಕಾಲದ ನಾಣ್ಯಗಳ ಮೇಲೆ ಮೊದಲ ಬಾರಿಗೆ ಈ ರೀತಿ ಹೊಲಿದ ವಸ್ತ್ರಗಳ ಚಿತ್ರಣ ಕಂಡುಬರುತ್ತದೆ. ಗುಪ್ತ ದೊರೆಗಳು ಕುಶಾನರ ಮಾದರಿಯ ಮೇಲಂಗಿ (Coats) ಮತ್ತು ಷರಾಯಿ (Trousers) ಧರಿಸಿದ ಚಿತ್ರಣವಿದ್ದರೂ ಅದು ಭಾರತೀಯ ವಾತಾವರಣಕ್ಕೆ ಒಗ್ಗದ್ದರಿಂದ

ಕೆಲವೊಮ್ಮೆ ಧೋತಿ ಉಟ್ಟ ಚಿತ್ರಗಳೂ ಇವೆ ಎನ್ನಲಾಗಿದೆ (Chakraborty 1986 : 360).

ಮಹಿಳೆಯರು ರವಿಕೆ (Blouses) ಮತ್ತು ನಡುವಂಗಿ (Jackets) ಧರಿಸಲು ಪ್ರಾರಂಭಿಸಿದ್ದು ಗ್ರೀಕ್ ಮತ್ತು ಸಿಥಿಯನ್ನರ ಸಂಪರ್ಕ, ಪ್ರಭಾವದಿಂದ. ಆದರೆ, ಈ ಅನುಕರಣೆ ಶ್ರೀಮಂತರಿಗೆ ಮಾತ್ರ ಮೀಸಲಾಗಿದ್ದಿತು ಎಂದೂ ಹೇಳಲಾಗಿದೆ (ಅದೇ, ಪುಟ ೩೫೩).

ಶ್ರೀಮಂತರೇ ಹೀಗಾದರೆ, ಸಾಮಾನ್ಯ ಜನಪದರು ಬಹುಮಟ್ಟಿಗೆ ಬೆತ್ತಲೆ, ಅರೆಬೆತ್ತಲೆಯಾಗಿರುವುದು ಅನಿವಾರ್ಯವಾಗಿದ್ದಿತು. ಅಂದಿನ ವಾಸ್ತವ ಬದುಕಿನ ಪಳೆಯುಳಿಕೆಯೇ ಇಂದಿನ ಬುಡಕಟ್ಟು ಮಹಿಳೆಯರ ವಸ್ತ್ರ ಪದ್ಧತಿ. ಮೈ-ಕೈ ತುಂಬಾ ವಡವೆ - ಸರ ತುಂಬಿಕೊಳ್ಳುವುದು ಕೇವಲ ಆಭರಣ ಲಾಲಸೆ ಅಥವಾ ಅಲಂಕಾರ ಮೋಹದಿಂದ ಬಂದದ್ದಲ್ಲ. ಮೈಮುಚ್ಚಿಕೊಳ್ಳುವ ಅನಿವಾರ್ಯತೆಯಿಂದ ಕಾಲಕಾಲಕ್ಕೆ ಕಂಡುಕೊಂಡದ್ದು.

ಲಕ್ಷ್ಮಿ, ಪಾರ್ವತಿಯಂತಹ ದೇವಿಯರೂ ಸೀರೆ, ಕುಬಸ ತೊಡಲು ಪ್ರಾರಂಭಿಸಿದ್ದು ಕಲಾವಿದ ರವಿವರ್ಮನ ಕಾಲದಿಂದೀಚೆಗೇ. ಮನುಷ್ಯ ತಾನು ಇರುವಂತೆಯೇ ತಮ್ಮ ದೈವಗಳನ್ನು ರೂಪಿಸಿಕೊಳ್ಳುತ್ತಾನಷ್ಟೇ. 'ಬೆತ್ತಲೆ ಸೇವೆ'ಯಂತಹ ಹರಕೆ ಮನುಷ್ಯ ವಾಸ್ತವವಾಗಿ ಬೆತ್ತಲೆಯಾಗಿದ್ದಾಗಲೇ ಹುಟ್ಟಿಕೊಳ್ಳುವುದು ಸಾಧ್ಯವಿಲ್ಲ. ಮೈ ತುಂಬಾ ಬಟ್ಟೆ ಹಾಕಿಕೊಳ್ಳುವುದು ರೂಢಿಯಾದ ಮೇಲೆಯೇ ಅದು ಅಸ್ತಿತ್ವಕ್ಕೆ ಬಂದಿರಬಹುದು. ಇದೊಂದು ರೀತಿ ಆದಿಮತೆಯಿಂದ ಆದಿಮಕ್ಕೆ ಹೋಗುವ ಪರಿ !

ಲಂಬಾಣಿ ಮಹಿಳೆಯರ ಉಡುಗೆಗಳು ವಿಶಿಷ್ಟ ವಿನ್ಯಾಸದಿಂದ ಕೂಡಿರುತ್ತವೆಯಾದರೂ ಅವು ಬಹುಮಟ್ಟಿಗೆ ಅಪೂರ್ಣವಾದವು ಎಂಬುದು ಗಮನಾರ್ಹ. ಕುಪ್ಪಸವಂತೂ ಕೇವಲ ಎದೆ ಮುಚ್ಚುವ, ಬೆನ್ನು ಪೂರ್ಣವಾಗಿ ಕಾಣುವ ಅಪೂರ್ಣ ಪೋಷಾಕು (ಖಂಡೋಬಾ ೧೯೯೧ : ೬೧).

ಊರೂರಿಗೆ ಹೊಲಿಗೆ ಯಂತ್ರ ಬಂದಿದ್ದು ತೀರಾ ಈಚಿನ - ಕಾಲು ಶತಮಾನದ ಈಚಿನ - ಬೆಳವಣಿಗೆ. ಅದಕ್ಕೆ ಮೊದಲು ವಾರದ ಸಂತೆಗಳಿಂದ "ಮಾರಿಗೆ ಬಟ್ಟೆ" (ಹೊಲಿದ ಕುರ್ತಾ, ಕುಬಸ, ಚಡ್ಡಿ) ಕೊಂಡು ತರುತ್ತಿದ್ದರು. ಕೆಲವೊಮ್ಮೆ ಬೂಬಮ್ಮಗಳು (ಸಾಬರ ಹೆಂಗಸರು) ಹೊಲಿದು ಕೊಟ್ಟ ಕೈ ಹೊಲಿಗೆ ಕೂಸಗಳನ್ನು ಗ್ರಾಮೀಣ ಮಹಿಳೆಯರು ತೊಡುತ್ತಿದ್ದರು (ಹೊನ್ನಮ್ಮ, ವೈಯಕ್ತಿಕ ಮಾಹಿತಿ : ೧೭-೧-೨೦೦೦. ೬೦ರ ದಶಕದ ನನ್ನ ಬಾಲ್ಯದಲ್ಲಿ ಈ ನಡವಳಿಯನ್ನು ಸ್ವತಃ ಗಮನಿಸಿದ್ದೇನೆ).

ಹಳೆಯ ತಲೆಮಾರಿನ ನಮ್ಮ ಕೆಲ ಗ್ರಾಮೀಣ ಜನಪದರು, ಕುಲದ ಹಿರಿಯರು ತುಂಬುದೋಳಿನ ಅಂಗಿ, ಕರೀಕೋಟು, ಕೆಂಪು ಪೇಟ, ಚೌಕಳಿ ಶಲ್ಯ, ಬಿಳೀ ಪಂಚೆ......... ಇವುಗಳನ್ನು ಉಡುವುದೇ ತಮ್ಮ ಸಂಪ್ರದಾಯ, ಘನತೆಗಳ ಪ್ರತೀಕ ಎಂದು ಭಾವಿಸುತ್ತಿದ್ದುದುಂಟು. ಹಾಗಿದ್ದರೆ ತೀರಾ ಪ್ರಾಚೀನರ ಪಾರಂಪರಿಕ ಉಡುಪು ಹೀಗೇ ಇದ್ದಿರಬಹುದೇ ? ಇತರೆ ಸಾಮಾನ್ಯ ಜನಪದರ ಉಡುಗೆ ಹೇಗಿದ್ದವು ? ಇದಕ್ಕೆ ಮತ್ತೆನಾವು ಪ್ರಾಚ್ಯ ದಾಖಲೆಗಳಿಗೇ ಹೋಗಬೇಕು.

ಮಧ್ಯಯುಗೀನ ಭಾರತೀಯ ಜನಸಾಮಾನ್ಯರ ಉಡುಪುಗಳು ಹೇಗಿದ್ದವೆಂದು ತಿಳಿಯುವುದಕ್ಕೆ ಆಗಿನ ಕೆಲ ಮುಸ್ಲಿಂ ಬರಹಗಾರರ ಲಿಖಿತ ದಾಖಲೆಗಳು ನಮ್ಮ ನೆರವಿಗೆ ಬರುತ್ತವೆ. ಅದರಂತೆ, ಆಗಿನ - 'ಕಾರ್ಮಿಕರು, ಕುಶಲ ಕರ್ಮಿಗಳು, ರೈತರು, ಕೂಲಿಕಾರರು ಮೊದಲಾದವರು ಸೊಂಟದಿಂದ ಮಂಡಿಯವರೆಗೂ ಆವರಿಸಿದ್ದ ಹತ್ತಿಯ 'ಲಂಗೋಟ' ಧರಿಸುತ್ತಿದ್ದರು. ಆ ಲಂಗೋಟವು 'ಸೊಂಟದ ಎರಡು ಭಾಗಗಳನ್ನು ಮಾತ್ರ ಮರೆಮಾಡುತ್ತಿತ್ತು' ಎಂದು 'ಐ - ನಿ - ಅಕ್ಬರಿ'ಯಲ್ಲಿ ಹೇಳಿದೆ (Chopra 1963 : 7). ಗೋಲ್ಕೊಂಡ ಪ್ರಾಂತ್ಯದಲ್ಲಿ ಸ್ತ್ರೀ, ಪುರುಷರು ಕೇವಲ ನಡುವಿಗೆ ಬಟ್ಟೆ ಸುತ್ತಿಕೊಂಡು ಓಡಾಡುತ್ತಿದ್ದುದನ್ನು ಕಂಡ ಬಗ್ಗೆ ನಿಜಾಮುದ್ದೀನ್ ಅಹಮದ್ ಹೇಳುತ್ತಾನೆ (ಅದೇ, ಪುಟ). ಆದರೆ, ಚಳಿಗಾಲದಲ್ಲಿ ತೀರಾ ನಿರ್ಗತಿಕರಾದವರನ್ನುಳಿದು ಸಾಮಾನ್ಯ ಜನ ಕೌದಿಯಂತೆ ಹೊಲಿದ ದೊಡ್ಡ ಅಂಗಿ ಧರಿಸುತ್ತಿದ್ದರೆಂದು

'ಐ - ನಿ - ಅಕ್ಬರಿ'ಯಲ್ಲಿ ದಾಖಲಾಗಿದೆ (ಅದೇ ಪು. ೮). ಈ ಅಂಗಿಗಳನ್ನು ಎಂದೂ ಒಗೆಯದೆ, ಹರಿದು ಹಾಳಾಗುವವರೆಗೂ ಧರಿಸುವ ಪರಿಪಾಠವಿತ್ತೆಂದು 'ಇಕ್ಬಲ್ ನಾಮಾ - ಐ - ಜಹಾಂಗಿರಿ' ಯಲ್ಲಿ ಹೇಳಿದೆ (ಅದೇ ಪುಟ). ಉತ್ತರ ಭಾರತದಲ್ಲಿ ಚಳಿ, ಬಿಸಿಲ ರಕ್ಷಣೆಗೆ ಮುಂಡಾಸು ಧರಿಸುವ ಅಭ್ಯಾಸವಿದ್ದಿತು.

'ಮಧ್ಯ ಭಾರತದಲ್ಲಿ ಬರೀ ತಲೆಯವರಿಗೆ ಗೌರವ ಕಮ್ಮಿ ಎಂಬ ಭಾವನೆ ಇದ್ದುದರಿಂದ ಜನ ತಲೆಗೆ ಕುಲಾವಿ (ಟೋಪಿ) ಅಥವಾ ಮುಂಡಾಸು ಧರಿಸಿಯೇ ಹೊರಗೆ ಓಡಾಡುತ್ತಿದ್ದರು. ಕೇರಳದ ಕೆಲ ಪ್ರಾಂತದ ಮುಸ್ಲಿಂ ಆಡಳಿತಗಾರರ ನಿಬಂಧನೆಗಳಿಂದಾಗಿ ಅಲ್ಲಿನ ಮಲೆಯಾಳಿ ಶೂದ್ರರು (ಗಂಡಸರು) ತಮ್ಮ ಮಂಡೆಗಳನ್ನು ವಸ್ತ್ರಗಳಿಂದ ಮರೆಮಾಡಿಕೊಳ್ಳುವ ಪದ್ಧತಿ ಬಂತು ಎನ್ನಲಾಗಿದೆ. ದೊಡ್ಡವರ ಸಮ್ಮುಖ ತಮ್ಮ ತಲೆ ಮೇಲಿನ ಪೇಟ ತೆಗೆದು ಬರೀ ತಲೆಯಲ್ಲಿರುವುದು ಗೌರವ ತೋರುವ ಕ್ರಮವಲ್ಲವೆಂದು ಆಗಿನ ಹಿಂದೂಗಳೂ, ಮುಸ್ಲಿಮರೂ ಭಾವಿಸಿದ್ದರು. ಮುಸ್ಲಿಮರ ಮುಂಡಾಸು ಸಾಮಾನ್ಯವಾಗಿ ಬೆಳ್ಳಗೆ, ದುಂಡಗೆ ಇದ್ದರೆ ಹಿಂದೂಗಳವು ಬಣ್ಣದ್ದಾಗಿದ್ದು ನೇರವಾಗಿಯೂ ಎತ್ತರವಾಗಿಯೂ ಇದ್ದು, ತುದಿಯಲ್ಲಿ ಚೂಪಾಗಿ ಇರುತ್ತಿದ್ದವು (ಅದೇ ಪು. ೮). ಆದರೂ ಅವುಗಳನ್ನು ಸುತ್ತುವುದರಲ್ಲಿ ಜಾತಿ ಮತ್ತು ಪ್ರಾಂತ್ಯಕ್ಕನುಗುಣವಾಗಿ ಭಿನ್ನ ಕ್ರಮಗಳಿದ್ದವು ಎಂದೂ ಹೇಳಲಾಗಿದೆ.

ಇಂದೂ ನಮ್ಮ ಜನಪದರ ಬದುಕಿನಲ್ಲಿ ತಲೆ ಮೇಲಿನ ಬಟ್ಟೆ ವಿಶೇಷ ಪ್ರಾಮುಖ್ಯ ಪಡೆದುಕೊಂಡಿರುವುದನ್ನು ಕಾಣುತ್ತೇವೆ. ತೀರಾ ದಾರಿದ್ರ್ಯದ ವ್ಯಕ್ತಿಯನ್ನು 'ತಲೆ ಮೇಲೆ ಬಟ್ಟೆ ಇಲ್ಲದೋನು' ಎಂಬ ನುಡಿಗಟ್ಟಿನಲ್ಲಿ ತುಚ್ಛವಾಗಿ ವರ್ಣಿಸಲಾಗುತ್ತದೆ. ಮದುವೆಯಂತಹ ಸಾಂಪ್ರದಾಯಿಕ ಆಚರಣೆಗಳಲ್ಲಿ ಭಾಗವಹಿಸುವ ಗಂಡಸರು ಶಾಸ್ತ್ರ ಮುಗಿವವರೆಗೆ ತಲೆಗೆ ಒಂದು ಟವೆಲನ್ನಾದರೂ ಸುತ್ತಿಕೊಂಡಿರಬೇಕೆಂಬ ನಿರ್ಬಂಧ ಈಗಲೂ ಗ್ರಾಮೀಣರಲ್ಲಿದೆ.

ಸಾಮಾನ್ಯ ಮಹಿಳೆಯರ ಉಡುಪಿಗೆ ಸಂಬಂಧಿಸಿದ ಕೆಲ ಮಾಹಿತಿಗಳೂ ಲಭ್ಯವಾಗುತ್ತವೆ :

'ಉತ್ತರ ಭಾರತದ ಮಹಿಳೆಯರು ಸೀರೆಯ ಒಂದು ತುದಿಯನ್ನು ಸೊಂಟಕ್ಕೆ ಸುತ್ತಿ ಇನ್ನೊಂದು ಸೆರಗನ್ನು ತಲೆ ಮೇಲೆ ಎಳೆದುಕೊಳ್ಳುತ್ತಿದ್ದರು (ರವಿಕೆ ತೊಡುವುದೂ ಇತ್ತು). ಈ ಸೆರಗಿನಲ್ಲಿ ಸಾಮಾನ್ಯವಾಗಿ ಎರಡು ಬಣ್ಣಗಳ ಪಟ್ಟಿ ಇರುತ್ತಿದ್ದವು. ಹಿಂದೂ ಸ್ತ್ರೀಯರು ಸಾಮಾನ್ಯವಾಗಿ ಕೆಂಪು ಬಣ್ಣದ ವಸ್ತ್ರ ಇಷ್ಟಪಟ್ಟರೆ ಕಲ್ಕತ್ತಾ ಭಾಗದ ಸ್ತ್ರೀಯರು ನೀಲಿ ಬಣ್ಣ ಇಷ್ಟಪಡುತ್ತಿದ್ದರು ಎಂದು ಡೆಲ್ಲಾವಲ್ಲೆ ಎಂಬ ಪ್ರವಾಸಿ ಅಭಿಪ್ರಾಯಿಸಿದ್ದಾನೆ. ದಕ್ಷಿಣ ಭಾಗದ ಕೆಳವರ್ಗದ ಮಹಿಳೆಯರು ತಲೆಯ ಮೇಲೆ ಸೆರಗು ಹಾಕಿಕೊಳ್ಳುತ್ತಿರಲಿಲ್ಲ. ಅತಿ ಬಡ ಒರಿಯಾ ಹೆಂಗಸರಿಗೆ ಬಟ್ಟೆಯೂ ಅಲಭ್ಯವಾಗಿ ಎಲೆಗಳಿಂದ ಮಾನ ಮುಚ್ಚಿಕೊಳ್ಳುತ್ತಿದ್ದರೆಂದು 'ಐ - ನಿ - ಅಕ್ಬರಿ'ಯಲ್ಲಿ ದಾಖಲಿಸಿದೆ (ಅದೇ, ಪು. ೧೨).

ಈ ದಾಖಲೆಯ ಬಗ್ಗೆ ಅನುಮಾನ ಪಡುವ ಅಗತ್ಯವೇನೂ ಇಲ್ಲ. ಭಾರತೀಯ ಇತಿಹಾಸದಲ್ಲಿ 'ಬಡತನ'ವೆಂಬುದು ಕೆಲ ವರ್ಗಗಳನ್ನು ಎಂದಿನಿಂದಲೂ ಕಾಡುತ್ತಲೇ ಬಂದಿದೆ. ವ್ಯವಸಾಯ ಪ್ರಧಾನವಾದ ಈ ದೇಶದ ರೈತರು ಅದಕ್ಕಾಗಿ ಮಳೆಯನ್ನೇ ಪೂರ್ಣವಾಗಿ ಆಶ್ರಯಿಸಿದ್ದು, ಮಳೆಯಿಂದಾಗುವ ಅತಿವೃಷ್ಟಿ, ಅನಾವೃಷ್ಟಿ, ಜೊತೆಗೆ ರೈತನ ಬೆಳೆಗೆ ಸರಿಯಾದ ಬೆಲೆ ದೊರೆಯದಂತೆ ನೋಡಿಕೊಳ್ಳುವ ಮಧ್ಯವರ್ತಿಗಳು, ಕಾಳಸಂತೆಕೋರರು, ಭ್ರಷ್ಟ ರಾಜಕಾರಣಿ, ಅಧಿಕಾರಿ ಇವರೆಲ್ಲರಿಂದ ರೈತನೂ, ಅವನನ್ನು ಆಶ್ರಯಿಸಿದ ಕೂಲಿಕಾರರೂ ಅನಿಶ್ಚಿತ ಬದುಕನ್ನೇ ನಡೆಸುತ್ತಾ ಬರಬೇಕಾಗಿದೆ. ನಮ್ಮ ಸಾಹಿತಿ, ಕಲಾವಿದರು, ಚಿಂತಕರು ಈ ಕಟುವಾಸ್ತವದ ಬಗ್ಗೆ ಕುರುಡಾಗದೆ, ತಮ್ಮ ಕಾಲದ ಯಥಾಸ್ಥಿತಿಯನ್ನು ದಾಖಲಿಸುತ್ತಾ ಬಂದಿರುವುದು ಪ್ರಶಂಸನೀಯವಾಗಿದೆ. ಅವುಗಳ ಮೂಲಕ ಪ್ರಾಚೀನ ಜನಪದರು ಅನುಭವಿಸಿದ ಬಡತನ, ಬರಗಳ ಸ್ವರೂಪವನ್ನು ನಾವು ಇಂದೂ ಪರಾಮರ್ಶಿಸಲು ಸಾಧ್ಯವಾಗಿದೆ.

ಜಾತಕ ಕತೆಗಳು ಧಾರ್ಮಿಕ ಉದ್ದೇಶದಿಂದ ರಚಿತವಾಗಿದ್ದರೂ, ಅಲ್ಲಿ ಪ್ರಸ್ತಾಪವಾಗುವ ಬರಗಾಲದ ವರ್ಣನೆಗಳಿಗೆ ಸೀಮಿತ ಆಶಯವಿದ್ದರೂ ಜನಪದರ ಬದುಕನ್ನು ಕುರಿತ ಅಧ್ಯಯನಕ್ಕೆ ಅವೂ ಅಗತ್ಯ ಮಾಹಿತಿ

ಒದಗಿಸುತ್ತವೆ. ನಿದರ್ಶನಕ್ಕೆ "ರೂಪಮತಿ ಅವದಾನ" ಎಂಬ ಜಾತಕ ಕತೆಯಲ್ಲಿ ಬರದ ಬೇಗೆಗೆ ಸಿಕ್ಕಿದ ತಾಯಿಯೊಬ್ಬಳು ತನ್ನ ಸ್ವಂತ ಮಗುವನ್ನೇ ತಿಂದು ಹಸಿವು ಇಂಗಿಸಿಕೊಳ್ಳುವ ಕೃತ್ಯಕ್ಕೆ ಕೈಹಾಕಿದ ಸಂದರ್ಭ ಬರುತ್ತದೆ (ಅದೇ, ಪು. ೯೭).

ಕೌಟಿಲ್ಯನಂತಹ ರಾಜ ನೀತಿಜ್ಞ ಇಂತಹ ಬದುಕಿನ ವೈರುಧ್ಯಗಳ ಬಗ್ಗೆ ತೀವ್ರ ಕಾಳಜಿ ವ್ಯಕ್ತಪಡಿಸಿದ್ದಕ್ಕೂ 'ಅರ್ಥಶಾಸ್ತ್ರ'ದಲ್ಲಿ ಮಾಹಿತಿ ಇದೆ. ಆತ 'ಬರಗಾಲದಲ್ಲಿ ರಾಜನಾದವನು ಶ್ರೀಮಂತರಿಂದ ಹಾಗೂ ಕಾಳಸಂತೆ ವರ್ತಕರಿಂದ ದವಸ ಧಾನ್ಯ ವಸೂಲಿ ಮಾಡಿ ಬರ ಪೀಡಿತರಿಗೆ ಹಂಚಬೇಕೆಂಬ ಬಗ್ಗೆ ಹಾಗೂ ಬರ ಪರಿಹಾರ ಕಾಮಗಾರಿ ನಡೆಸುವ ಬಗ್ಗೆ'ಯೂ ಸೂಚಿಸುತ್ತಾನೆ.

ಬರಗಾಲದ ಮುನ್ನೆಚ್ಚರಿಕೆಗಾಗಿ ದಾಸ್ತಾನು ಮಾಡಿದ ಉಗ್ರಾಣಗಳ ಬಗ್ಗೆ ಮೌರ್ಯರ ಕಾಲದ ಶಾಸನಗಳಲ್ಲಿ ಉಲ್ಲೇಖಗಳಿರುವುದನ್ನು (ಅದೇ ಪುಟ) ಇಲ್ಲಿ ಗಮನಕ್ಕೆ ತಂದುಕೊಳ್ಳಬಹುದಾಗಿದೆ.

ಊಳಿಗದವರು

ಇನ್ನೊಬ್ಬರಿಂದ ದುಡಿಸಿಕೊಂಡು ಉಣ್ಣುವುದೇ ತನ್ನ ಸುಖದ ಬದುಕು -ಎಂದು ಭ್ರಮಿಸಿದ್ದೇ ಯಜಮಾನ ಸಂಸ್ಕೃತಿಯ ಒಂದು ಮುಖ್ಯ ಗುಣ. ಅದುವೇ ಊಳಿಗ ವರ್ಗವನ್ನು ಹುಟ್ಟು ಹಾಕಿತು. ಇಲ್ಲಿ ಯಜಮಾನರ ಸೇವೆಗೆ ಮೊದಲು ಇದ್ದದ್ದು ಗುಲಾಮ ವರ್ಗವೇ. ಆ ಮೇಲೆ ಅದು ನೌಕರ ವರ್ಗವಾಗಿ (ದುಡಿಮೆಗೆ ತಕ್ಕ 'ಕೂಲಿ' ಪಡೆದು) ಪರಿವರ್ತನೆಯಾಗಿದೆ. ಕಾಲಿಗೆ ಸಂಕೋಲೆ ಹಾಕಿ ದುಡಿಸಿಕೊಳ್ಳುತ್ತಿದ್ದ ಹಂಗರವಳ್ಳಿಯ ಜೀತಪದ್ಧತಿ, ನಗರಗಳ ಕೆಲ ಶ್ರೀಮಂತರ ಮನೆಯ ಕೆಲಸದ ಮಕ್ಕಳ ಶೋಷಣೆಯ ಸುದ್ದಿಗಳು ಇಂದು ನಮ್ಮನ್ನು ಬೆಚ್ಚಿಬೀಳಿಸುತ್ತವೆ. ಇದಕ್ಕಿಂತಲೂ ಅಮಾನುಷವಾದ ಗುಲಾಮಿ ಪದ್ಧತಿ ಇತಿಹಾಸ ಪೂರ್ವಕಾಲದಿಂದಲೂ ಇದ್ದಿತೆಂಬುದು ಮಾನವತೆಯ ಕಪ್ಪು ಚುಕ್ಕೆಯಾಗಿದೆ.

ಕೃಷಿಯಲ್ಲಿ ವಿಧೇಯತೆಯಿಂದ ದುಡಿವ ಎತ್ತುಗಳ ಅಗತ್ಯ ಬಹಳ. ಬೀಜದ ಹೋರಿಗಳನ್ನು ನೇಗಿಲ ಕೆಲಸಕ್ಕೆ ಒಗ್ಗಿಸಿಕೊಳ್ಳುವುದು ಕಷ್ಟ. ಆದ್ದರಿಂದ

ಅವುಗಳ ವೀರ್ಯದ ಸೊಕ್ಕು ಮುರಿಯಬೇಕು. ಅಂದರೆ, ಅವುಗಳ "ಬೀಜ ಹಾಕಿಸಬೇಕು" (ಇದನ್ನು 'ಹಿಡಮಾಡಿಸುವುದು' ಎಂದೂ ಕರೆಯಲಾಗುತ್ತದೆ). ಅರ್ಥಾತ್, ಅವುಗಳ ಬೀಜಗಳ (ಅಂಡಕೋಶ) ನರಗಳನ್ನು ಅಮುಕಿ ನಿಸ್ಸತ್ವ ಮಾಡುವುದರಿಂದ ಅವು ಸಾಧು ಆಗುವುದರೊಂದಿಗೆ, ಕಾಮವಾಸನೆಯಿಂದ ಸದಾ ಹಸುಗಳ ಮೇಲೆ 'ಅದ್ರಿ' ಹತ್ತಹೋಗುವ ಲಂಪಟತನ ತಪ್ಪಿ, ತಿಂದ ಮೇವು ಹೆಚ್ಚಾಗಿ ಮೈಹಿಡಿದು, ಕೆಲಸಕ್ಕೂ ಹೆಚ್ಚು ಶಕ್ತವಾಗುತ್ತವೆ. ಹೀಗೆ, ಹೋರಿ, ಟಗರು ಮೊದಲಾದವುಗಳಿಗೆ "ಬೀಜ ಒಡೆಸು"ವ ಕ್ರಮ ಈಗಲೂ ನಮ್ಮ ಗ್ರಾಮೀಣರಲ್ಲಿದೆ (ಈಗ ಆಸ್ಪತ್ರೆಯ ತಜ್ಞರು ಹೋರಿಯ ಬೀಜಗಳ ಮೇಲಿನ - ತೊಟ್ಟಿನ - ಭಾಗದ ನರಗಳನ್ನು ಇಕ್ಕಳದಿಂದ ಭದ್ರವಾಗಿ ಹಿಸುಕುತ್ತಾರೆ).

ನಮ್ಮ ಜನಪದರ ಈ ವೈಜ್ಞಾನಿಕ ತಂತ್ರ - ತಿಳುವಳಿಕೆ ಅಥರ್ವವೇದದಷ್ಟು ಪ್ರಾಚೀನವಾದುದೆಂಬುದು ಗಮನಾರ್ಹ. ಆದರೆ, ಅಮಾನವೀಯ ಸಂಗತಿ ಎಂದರೆ ಗಂಡಸರನ್ನು ಬೀಜ ಹಿಸುಕಿ ನಪುಂಸಕ ಗುಲಾಮರನ್ನಾಗಿ ಮಾಡುತ್ತಿದ್ದರೆಂಬುದು. 'ಪುರುಷರ ವೃಷಣವನ್ನು ಬಡಿದು ವಿಧೇಯದಾರರನ್ನಾಗಿ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದ ಮಂತ್ರಗಳು ಅಥರ್ವವೇದದಲ್ಲೇ ಇವೆ. (ಆಚಾರ್ಯ ೧೯೮೬ : ೨೪) ಎಂಬ ವಿದ್ವಾಂಸರ ಶೋಧ ಈ ಪ್ರಾಚೀನ ನಡವಳಿಯ ಮೇಲೆ ಭಾಷಿಕವಾಗಿ ಬೆಳಕು ಚೆಲ್ಲುತ್ತದೆ.

ಜನಪದರ 'ವಲಸೆ'

ಪ್ರಾಚೀನ ಜನಪದ ಸಮೂಹದಲ್ಲಿ ಊಳಿಗ/ಗುಲಾಮಿ ಜನಪದ ವರ್ಗವೊಂದು ರೂಪುಗೊಂಡಿತ್ತು ಎಂದಾಯಿತು. ಇವರೆಲ್ಲಾ ಸ್ಥಳೀಯರೇ ಅಥವಾ ಹೊರಗಿನಿಂದ ಬಂದವರೂ ಇದ್ದರೇ ? ಯಾವ ಕಾರ್ಯಗಳಿಗಾಗಿ ಅಂಥವರನ್ನು ತರಲಾಗುತ್ತಿತ್ತು ? ಎಂಬುದು ಮುಂದಿನ ಕುತೂಹಲದ ಪ್ರಶ್ನೆ.

ಇಂದು ಕನ್ನಡನಾಡಿನ ನಗರಗಳಲ್ಲೂ, ಹಳ್ಳಿಗಳಲ್ಲೂ ಗಾರೆ ಕೆಲಸ, ಬಡಗಿ ಕೆಲಸ ಮಾಡುತ್ತಿರುವವರು ಬಹುಮಂದಿ ಇದಕ್ಕಾಗಿ ಈಚೆಗೆ

ತಮಿಳುನಾಡು, ಆಂಧ್ರ ಕಡೆಯಿಂದ ಬಂದವರು / ಕರೆತಂದವರು. ರೈಲು ಇಲಾಖೆಯಲ್ಲಿ ತಮಿಳರೂ, ಅಂಚೆಯಲ್ಲಿ ಮಲೆಯಾಳಿಗಳೂ ತುಂಬಿರುವುದು ಎಲ್ಲರಿಗೂ ತಿಳಿದದ್ದೇ. ವಾಚ್‌ಮನ್ ಕೆಲಸಕ್ಕೂ ಹೊರ ಊರಿನ ತಮಿಳನೇ ಬೇಕೆ ? ಎಂಬ ಪ್ರಶ್ನೆ ಬಹಳ ಸಾರಿ ಏಳುತ್ತದೆ. ಇದಕ್ಕೆ, ಸ್ಥಳೀಯರು ಮುಂದೆ ಬರುವುದಿಲ್ಲ, ವಿಧೇಯತೆಯಿಂದ ದುಡಿಯುವುದಿಲ್ಲ, 'ಸ್ಕಿಲ್' ಇಲ್ಲ.... ಉತ್ಯಾದಿ ಸಬೂಬುಗಳನ್ನು ಕೆಲ ಮಾಲೀಕರು ಹೇಳುತ್ತಾರೆ. ಪ್ರಾಚೀನರಲ್ಲೂ ಇದೇ ಮನೋಭಾವ ಇತ್ತೇ ? ಎಂಬುದಕ್ಕೆ ಸಮರ್ಪಕ ಮಾಹಿತಿ ದೊರೆತಿಲ್ಲ. ಆದರೆ, ಆ ಕಾಲದ ರಾಜರ ಊಳಿಗ ವರ್ಗದಲ್ಲಿ ಮಹಿಳೆಯರೂ ಇದ್ದ ಮತ್ತು ಅವರು ಬಹುಮಟ್ಟಿಗೆ ಹೊರದೇಶಗಳಿಂದ ಬಂದವರಾಗಿದ್ದರೆಂಬುದರ ಬಗೆಗೆ ಹಾಗೂ ಅವರು ನಿರ್ವಹಿಸುತ್ತಿದ್ದ ವಿಶೇಷ ಕಾರ್ಯಗಳ ಬಗೆಗಂತೂ ಸಾಕಷ್ಟು ಮಾಹಿತಿಗಳಿರುವುದನ್ನು ಅಧ್ಯಯನಕಾರರು ಗುರುತಿಸಿದ್ದಾರೆ. ಅವುಗಳ ಪ್ರಕಾರ -

ಸಿಂಧೂ ಕಣಿವೆ ನಾಗರಿಕತೆಯ ಕಾಲದಿಂದಲೇ ಪ್ರಾಚೀನ ಭಾರತದೊಂದಿಗೆ ಗ್ರೀಕ್, ಇರಾನ್, ಕುಶಾನರಂತಹ ವಿದೇಶೀ ನಾಗರಿಕತೆಗಳ ಪ್ರಭಾವ ಆಗಿದ್ದಿತು (Upadhyaya 1978 : 141). ಈ ಪ್ರಭಾವ ಭಾರತೀಯ ಚಿತ್ರ, ಶಿಲ್ಪಕಲೆಗಳ ಮೇಲೂ ಆಗಿದ್ದಲ್ಲದೆ ಇಲ್ಲಿನ ಜನವರ್ಗದೊಂದಿಗೆ ವಿದೇಶೀ ಜನವರ್ಗವೂ ಬೆರೆತುಹೋಗಿದ್ದರ ಬಗೆಗೂ ದಾಖಲೆಗಳಿವೆ. ಶಿಲ್ಪಗಳು ಹಾಗೂ ಕೆಲ ಕಪ್ಪು ಜೇಡಿ ಮಣ್ಣಿನ (ಟೆರ್ರಾಕೋಟಾ) ಅವಶೇಷಗಳು ಮಥುರಾ ಪ್ರಾಂತ್ಯದಲ್ಲಿ ವಿವಿಧ ಜನಾಂಗಗಳು ನೆಲೆಸಿದ್ದ ಹಾಗೂ ಸ್ಥಳೀಯ ಜನಾಂಗದೊಂದಿಗೆ ಬೆರೆತುಹೋಗಿದ್ದಿರ ಕುರುಹು ನೀಡುತ್ತವೆ. ವಿದೇಶೀ ಮಹಿಳೆಯರಿಗೆ ಸಂಬಂಧಿಸಿ ಹೇಳುವುದಾದರೆ ಗ್ರೀಕ್ ಮಹಿಳೆಯರು ಇಲ್ಲಿನ ಶ್ರೀಮಂತರು ಹಾಗೂ ದೊರೆಗಳಲ್ಲಿ ಉದ್ಯೋಗಿಗಳಾಗಿದ್ದ ಬಗ್ಗೆ ನಿದರ್ಶನಗಳಿವೆ. ಪ್ರಾಚೀನ ಸಂಸ್ಕೃತ ನಾಟಕಗಳಲ್ಲಿ 'ಧನುರ್ಹಸ್ತ ಯವನಿ' ಎಂಬ ಪದ ದೊರೆಗಳಿಗೆ ಶಸ್ತ್ರಾಸ್ತ್ರಗಳನ್ನು ತಂದುಕೊಡುವ ಅರಮನೆ ಉದ್ಯೋಗಿಗಳಾಗಿದ್ದ ಗ್ರೀಕ್ ಮಹಿಳೆಯನ್ನೇ ಕುರಿತದ್ದಾಗಿದೆ (ಅದೇ, ಪು. 142). ದೊರೆಯು ಬೇಟೆ ಮತ್ತಿತರ

ಕ್ರೀಡೆಗಳಿಗೆ ಹೊರಟಾಗ ಈ ಗ್ರೀಕ್ ಮಹಿಳೆಯರು ಆತನ ಅಂಗರಕ್ಷಕರಾಗಿ ಸುತ್ತುವರೆಯುತ್ತಿದ್ದರೆಂಬ ಪ್ರಸ್ತಾಪವೂ ಇದೆ (ರಘುವಂಶ ಪುರಾಣ - XVI). 'ಅರ್ಥಶಾಸ್ತ್ರ', ಮೆಗಾಸ್ತಾನೀಸನ ಬರಹಗಳಲ್ಲೂ ಈ ಅಂಶಗಳು ಉಲ್ಲೇಖವಾಗಿವೆ (ಅದೇ ಪು. 142ರ ಅಡಿ ಟಿಪ್ಪಣಿ). ಚಾಮರ, ಬೀಸಣಿಗೆ, ಕೊಡೆ ಇತ್ಯಾದಿ ಹಿಡಿದು ನಿಂತ ಸೇವಕಿಯರೂ ಕಾಣಬರುತ್ತಾರೆ. ಲಕ್ನೋ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಿರುವ Raiting Pillar ಮೇಲೆ ಇರಾನಿ ಸ್ತ್ರೀಯೊಬ್ಬಳು ದೀಪವೊಂದನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ (ಅದೇ, ಪು. 153).

ಜನಪದ ಮಹಿಳಾ ಲೋಕ

ಪ್ರಾಚೀನ ಕಾಲದ ಜನಪದ ಮಹಿಳೆಯರ ನಿತ್ಯದ ಬದುಕು, ನಡವಳಿಗಳನ್ನು ತಿಳಿಸುವ ವ್ಯಾಪಕ ಮಾಹಿತಿಗಳೂ ನಮಗೆ ವಿವಿಧ ಆಕರಗಳಲ್ಲಿ ಕಾಣಬರುತ್ತವೆ. ಅಜಂತಾ ಗುಹಾ ಚಿತ್ರಗಳು ತ್ಯಾಗಮನೋಭಾವದ ಬೌದ್ಧ ಸನ್ಯಾಸಿಗಳಿಂದ ಚಿತ್ರಿತವಾಗಿದ್ದರೂ ಅವುಗಳಲ್ಲಿನ ವಿಷಯ ವೈವಿಧ್ಯ ಕೇವಲ ಆಧ್ಯಾತ್ಮಿಕಕ್ಕೆ ಸೀಮಿತವಾಗದೆ ಜನಸಾಮಾನ್ಯರಿಂದ ಹಿಡಿದು ರಾಜಮನೆತನ ದವರೆಗಿನ ಬಾಳ ಸನ್ನಿವೇಶಗಳನ್ನು ಒಳಗೊಂಡಿರುವುದು ಪ್ರಾಚ್ಯ ಜಾನಪದ ದೃಷ್ಟಿಯಿಂದ ಅಧ್ಯಯನ ಯೋಗ್ಯವಾಗಿವೆ. ಅಂದಿನ ಗ್ರಾಮೀಣ ಬದುಕೂ ಹೇಗೆ ವಿವರವಾಗಿ ಚಿತ್ರಿತವಾಗಿದೆ ಎಂಬುದಕ್ಕೆ ೭ನೆಯ ಶತಮಾನದ ಕಾಲಾವಧಿಯಲ್ಲಿ ನಿರ್ಮಿತವಾದ ಅಜಂತೆಯ ೧ನೆಯ ಗುಹೆಯಲ್ಲಿನ 'ನೃತ್ಯದೃಶ್ಯ'ವನ್ನು ಇಲ್ಲಿ ಸಮೀಕ್ಷಿಸಬಹುದು : "ಈ ಚಿತ್ರದಲ್ಲಿ ಹದಿಮೂರು ವ್ಯಕ್ತಿಗಳನ್ನು ಚಿತ್ರಕಾರ ತಂದಿರುವುದಲ್ಲದೆ, ಹಿನ್ನೆಲೆಯಲ್ಲಿ ತೋಟ, ಮನೆಯ ಮಾಳಿಗೆ, ಕಂಬಗಳನ್ನು ತೋರಿಸಿದ್ದಾನೆ. ಭಾರತೀಯರ ದೂರದೃಶ್ಯ (Perspective) ಕಲ್ಪನೆಗೂ ಈ ಚಿತ್ರ ಮಾದರಿಯಾಗಿದೆ. ಹಿನ್ನೆಲೆಯಲ್ಲಿರುವ ಮನೆಯ ಮುಂದಿನ ಪಡಸಾಲೆಯಲ್ಲಿ ಇಬ್ಬರು ಹೆಣ್ಣು ಮಕ್ಕಳು ನಿಂತುಕೊಂಡು, ಪ್ರಾಯಶಃ ಬೀದಿಯಲ್ಲಿ ಹೋಗುತ್ತಿದ್ದ ನೃತ್ಯಮೇಳವನ್ನು ವಿಸ್ಮಯದಿಂದ ನೋಡುತ್ತಿದ್ದಾರೆ.

ಅವರಲ್ಲಿ ಒಬ್ಬಳು ನೃತ್ಯ ನೋಡುವುದರಲ್ಲಿ ಆಸಕ್ತಳಾಗಿದ್ದಾಳೆ. ಇನ್ನೊಬ್ಬಳು ಅವಳ ಕಿವಿಯಲ್ಲಿ ಏನೋ ಹೇಳುವುದರಲ್ಲಿ ಆಸಕ್ತಳಾಗಿದ್ದಾಳೆ". ನೃತ್ಯ ಮೇಳದಲ್ಲಿ ಕೊಳಲು, ಮೃದಂಗ - ಕೋಲು ವಾದ್ಯಗಳು ಕಂಡುಬರುತ್ತಿವೆ... (ನೃತ್ಯಗಾತಿಯ) ಅಭಿನಯ ಭರತನಾಟ್ಯ ಸಂಪ್ರದಾಯವನ್ನು ಹೋಲುತ್ತಿದೆ...

"ಹೆಣ್ಣು ಮಕ್ಕಳ ಕೇಶಾಲಂಕರಣದ ವಿವಿಧ ಮಾದರಿಗಳು, ಉಡುಗೆ ತೊಡುಗೆಗಳ ಬಗೆಬಗೆಯ ಮಾದರಿಗಳು, ಹೂವು, ಹಣ್ಣು, ಪಕ್ಷಿ - ಪ್ರಾಣಿಗಳ ಚಿತ್ರಗಳು ಅಜಂತಾ ಚಿತ್ರಕಾರರ ಜೀವನ ಸಾಮೀಪ್ಯವನ್ನು ತೋರುತ್ತವೆ" (ಅ.ನ.ಕೃ. ೧೯೭೦ : ೩೧ - ೩೨).

"ಅಜಂತೆಯ ಚಿತ್ರರಾಶಿಯಲ್ಲಿ ಕಾಣಿಸಿಕೊಳ್ಳುವ ಸ್ತ್ರೀಯರೆಲ್ಲಾ ಸಾಮಾಜಿಕ ಜೀವನದಲ್ಲಿ ಗಣ್ಯಸ್ಥಾನ ಪಡೆದವರಲ್ಲ. ಅತಿ ಸಾಮಾನ್ಯರಾದ ಊಳಿಗದವರು, ದೂತಿಯರು, ಕೃಷೀವಲರು, ವಿವಿಧ ಕಾಯಕದವರನ್ನೂ ಅಜಂತೆಯ ಚಿತ್ರಕಾರರು ಪೂರ್ಣ ಗೌರವದಿಂದಲೇ ಚಿತ್ರಿಸಿದ್ದಾರೆ" (ಅದೇ, ಪು. ೮೫).

ಅಕ್ಬರನ ಕಾಲದಲ್ಲಿ ರಚಿತವಾದ ಒಂದು ಚಿತ್ರದಲ್ಲಿ 'ಪುರಾತನ ವೃಕ್ಷ. ಅದರ ಪಕ್ಕದಲ್ಲಿ ಗುಹೆ, ಹೊರಗೆ ಜಪಮಾಲೆ ಹಿಡಿದು ಬೆಂಕಿ ಕಾಯಿಸಿಕೊಳ್ಳುತ್ತಿರುವ ಯೋಗಿನಿ ; ಆಕೆಗೆ ಫಲಪುಷ್ಪ ಅರ್ಪಿಸುತ್ತಿರುವ ಇಬ್ಬರು ಕುಲೀನ ಸ್ತ್ರೀಯರನ್ನು ಚಿತ್ರಿಸಿದೆ. ರಾತ್ರಿಯಲ್ಲಿ ಬಹುಶಃ ಗುಪ್ತವಾಗಿ ಅವರು ಈ ಯೋಗಿನಿಯನ್ನು ಭೇಟಿ ಮಾಡಿರಬಹುದು. ಆ ಕಾರಣವೋ ಎಂಬಂತೆ ಒಬ್ಬಳ ಮುಖ ತುಸು ಭೀತಿಯಿಂದ ಕೂಡಿದೆ' (ಅದೇ, ಪು. ೩೮).

ಈ ಚಿತ್ರದ ವಿವರಗಳು ಈಗಿನಂತೆ ಆ ಕಾಲದಲ್ಲಿಯೂ ಮಾಂತ್ರಿಕರು, ಸಾಧುಸಂತರನ್ನು ಗುಪ್ತವಾಗಿ ಭೇಟಿಯಾಗಿ ತಮ್ಮ ಸಮಸ್ಯೆಗಳಿಗೆ ಪರಿಹಾರ ನಿರೀಕ್ಷಿಸುವ ಮಹಿಳೆಯರು ಅಧಿಕವಾಗಿದ್ದರು ಎಂಬುದರ ಮೇಲೆ ಬೆಳಕು ಚೆಲ್ಲುತ್ತವೆ.

ಕ್ರಿ. ಶ. ೧೨೨೮ರ ಸೌಂದತ್ತಿಯ ಶಾಸನವೊಂದು ರಾಣಿಯೊಬ್ಬಳ ಆದರ್ಶಗುಣ - ನಡತೆಯನ್ನು ವರ್ಣಿಸುವ ನೆಪದಲ್ಲಿ ಪರೋಕ್ಷವಾಗಿ ಆ ಕಾಲದ ಥರಾವರಿ ಸಾಮಾನ್ಯ - ಜನಪದ - ಸ್ತ್ರೀಯರ ಗುಣ ವಿಶೇಷಗಳನ್ನೂ ದಾಖಲಿಸಿರುವುದು ಈ ಸಂದರ್ಭದಲ್ಲಿ ಗಮನಿಸಬೇಕಿದೆ : 'ಮನೆಯಲ್ಲಿ ಏನಿದ್ದರೂ ಇಲ್ಲೆಂದು ಹೇಳಿ ಹಣ ಬಳಸಿಕೊಳ್ಳುವ, ಮನೆಯಲ್ಲಿ ಇದ್ದುದನ್ನು ಪತಿ, ಮಕ್ಕಳಿಗೆ ವಿನಿಯೋಗಿಸದೆ, ಕಣ್ಣು ತಪ್ಪಿಸಿ ಮುಚ್ಚಿಡುವ, ಮನೆಗೆ ಅತಿಥಿಗಳು ಬಂದರೆ ಕಂಡೂ ಕಾಣದಂತೆ ಹೋಗಿ ಅಡಗುವ, ಒಂದು ವೇಳೆ ಅವರು ಎದುರಾದರೆ ನೀವಾರೆಂದು ಕೇಳುವ, ಪರಪುರುಷರನ್ನು ಮನ್ನಿಸಿ ಕಪಟ ನಡತೆಯಲ್ಲಿ ತೊಡಗುವ..., ಅಂಗಳಕ್ಕೆ, ತಲೆವಾಗಿಲಿಗೆ, ಒಸಗೆಗೆ, ನೋಂಪಿಗೆ, ಅಂಗಡಿಗೆ, ಬಾಡಿನ ಸನ್ತೆಗೆ, ಬಾಯಿನಕ್ಕೆ ಹೋಗಿ ಪರಪುರುಷರೊಂದಿಗೆ ನೆರೆಯುವ, ವಾಚಾಳಿಯರಾಗಿ ದುಶ್ಚಟದಿಂದ ಪತಿಯನ್ನು ನಿಂದಿಸುವ, ಪತಿಯನ್ನು ವಶಗೊಳಿಸಿಕೊಳ್ಳಲು ಹತ್ತಾರು ಔಷಧಿಗಳನ್ನು ಪ್ರಯೋಗಿಸಿ ಅವರು ಪುರುಷ ಕ್ಷಯ, ಕಾಮಳೆ, ಪಾಂಡುಗಲ್ಮದಿಂದ ಬಳಲುವಂತೆ ಮಾಡುವ... ಅಟಮಟಕಾರ್ತಿಯರನ್ನು ಮಾಳಲದೇವಿಯರೊಂದಿಗೆ ಹೋಲಿಸಬಹುದೇ ?' ಎನ್ನುತ್ತಾನೆ, ಶಾಸನಕಾರ (ಎಲಿಗಾರ ೧೯೯೦ : ೩೦).

ಈ ಎಲ್ಲ ಗುಣ ವಿಶೇಷಗಳನ್ನು ಅಂದೂ ಇಂದೂ ಪುರುಷರಿಗೂ ಅನ್ವಯಿಸಬಹುದೆಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಸ್ವಾರಸ್ಯವಾದುದೆಂದರೆ ೧೨ನೆಯ ಶತಮಾನದ ಅಂದಿನ 'ಗ್ರಾಮ್ಯ' ಬದುಕು ಇಂದು ಸ್ವಲ್ಪವಾದರೂ ಬದಲಾಗಿದೆಯೇ ? ಗಂಡನ ಜೇಬಿನಿಂದ ಅಥವಾ ಹೆಂಡತಿಯ ಪರ್ಸ್‌ನಿಂದ ನೋಟು ಎಗರಿಸುವ, ನೌಕರಿಯ ನೆಪದಲ್ಲಿ ಹೊರಚಾಳಿ ಹೋಗುವ ವಿವಾಹಿತರು ಈ ಹೊಸ ಸಹಸ್ರಮಾನದಲ್ಲೂ ಎಷ್ಟೊಂದಿದ್ದಾರಲ್ಲಾ ! ಜನಪದಗೀತೆಯೊಂದರಲ್ಲಿ 'ನೀರಿಗಂತ ನಾನು ಬರ್ತೀನ್, ಸೌದಿಗಂತ ನೀನು ಬಾರೋ...' ಎಂದು ಗೆಣತಿಯೊಬ್ಬಳು ಗೆಣೆಯನಿಗೆ ಸೂಚನೆ ಕೊಡುವ ವಿಷಯ ಬರುತ್ತದೆ. ಆದರೆ, ಮೇಲಿನ ಶಾಸನದಲ್ಲಿ ಒಸಗೆ, ವ್ರತ, ಅಂಗಡಿ, ಬಾಡಿನ ಸಂತೆ (ಇದು ವಿಶೇಷ ಗಮನಾರ್ಹ)ಗಳೂ ಅವರ 'ವ್ಯವಹಾರ'ದ

ಸ್ಥಳಗಳಾಗಿದ್ದವಂತೆ, ಇಂದಿನ ನಾಗರಿಕರ ಮದುವೆ ಮಂಟಪ, ಜಾತ್ರೆ, ದೇವಸ್ಥಾನ, ಧಾಬಾ, ಕ್ಲಬ್ಬು, ಪಾರ್ಕುಗಳ ಹಾಗೆ !

ಹಣ ಸಾಲ - ಸೋಲ ಮಾಡುವುದು, ಬಡ್ಡಿ ವ್ಯವಹಾರ ಮಾಡುವುದು ನಮ್ಮ ಆರ್ಥಿಕ ವ್ಯವಸ್ಥೆಯ ಒಂದು ಭಾಗವೇ ಆಗಿಹೋಗಿದೆ. ಆದರೆ, ಇದು ಐದು ಸಾವಿರ ವರ್ಷಗಳಷ್ಟು ಹಿಂದಿನಿಂದಲೂ ಈ ನಾಡಿನಲ್ಲಿ ಜೀವಂತವಾಗಿದೆ ಹಾಗೂ ಇಂದಿನಂತೆ ಆ ಕಾಲದಲ್ಲೂ ಕೆಲ ಮಹಿಳೆಯರೂ ಬಡ್ಡಿ ವ್ಯವಹಾರದಲ್ಲಿ ಬದುಕಿದ್ದರು ಎಂಬುದೂ ಕುತೂಹಲಕರವಾಗಿದೆ. 'ಅಣ್ಣಮವೆಗ್ಗಡೆಯ ಮಗಳು ಹೊನ್ನಿಯವೆ' ಎಂಬುವವಳು ಬಡ್ಡಿ ವ್ಯವಹಾರ ಮಾಡಿ, ಬಂದ ನಫೆಯಿಂದ 'ಹರಿಹರ ದೇವರಿಗೆ ಗದ್ಯಾಣ ಒಂದರ ಬಡ್ಡಿಗೆ ವನಮಾಲೆ, ಮೂರರ ಬಡ್ಡಿಗೆ ನಂದಾದೀವಿಗೆ, ಒಟ್ಟು ನಾಲ್ಕು ಗದ್ಯಾಣ ಬಿಟ್ಟರು' ವಳೆಂದು ಕ್ರಿ. ಶ. ೧೨೫೫ರ ಹರಿಹರದ ಶಾಸನವೊಂದು ಆಕೆಯ ದಾನಗುಣವನ್ನು ಕೊಂಡಾಡಿದೆ.

ಈಕೆ ದೇವರ ಸೇವೆಗೆ ಬಡ್ಡಿ ಹಣ ನೀಡಿದರೆ, ಒಬ್ಬಾತ ತನ್ನ ತಂಗಿಯನ್ನೇ ದೇವರಿಗೆ ಅರ್ಪಿಸಿದ ವಿಷಯವೂ ಶಾಸನದಲ್ಲಿ ದಾಖಲಾಗಿದೆ. ಕ್ರಿ. ಶ. ೧೨೨೮ರ ಚನ್ನರಾಯ ಪಟ್ಟಣ ತಾ. ಕೆಂಬಾಳು ಗ್ರಾಮದ ಶಾಸನದ ಪ್ರಕಾರ "ಮಲ್ಲಿಕಾರ್ಜುನ ದೇವರಿಗೆ ದಾಸ ತಮ್ಮಡಿಯನೆಂಬವ ದೇವ ತೊತ್ತೆಂದು ಉಲ್ಲೇಖಿಸಲ್ಪಟ್ಟ ತನ್ನ ತಂಗಿ ಹೊನ್ನವೆ ಎಂಬುವವಳನ್ನು ದೇವರಿಗೆ ಸಮರ್ಪಿಸಿರಬಹುದು" (ಅದೇ) ಎಂಬ ಅಧ್ಯಯನಕಾರರ ಮಾತನ್ನು ಈ ದೃಷ್ಟಿಯಿಂದ ಪರಿಶೀಲಿಸಬಹುದು.

ಶಿಕ್ಷೆಗಳು

ಸೈನಿಕರು, ಕಳ್ಳರು... ಇವರೆಲ್ಲಾ ನಮ್ಮ ಜನಪದ ವರ್ಗದ ಸದಸ್ಯರೇ. ಸೆರೆ ಸಿಕ್ಕ ಸೈನಿಕರನ್ನು, ಶತ್ರು ದೇಶದ ಅಧಿಕಾರಿಗಳು ಅತ್ಯಂತ ಕ್ರೂರವಾಗಿ ದಂಡಿಸುವುದು ಈಗಲೂ ಇದ್ದದ್ದೇ. ಅಕ್ಬರನ ಕಾಲದಲ್ಲಿ ಇಂತಹ ಸೈನಿಕರಿಗೆ ಮೀಸಲಾಗಿದ್ದ ಘೋರ ಶಿಕ್ಷೆಯ ಒಂದು ಮಾದರಿಯು ಆ ಕಾಲದ ದಾಖಲೆಗಳಲ್ಲಿ ಹುದುಗಿದೆ. ನವೆಂಬರ್ ೫, ೧೫೫೬ರಲ್ಲಿ ನಡೆದ ಪಾಣಿಪಟ್ ಯುದ್ಧದಲ್ಲಿ

ಅಕ್ಬರನ ಕಡೆಯವರ ಬಾಣ ಹೇಮು ಎಂಬ ಮಹಾವೀರನ ಕಣ್ಣಿಗೆ ತೂರಿ ಆತ ಪ್ರಜ್ಞಾಹೀನನಾಗುತ್ತಾನೆ. ಅನೇಕರು ಸೆರೆ ಸಿಗುತ್ತಾರೆ. ಮುಂದೆ ಆ ಎಲ್ಲರ ತಲೆಗಳನ್ನು ಕತ್ತರಿಸಿ ಅವುಗಳಿಂದ 'ವಿಜಯದ ಗೋಪುರ' ಕಟ್ಟಲಾಗುತ್ತದೆ. ಪೀಟರ್ ಮಂಡೆ ಎಂಬ ಇಂಗ್ಲಿಷ್ ಯಾತ್ರಿ ಇದಾದ ಸು. ೭೫ ವರ್ಷಗಳ ನಂತರ ಇಲ್ಲಿಗೆ ಪ್ರವಾಸಕ್ಕೆ ಬಂದಿದ್ದವನು ಆಗಲೂ ಕ್ರಾಂತಿಕಾರಿಗಳು ಹಾಗೂ ಕಳ್ಳರ ತಲೆಗಳಿಂದ ಅಂತಹ ಗೋಪುರ ನಿರ್ಮಿಸುತ್ತಿದ್ದುದನ್ನು ಕಾಣುತ್ತಾನೆ ಮತ್ತು ತನ್ನ ಪುಸ್ತಕದಲ್ಲಿ ಅಂತಹ ಒಂದು ಚಿತ್ರವನ್ನು ಬಿಡಿಸಿದ್ದಾನೆ. ಇದೇ ವಿಷಯ ಕುರಿತು ಆ ಕಾಲದ ಕಲಾವಿದನೊಬ್ಬ (೧೫೯೦ರಲ್ಲಿ) ಒಂದು ವರ್ಣಚಿತ್ರ ರಚಿಸಿರುವುದೂ ಇದೆ (ನೋಡಿ : Gascoigne 1979 : 77).

ಜನಪದರ ವರ್ಣ - ಚಿತ್ರ ಕಲಾಜ್ಞಾನ

ಮಾನವನ ಪ್ರಾಚೀನ ಅಭಿವ್ಯಕ್ತಿಗಳಲ್ಲಿ ಚಿತ್ರಕಲೆಯೂ ಒಂದು. ಆಧುನಿಕ ಚಿತ್ರಕಲೆಗೆ ಮೂಲಾಂಕುರವಾದ ಗುಹಾಚಿತ್ರಗಳು ಯುರೋಪಿನ ಕೆಲ ಭಾಗಗಳಲ್ಲಿ ಸು. ೩೫ ಸಾವಿರ ವರ್ಷಗಳಷ್ಟು ಪ್ರಾಚೀನವಾದ ಗುಹೆಗಳಲ್ಲಿ ಕಂಡುಬಂದಿವೆ. ಇಷ್ಟು ಸುದೀರ್ಘ ಕಾಲದವರೆಗೆ ಆ ಚಿತ್ರಗಳು ಉಳಿದು ಬಂದಿರುವಲ್ಲಿ, ಅವರು ಬಳಸಿದ ಬಣ್ಣಗಳ ಗುಣ - ಶಕ್ತಿ, ಅನುಸರಿಸಿದ ತಂತ್ರ, ಪ್ರೌಢವೆನ್ನಬಹುದಾದ ಆ ಚಿತ್ರಗಳ ರೂಪ ಸಾದೃಶ್ಯ, ಕಲ್ಪನೆ... ಇವೆಲ್ಲಾ ಅಭ್ಯಸನೀಯವಾದುದು. ಸಂಶೋಧಕರ ಪ್ರಕಾರ - ಈ ಚಿತ್ರಗಳ ರಚನೆಗೆ "ಆವೆ ಮಣ್ಣಿನಲ್ಲಿ ಸಿಗುವ ವಿವಿಧ ಬಣ್ಣದ ಮೃತ್ತಿಕೆಗಳನ್ನು, ಇದ್ದಲು ಪುಡಿಯನ್ನು ... ಕೊಬ್ಬಿನಲ್ಲಿ ಅರೆದು ಅವುಗಳಿಂದ ಬಣ್ಣಗಡ್ಡಿಗಳನ್ನು ತಯಾರಿಸಿ, ರೇಖೆಗಳಿಗೆ ಕಡ್ಡಿಗಳನ್ನು, ಛಾಯೆಗಳಿಗೆ ಅವುಗಳ ಮೈಯನ್ನು ಬಳಸಿದ್ದು ಕಾಣುತ್ತದೆ (ಕಾರಂತ ೧೯೭೧ : ೪). ಹೀಗೆ, ಬಣ್ಣದ ಮಣ್ಣು, ಸಸ್ಯ ರಸ ಮೊದಲಾದ ನೈಸರ್ಗಿಕ ಬಣ್ಣಗಳನ್ನೇ ಚಿತ್ರ ರಚನೆಗೆ ಬಳಸುವ ಪದ್ಧತಿ ಮೊನ್ನೆ ಮೊನ್ನೆಯವರೆಗೂ ನಮ್ಮ ಜನಪದ ಕಲಾವಿದರಲ್ಲಿ ಇದ್ದಿತಲ್ಲವೇ ?

ನಾಗರಿಕತೆ ಬೆಳವಣಿಗೆಯ ಮುಂದಿನ ಹಂತದಲ್ಲಿ ಮಾನವ ತನ್ನ

ಚಿತ್ರಕಲಾಭಿವ್ಯಕ್ತಿಗಾಗಿ ನೆಲ, ಗೋಡೆಗಳನ್ನು ಬಳಸಿಕೊಂಡಿದ್ದಾನೆ. 'ನಾರದ ಶಿಲ್ಪ' ಎಂಬ ಗ್ರಂಥದಲ್ಲಿ "ಭೌಮಿಕಾ ಚಿತ್ರ" (ನೆಲದ ಮೇಲೆ ಬರೆವ ಚಿತ್ರ), "ಭಿತ್ತಿ ಚಿತ್ರ" (ಗೋಡೆ ಮೇಲೆ ಬರೆವುದು) ಹಾಗೂ "ಪ್ರಸಾರ ಚಿತ್ರ" (ಒಳಮಾಳಿಗೆಯ ಮೇಲೆ ಬರೆವ ಚಿತ್ರ) ಎಂಬ ಮೂರು ಬಗೆಗಳನ್ನು ಹೇಳಿದೆ (ಅ. ನ. ಕೃ. ೧೯೭೦: ೨೩). ಈ ಮೂರೂ ಪದ್ಧತಿಗಳು ನಮ್ಮ ಗ್ರಾಮೀಣ ಜನಪದ ಕಲಾವಿದರಲ್ಲಿ ಈಗಲೂ ಇವೆ.

ಭಾರತೀಯ ಪ್ರಾಚೀನ ಸಾಹಿತ್ಯದಲ್ಲಿ ಚಿತ್ರಕಲೆಯ ಲಕ್ಷಣ, ರಚನೆ ಮತ್ತಿತರ ವಿಚಾರಗಳನ್ನು ಕುರಿತ ವಿವರಣೆಗಳಿವೆ. 'ವಿನಯಪೀಠಕ' ಕೃತಿಯಲ್ಲಿ ಹಲವು ಭಿತ್ತಿ ಚಿತ್ರಗಳನ್ನು, ಚಿತ್ರ ಪ್ರದರ್ಶನಕ್ಕಾಗಿ ಇದ್ದ ಚಿತ್ರಾಗಾರಗಳನ್ನು ಕುರಿತ ವಿವರಣೆಗಳಿವೆ (ಅದೇ, ಪು. ೨೧). ಈ ಕೃತಿಯ ಕಾಲ ಕ್ರಿ. ಪೂ. ೩೦೦ ಎಂಬುದನ್ನು ಗಮನಕ್ಕೆ ತೆಗೆದುಕೊಂಡರೆ ಆ ಕಾಲಕ್ಕೇ ಚಿತ್ರಕಲೆ ಒಂದು ವಿಶೇಷ ಅಭಿವ್ಯಕ್ತಿ ಶಾಖೆಯಾಗಿ ಬೆಳೆದಿತ್ತು ಎಂಬುದರ ಅರಿವಾಗುತ್ತದೆ. ಆದರೆ, ಈಗ ದೊರೆತಿರುವಂತೆ, ಕ್ರಿಸ್ತ ಪೂರ್ವದ ಭಾರತೀಯ ಚಿತ್ರಕಲೆ ತಾಂತ್ರಿಕವಾಗಿ ಅಷ್ಟೊಂದು ಪ್ರಬುದ್ಧವಾಗಿರಲಿಲ್ಲ ಎಂಬ ಅಭಿಪ್ರಾಯವೂ ಇದೆ (ಅದೇ, ಪು. ೨೪.) ಬೌದ್ಧರ ಕಾಲದಲ್ಲಿ ಚಿತ್ರಕಲೆ ಗಣನೀಯವಾಗಿ ವೃದ್ಧಿಸಿರುವುದನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಅಜಂತೆಯ ಗುಹಾ ಚಿತ್ರಗಳು ಈ ಬೆಳವಣಿಗೆಯ ಅತಿ ಮುಖ್ಯ - ಪ್ರಾಚೀನ ದಾಖಲೆಗಳಾಗಿವೆ.

ಅಲಂಕಾರ

ನಮ್ಮ ಜನಪದರು ತಮ್ಮ ದಿನನಿತ್ಯದ ಬದುಕಿನಲ್ಲಿ ಅನುಸರಿಸುವ ಹತ್ತಾರು ನಡವಳಿಗಳು ನೂರಾರು, ಅಲ್ಲ, ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ಬದುಕಿನಲ್ಲಿಯೇ ಜನ್ಮ ತಾಳಿದ್ದವು ಎಂಬುದನ್ನು ಪ್ರಾಚ್ಯ ಜಾನಪದ ಅಧ್ಯಯನದಲ್ಲಿ ಕಂಡುಕೊಳ್ಳಬಹುದಾಗಿದೆ.

ಹರಪ್ಪಾ - ಮೊಹೆಂಜೊದಾರೋ ಕಾಲದ ಸ್ತ್ರೀ - ಪುರುಷರೂ ತಮ್ಮ

ಕಣ್ಣುಗಳಿಗೆ ' ಕಾಡಿಗೆ' ಯಂತಹ ಕಪ್ಪು ವಸ್ತುವನ್ನು ಹಚ್ಚಿಕೊಳ್ಳುತ್ತಿದ್ದರು - ಎಂಬುದನ್ನು ಅಲ್ಲಿನ ಉತ್ಖನನಗಳಲ್ಲಿ ದೊರೆತಿರುವ ಕಾಡಿಗೆ ಡಬ್ಬ, ಅಂಜನ ಕಡ್ಡಿಗಳು ಸಾರಿ ಹೇಳುತ್ತವೆ. ಈ ಬಗೆಯ ಕಡ್ಡಿಗಳು ಈಜಿಫ್ಟ್ ಮತ್ತಿತರ ಕೆಲ ಪ್ರಾಚೀನ ಸಂಸ್ಕೃತಿಗಳ ಅವಶೇಷಗಳಲ್ಲಿಯೂ ದೊರೆತಿರುವುದು (ನಾಯಕ ೧೯೯೪ : ೧೪) ಮಾನವನ ಅಲಂಕಾರಪ್ರಿಯ ನಡವಳಿಯ ಪ್ರಾಚೀನತೆ ಹಾಗೂ ವಿಶ್ವ ವ್ಯಾಪಕತೆಯ ಪ್ರತೀಕವಾಗಿದೆ.

ಹರಪ್ಪಾ ಕಾಲದವರ ಅಲಂಕಾರ ಪ್ರಿಯತೆಯಲ್ಲಿ ಕೇಶಾಲಂಕಾರವೂ ಸಹಜವಾಗಿಯೇ ಸೇರುತ್ತದೆ. ಆಗಿನ ಪುರುಷರು ಆಗೀಗಾದರೂ ತಲೆ, ಮುಖಗಳ ಕ್ಷೌರ ಮಾಡಿ (ಸಿ) ಕೊಳ್ಳುತ್ತಿದ್ದರು - ಎಂಬುದಕ್ಕೆ ಸಾಕ್ಷಿಯಾಗಿ ಆ ಕಾಲದ ಕ್ಷೌರದ ಕತ್ತಿಗಳೂ, ಕೂಪಗಳೂ ದೊರೆತಿವೆ. ಮಹಿಳೆಯರೂ ತಮ್ಮ ತಲೆಬಾಚಿ ಕೇಶಾಲಂಕಾರ ಮಾಡಿಕೊಳ್ಳುತ್ತಿದ್ದುದರ ಕುರುಹಾಗಿ ಕನ್ನಡಿ, ತಲೆಪಿನ್ನುಗಳೂ ದೊರೆತಿವೆ. ಅಷ್ಟೇ ಅಲ್ಲ, ದಂತದ ಬಾಚಣಿಗೆಯೂ ದೊರೆತಿದೆಯಂತೆ. ಇಂದು ನಮ್ಮಲ್ಲಿ ಬಳಕೆಯಲ್ಲಿರುವ ಮರ / ಪ್ಲಾಸ್ಟಿಕ್ ಬಾಚಣಿಗೆಯಂತೆ ಅದಕ್ಕೂ ಎರಡೂ ಬದಿಗಳಲ್ಲಿ ಹಲ್ಲುಗಳಿದ್ದು, ಸಮ ಚತುಷ್ಕೋನಾಕೃತಿಯಲ್ಲಿದೆಯಂತೆ. ಇದನ್ನು ಅವರು ಬಾಚುವುದಕ್ಕೂ, ಮುಡಿಯ ಆಭರಣದಂತೆಯೂ ಬಳಸುತ್ತಿದ್ದರೆನ್ನಲಾಗಿದೆ.

ಶ್ರೀಮಂತರಿಗೆ ದಂತದ ಬಾಚಣಿಕೆ ಇದ್ದಮೇಲೆ ಬಡವರಿಗೆ ಕೊಂಬು / ಮರದ ಬಾಚಣಿಗೆಗಳೂ ಇದ್ದಿರಬೇಕು. ಅಂಥವುಗಳನ್ನು ಮಾಡಿ, ಮಾರಿ ಬದುಕುತ್ತಿದ್ದ ಜನಪದ ಕುಶಲಿಗಳೂ ಇದ್ದಿರಲೇಬೇಕು.

ಹೇನು ಪುರಾಣ

ಬಾಚಣಿಗೆ ಕೇವಲ ಕೂದಲು ಸರಿಮಾಡುವುದಕ್ಕಷ್ಟೇ ಇರುತ್ತದೆಯೇ ? ಓಹೋ, ತಲೆ - ಎಂದಾಕ್ಷಣ ಹೇನಿನ ನೆನಪೂ ಬಂದು ಭಯವಾಗುತ್ತಿದೆಯೇ ? ಅನುಮಾನಿಸಬೇಡಿ. ಹೇನು, ಕೂರೆಗಳು ನಮ್ಮ ಜನಪದರನ್ನು ಸಾವಿರಾರು

ವರ್ಷಗಳಿಂದಲೂ ಕಾಡುತ್ತಾ ಬಂದ 'ಸಹಜೀವಿ' ಗಳು ಎಂಬುದನ್ನು ಪ್ರಾಚ್ಯ ಜಾನಪದ ಅಧ್ಯಯನದ ಪಳೆಯುಳಿಕೆಗಳು ಸಾಬೀತು ಪಡಿಸುತ್ತವೆ. ಇಲ್ಲೊಂದು ಪಳೆಯುಳಿಕೆ ದಾಖಲೆಯ ಮಾಹಿತಿ ಗಮನಿಸಿ :

ಜೆರೂಸಲೇಮಿನ ಹೆಬ್ರೂ ವಿಶ್ವವಿದ್ಯಾಲಯದ ಪರೋಪಜೀವಿ ಶಾಸ್ತ್ರಜ್ಞನಾದ ಕೆ. ವೈ. ಮುಮಕೋಗ್ಲು ಮತ್ತು ಇಸ್ರೇಲಿನ ಪುರಾತತ್ವ ಮ್ಯೂಸಿಯಂನ ಮೇಲ್ವಿಚಾರಕ ಜೋಸೆಫ್ ಜಿಯಾಸ್‌ರು ಪ್ಯಾಲೆಸ್ಟೈನ್ ಬಳಿ ಇರುವ ನಿರ್ಜೀವ ಸಮುದ್ರದಲ್ಲಿ (Dead sea) ದೊರೆತ ಪಳೆಯುಳಿಕೆಗಳಲ್ಲಿ ಅದರಲ್ಲೂ ಖುಮ್ರಾನ್‌ನಲ್ಲಿ ದೊರಕಿದ ಮರದ ಬಾಚಣಿಗೆಗಳಿಂದ ಹೇನಿನ ವಿವಿಧ ಅವಸ್ಥೆಗಳಾದ ಸೀರಿನಿಂದ ಪ್ರೌಢಾವಸ್ಥೆಯವರೆಗಿನ ವಿವಿಧ ಮಾದರಿಗಳು ಸಿಕ್ಕಿರುವ ವರದಿ ಮಾಡಿದ್ದಾರೆ. ಇಲ್ಲಿ ಕ್ರಿ. ಶ. ೧೩೨ - ೧೩೫ರಲ್ಲಿ ನಡೆದ ಎರಡನೆಯ ಜ್ಯೂಗಳ ದಂಗೆಯ ಕಾಲದ ಪಳೆಯುಳಿಕೆಗಳಲ್ಲಿ ಹುದುಗಿದ ಎಂಟು ಮುರುಕಲು ಬಾಚಣಿಗೆಗಳನ್ನೂ ಗುರುತಿಸಲಾಗಿದೆ.

ಹೇನಿನ ಹೊರ ಆಕಾರದಲ್ಲಿ ಇಂದಿನ ಹೇನಿಗಿಂತ ಭಿನ್ನತೆ ಕಾಣದಿದ್ದರೂ ರಾಸಾಯನಿಕ ವಿಶೇಷತೆ ಬಗೆಗೆ ಸುಳುವೇನಾದರೂ ಸಿಗಬಹುದೆಂಬ ನಿರೀಕ್ಷೆ ಇದೆ (ಹೇನುಗಳ ಜೀರ್ಣಾಂಗದಲ್ಲಿ ಮಾನವನ ರಕ್ತಕೋಶಗಳೇನಾದರೂ ಸಿಕ್ಕಲ್ಲಿ, ಡಿ.ಎನ್.ಎ. ಪರೀಕ್ಷೆಯಿಂದ ವಿಕಾಸವಾದಕ್ಕೆ ಸೂಚನೆಯೂ ದೊರೆಯಬಹುದೆಂಬ ಆಶಯ ಅವರದು. ವಿವರಕ್ಕೆ ನೋಡಿ : ಲೀಲಾ ೧೯೯೨ : ೧).

ಹೇನುಗಳು ಇದ್ದಮೇಲೆ ಕೂರೆಗಳೂ, ಪೀಡೆ ಹೇನುಗಳೂ ಇದ್ದಿರಬೇಕಲ್ಲವೇ ? ಬಟ್ಟೆ ಒಗೆಯದೆ, ಸ್ನಾನ ಮಾಡದೇ ಇದ್ದವರ ಒಡನಾಡಿ ಈ ಹೇನು, ಕೂರೆಗಳು. ಇದು ಪ್ರಾಚೀನ ಭಾರತೀಯ ನಾಗರಿಕರ ಅನುಭವಕ್ಕೂ ಬಂದಿತ್ತು - ಎಂದು ಕಾಣುತ್ತದೆ. ಅಂತೆಯೇ ಅವರೂ ಮೈ ಕೊಳೆ, ಬೆವರು, ವಾಸನೆಗಳಿಂದ ಮುಕ್ತರಾಗಲು ಅಗತ್ಯವಾದ ಉಪಾಯಗಳನ್ನು ಕಂಡುಕೊಂಡಿದ್ದರು. ಅವರು ತಮ್ಮ ದೇಹದ ಭಾಗಗಳನ್ನು ಮರದ ಬೊಡ್ಡೆಗೆ

ಮಸಾಜು ಮಾಡಿಕೊಳ್ಳುತ್ತಿದ್ದರು, ಅಥವಾ ಮಲ್ಲಿಕ, ಮಕರ, ದಂತಕ ಮುಂತಾದ ಮೈ ಉಜ್ಜುವುದಕ್ಕಾಗಿಯೇ ಇದ್ದ ಸಾಧನಗಳಿಂದ ಅಥವಾ ಬಟ್ಟೆಯನ್ನು ಸುರುಳಿ ಸುತ್ತಿಯೂ ಮೈ ಉಜ್ಜಿಕೊಳ್ಳುತ್ತಿದ್ದರು. ಕೈಗಳನ್ನು ಹೋಲುವ ಮರದ ಸಾಧನಗಳಿಗೆ ಸುವಾಸನಾ ದ್ರವ್ಯ ಲೇಪಿಸಿ ಅದರಿಂದ ಶರೀರ ಉಜ್ಜುತ್ತಿದ್ದ ಬಗೆಗೂ ಜಾತಕ ಕತೆಗಳಿಂದ ತಿಳಿದು ಬರುತ್ತದೆ ' (ನಾಯಕ ೧೯೯೪ : ೧೯).

ಬುದ್ಧನ ಕಾಲದಲ್ಲಿ ಉಗುರನ್ನು ಹಲ್ಲಿನಿಂದ ಕಚ್ಚಿ ತೆಗೆಯುವುದು ನಿಷಿದ್ಧವಾಗಿದ್ದರಿಂದ ಅದಕ್ಕಾಗಿ ಉಗುರು ಕತ್ತರಿ ಬಳಸುತ್ತಿದ್ದರು. ಗುಗ್ಗೆ ತೆಗೆಯಬಹುದಾದ ದುಂಡಾದ ತುದಿಗಳುಳ್ಳ ಕಂಚಿನ ಗುಗ್ಗೆ ಕಡ್ಡಿಗಳೂ ತಕ್ಷಶಿಲೆಯ ಉತ್ಖನನದಲ್ಲಿ ದೊರೆತಿವೆ (ಅದೇ, ಪು. ೩೦).

ಹಳೆಯ ಕಾಲದ ಗ್ರಾಮೀಣ ಮಹಿಳೆಯರ ಕೊರಳ ಸರದಲ್ಲಿ ಈಗಲೂ ಏನಿರದಿದ್ದರೂ ಹಲ್ಲು ಚುಚ್ಚೋಕಡ್ಡಿ, ಗುಗ್ಗೆ ಕಡ್ಡಿ, ಕಾಲಿಗೆ ಚುಚ್ಚಿದ ಮುಳ್ಳು ತೆಗೆಯಲು ಪಿನ್ನು, ಚಿಮುಟ... ಇಂತಹವು ಇದ್ದೇ ಇರುತ್ತವೆ.

ಮೂಗುನತ್ತು

ಮಹಿಳೆಯರು ಅಲಂಕಾರಪ್ರಿಯರು. ನಮ್ಮವರ ಅಲಂಕಾರದಲ್ಲಿ ಈ ಮೂಗುನತ್ತಿಗೂ ಸ್ಥಾನವುಂಟು. ಕೆಲ ಜಾತಿಗಳವರಲ್ಲಿ ಮೂಗುತಿಗೆ ವಿಶೇಷ ಪ್ರಾತಿನಿಧ್ಯವುಂಟು. ಮೈನೆರೆಯುತ್ತಿದ್ದ ಹಾಗೆಯೇ ಹುಡುಗಿಯ ಮೂಗು ಚುಚ್ಚುವತ್ತ ತಾಯಿಯ ಗಮನ ; ಸಣ್ಣ ನತ್ತು ಇಡಲೂ ಅನುಕೂಲವಿಲ್ಲದವರು ಚುಚ್ಚಿದ ಮೂಗಿಗೆ ಒಂದು ಹಂಚಿಕಡ್ಡಿ ತುಂಡನ್ನಾದರೂ ತಾತ್ಕಾಲಿಕವಾಗಿ ಇಡಬಯಸುತ್ತಾರೆ. ಇಲ್ಲವಾದರೆ, ಮದುವೆ ಕಾಲಕ್ಕೆ ಮೂಗುತಿಗೆ ರಂಧ್ರವಿಲ್ಲದಂತಾಗುತ್ತದೆ ಎಂಬ ಭಯ ! ಹಿಂದೆ ಕಿವಿ ಚುಚ್ಚದೇ ಗಂಡು ಮಕ್ಕಳಿಗೂ ಮದುವೆ ಮಾಡುತ್ತಿರಲಿಲ್ಲ. ಮದುವೆ ಸಂದರ್ಭದಲ್ಲಾದರೂ ಚುಚ್ಚಿ 'ಒಂಟಿ'ಗಳನ್ನು ಇಟ್ಟುಕೊಳ್ಳಲೇಬೇಕಿತ್ತು. ನಮ್ಮ ಜನಪದರ ಭಾವವಲಯದಲ್ಲಿ ಕಿವಿ ಮೂಗಿಗೆ ಇಲ್ಲದ್ದು, ಬಡತನದ, ವಿಧವೆಯ ಸಂಕೇತವೂ ಆಗುತ್ತದೆ. ಹೀಗೆ,

ಹಿಂದೂ ಜನಪದ ಮಹಿಳೆಯರ ಧಾರ್ಮಿಕ ವಲಯವನ್ನು ಪ್ರವೇಶಿಸಿದ ಈ ಮೂಗುನತ್ತು ನಮ್ಮ ಪ್ರಾಚೀನ ಜನಪದರ ಬದುಕನ್ನೂ ಹೀಗೇ ಆವರಿಸಿಕೊಂಡಿದ್ದಿರಬಹುದೇ ?

ವಿವಿಧ ಆಭರಣಗಳನ್ನು ಮೈ ತುಂಬ ಧರಿಸಿದ ಭಿನ್ನಾಣಗಿತ್ತಿಯರನ್ನು ಪ್ರಾಚೀನ ಚಿತ್ರ-ಶಿಲ್ಪಗಳಲ್ಲಿ ಕಲಾವಿದರು ಕಡೆದಿರಿಸಿದ್ದಾರೆ. ಅವುಗಳನ್ನು ನೋಡಿರುವ ನಮಗೆ ಅಲ್ಲೆಲ್ಲಾದರೂ ಮೂಗುತಿ ಸುಂದರಿಯರೂ ಇದ್ದಿರಬಹುದೆಂದು ಸಹಜವಾಗಿ ಅನ್ನಿಸುತ್ತದೆ. ಆದರೆ, ಪ್ರಾಚ್ಯ ದಾಖಲೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಸೋಜಿಗ : ಮುಸ್ಲಿಂ ಪೂರ್ವ ಸಾಹಿತ್ಯದಲ್ಲಿ ಮೂಗಿನ ಆಭರಣಗಳ ಬಗ್ಗೆ ಉಲ್ಲೇಖಗಳೇ ಇಲ್ಲ ! ಹಿಂದೂಗಳ ಎಲ್ಲಾ ಚಿತ್ರ, ಶಿಲ್ಪಗಳೂ ಈ ಆಭರಣವನ್ನು ಕೈಬಿಟ್ಟಿವೆ ! ಅಂದರೆ, ಆ ಕಲಾಬಾಲಿಕೆಯರು ಮೂಗುನತ್ತು ಧರಿಸಿಲ್ಲ. ಇದಕ್ಕೆ ಕಾರಣ ಇಷ್ಟೇ : ಮಧ್ಯಯುಗ ಪೂರ್ವದವರೆಗೆ ಈ ಆಭರಣ ಭಾರತೀಯರಿಗೆ ಅಪರಿಚಿತವಾಗಿತ್ತು. ಅದು ಭಾರತೀಯ ಮಹಿಳೆಯರಿಗೆ ಪರಿಚಯವಾದದ್ದೇ ಭಾರತಕ್ಕೆ ವಾಯುವ್ಯ ದಿಕ್ಕಿನಿಂದ ದಂಡೆತ್ತಿ ಬಂದ ಮುಸ್ಲಿಮರಿಂದ ಇದ್ದಿರಬಹುದು ಎಂದು ಅಧ್ಯಯನಕಾರರು ಅಭಿಪ್ರಾಯ ಪಡುತ್ತಾರೆ (ನೋಡಿ Chopra 1963 : 27). ಈಗಲೂ ನಮ್ಮಲ್ಲಿ ತಿಗಳರಂತಹ ಕೆಲ ಜಾತಿಯ ಹೆಂಗಸರು ಮೂಗುನತ್ತು ಇಡುವುದಿಲ್ಲ ಎಂಬುದು ಈ ಪ್ರಾಚೀನ ಪರಿಪಾಠದ ಜೀವಂತ ಪಳೆಯುಳಿಕೆ ಎನ್ನಬಹುದು.

'ಪರ್ಷಿಯನ್‌ನಲ್ಲಿ ಮೂಗುತಿಗೆ ನಟಾನಿ, ಬುಲಾಕಿ ಮತ್ತಿತರ ಸಂವಾದಿ ಶಬ್ದಗಳಿವೆ. 'ನಟಾನಿ' ಎಂಬುದರ ತೆಲುಗು ರೂಪ 'ನತ್ತು' ಆಗಿದ್ದು, ಈ ಆಭರಣ ಪರ್ಷಿಯಾದಿಂದ ಆಮದಾದದ್ದು ಎಂದು ಊಹಿಸಬಹುದಾಗಿದೆ' (Uma Maheswari 1995 : 33) ಎಂಬ ಅಭಿಪ್ರಾಯವನ್ನು ಇದಕ್ಕೆ ಪೂರಕವಾಗಿಯೇ ಗಮನಿಸಬಹುದಾಗಿದೆ.

ಊರು - ಕೇರಿ

ಮನುಷ್ಯನ ಮೂಲಭೂತ ಅಗತ್ಯಗಳಲ್ಲಿ ಒಂದಾದ ವಸತಿ ಮರದ ಪೊಟರೆ, ಗವಿ ಮೊದಲಾದವುಗಳಿಂದ ಪ್ರಾರಂಭಿಸಿ ಇಂದು ಬಹು ಮಹಡಿ ಕಟ್ಟಡಗಳವರೆಗೆ ವಿವಿಧ ಹಂತಗಳಲ್ಲಿ - ಮಾದರಿಗಳಲ್ಲಿ - ಬೆಳೆಯುತ್ತಾ ಬಂದಿದೆ. ಆಧುನಿಕ ತಂತ್ರಜ್ಞಾನ, ಯಾಂತ್ರಿಕ ಸಲಕರಣೆಗಳಿಂದ ಇಂದು ನಗರಗಳಲ್ಲಿ ಬೃಹತ್ ಕಟ್ಟಡಗಳ ರಚನೆ ಸುಲಭವಾಗಿದೆ. ಈಗಿನ ಗ್ರಾಮೀಣ ಜನಪದರು ಬಹುಮಟ್ಟಿಗೆ ತಮ್ಮ ಸಾಂಪ್ರದಾಯಿಕ ಪದ್ಧತಿಯ ಅರಿವು, ಸಲಕರಣೆಗಳು ಹಾಗೂ ದೈಹಿಕ ಪರಿಶ್ರಮವನ್ನು ಅವಲಂಬಿಸಿ ಮನೆಗಳ ನಿರ್ಮಾಣ ಮಾಡುತ್ತಿದ್ದರೂ ಅವರಿಗೆ ಆಧುನಿಕ ಸಲಕರಣೆ, ತಾಂತ್ರಿಕ ಅರಿವುಗಳ ನೆರವೂ ಸಾಂದರ್ಭಿಕವಾಗಿ ಆಗುತ್ತಿರುತ್ತದೆ ಎಂಬುದು ಸಹಜವೇ ಆಗಿದೆ.

ಆದರೆ, ನೂರಾರು ವರ್ಷಗಳ ಹಿಂದೆ ಇಷ್ಟೆಲ್ಲಾ ತಾಂತ್ರಿಕ ಪ್ರಗತಿ 'ಆಗಿಲ್ಲ'ದ ಕಾಲದಲ್ಲಿ ಅದ್ಭುತ ವಿನ್ಯಾಸ, ಪರಿಣತಿಯ ಅರಮನೆಗಳನ್ನು, ಕೋಟೆ ಕೊತ್ತಲುಗಳನ್ನು ಆಗಿನ ಜನ ಕಟ್ಟಿರುವುದು, ಅವುಗಳಲ್ಲಿ ಕೆಲವಾದರೂ ಶತಮಾನಗಳಿಂದ ಗಟ್ಟಿಮುಟ್ಟಾಗಿ ಉಳಿದುಬಂದಿರುವುದು ಪ್ರಾಚೀನ ಗೃಹನಿರ್ಮಾಣ ಜ್ಞಾನದ ಉನ್ನತ ಸಾಕ್ಷಿಗಳೇ ಆಗುತ್ತವೆ. ಆದರೆ ಅವರು ಆಗ ಅನುಸರಿಸುತ್ತಿದ್ದ ತಾಂತ್ರಿಕತೆಯ ಬಗ್ಗೆ ನಮಗೆ ಹೆಚ್ಚಿನ ಮಾಹಿತಿಗಳು ಲಭ್ಯವಾಗುವುದಿಲ್ಲ. ಮನೆಗೆ ತಳಪಾಯ ಹಾಕುವುದು, ಸೇರುಮಣ್ಣು ಹದವಾಗಿ ಕಲಸುವುದರಿಂದ ಹಿಡಿದು ಮಾಳಿಗೆಯಲ್ಲಿ ದೋಣಿಬಾಯಿ ಇಡುವವರೆಗಿನ ವಿವಿಧ ಹಂತಗಳ ತಾಂತ್ರಿಕ ಅಂಶಗಳನ್ನು ಆಗಿನ ಯಾರೂ ಶಾಸ್ತ್ರ ಗ್ರಂಥಗಳಲ್ಲಿ ದಾಖಲಿಸುವ ಯತ್ನ ಮಾಡದ್ದು ಪ್ರಾಚ್ಯ ವಸತಿ ಜ್ಞಾನ ಪರಂಪರೆಯ ಅಧ್ಯಯನಕ್ಕೆ ಬಹುದೊಡ್ಡ ಕೊರತೆಯಾಗಿದೆ. ಇಂತಹ ಕುಲಕಸುಬಿನ ತಂತ್ರ ವಿವರಗಳು ತಲೆಮಾರಿನಿಂದ ತಲೆಮಾರಿಗೆ 'ನೋಡಿ ಕಲಿ - ಮಾಡಿ ತಿಳಿ' ಆಧಾರದ ಮೇಲೆ ಹರಿದು ಬರುತ್ತಿದ್ದುದರಿಂದ ಅವರಿಗೆ ಅದನ್ನೆಲ್ಲಾ ಪ್ರತ್ಯೇಕ ಬರೆದಿಡುವ ಅಗತ್ಯ ಕಂಡು ಬಂದಿರಲಾರದು (ಬಹಳ ವೇಳೆ ಅವರು ಅನಕ್ಷರಸ್ಥರಾಗಿರುತ್ತಿದ್ದು ಅಥವಾ

ತಮ್ಮ ಕಸುಬಿನ ಗುಟ್ಟು ಇತರರಿಗೆ ಸುಲಭ ಲಭ್ಯವಾಗದಿರಲಿ ಎಂಬುದೂ ಇದರ ಹಿಂದಿನ ಇತರ ಕಾರಣಗಳಾಗಿರಬಹುದು). ಕಾಲಾಂತರದಲ್ಲಿ ಅಂತಹ ತಲೆಮಾರುಗಳು ನಶಿಸಿದ್ದು ಅಥವಾ ವೃತ್ತಿಪಲ್ಲಟಗಳಾಗಿದ್ದರಿಂದಲೂ ಅವರ ತಂತ್ರಜ್ಞಾನ ವಿವರಗಳು ಕ್ರಮೇಣ ಮರೆಯಾಗಿವೆ.

ಹೀಗೆ ಪ್ರಾಚೀನ ಗೃಹನಿರ್ಮಾಣ ತಂತ್ರಜ್ಞಾನ, ಗೃಹವಿನ್ಯಾಸಗಳ ಬಗೆಗೆ ನೇರ ಮಾಹಿತಿ ನೀಡುವ ಆಕರ ಗ್ರಂಥಗಳಿಲ್ಲದ್ದು ದೊಡ್ಡ ಕೊರತೆಯಾಗಿದ್ದರೂ ಕೆಲ ಅನ್ಯ ಪ್ರಾಚ್ಯ ದಾಖಲೆಗಳ ಮೂಲಕ ಪರೋಕ್ಷವಾಗಿಯಾದರೂ ಆ ಕೊರತೆಗಳನ್ನು ಸ್ವಲ್ಪ ಮಟ್ಟಿಗೆ ತುಂಬಬಹುದು ಎಂಬುದು ಪ್ರಾಚ್ಯ ಜಾನಪದ ಅಧ್ಯಯನದಲ್ಲಿನ ವಿಶೇಷವಾಗುತ್ತದೆ. ೩೦೦-೪೦೦ ವರ್ಷಗಳ ಹಿಂದೆ ಭಾರತೀಯರ ಮನೆಗಳ ಸಾಂಪ್ರದಾಯಿಕ ವಿನ್ಯಾಸ, ಅಲಂಕಾರ, ಗೃಹೋಪಕರಣಗಳು, ಮನೆಗಳ ಪರಿಸರ, ಶ್ರೀಮಂತರಿಗಾಗಿ ಕೂಲಿಯಾಳುಗಳು ಡೇರಾಗಳನ್ನು ನಿರ್ಮಿಸುತ್ತಿದ್ದಾಗಿನ ವಿಧಾನ, ಕೋಟೆ - ಕೊತ್ತಲಗಳನ್ನು ಕಟ್ಟುವ ಕ್ರಮ, ಗ್ರಾಮ ವಿನ್ಯಾಸ - ಪರಿಸರ ಇತ್ಯಾದಿ ಹಲವಾರು ಅಂಶಗಳಿಗೆ ಸಂಬಂಧಿಸಿದ ವಿವರಗಳನ್ನು ನಾವು ಕೆಲ - ಆಕರಗಳ ಮೂಲಕ ಅಭ್ಯಾಸ ಮಾಡಬಹುದಾಗಿದೆ. :

ಕೌಟಿಲ್ಯನ 'ಅರ್ಥಶಾಸ್ತ್ರ' ಮೊದಲಾದ ಕೆಲ ಗ್ರಂಥಗಳಲ್ಲಿ ಆಯಾ ಕಾಲದ ಗ್ರಾಮ ವಿನ್ಯಾಸಕ್ಕೆ ಸಂಬಂಧಿಸಿದ ಮಾಹಿತಿಗಳು ನಿರೂಪಿತವಾಗಿವೆ. (ಗೋವಿಂದರಾಜು (ಅ)೨೦೦೦ : ೮೬). ಕೆಲ ಶಾಸನಗಳಲ್ಲೂ ಅಂತಹ ವಿವರಗಳಿವೆ (ಅದೇ, ಪು. ೯೩). ತುಳುವಿನ ಪಾಡ್ದನಗಳಲ್ಲಿ ಪ್ರಾಚೀನ ಗುತ್ತಿನ ಮನೆಗಳ ವಿನ್ಯಾಸದ ಬಗೆಗಿನ ಅಂಶಗಳು ಲಭ್ಯವಾಗುತ್ತವೆ (ಮಾನವಿಕ ಕರ್ನಾಟಕ ಸಂ. ೨೫ - ೨೬ ; ಪು. ೧೫).

ಉತ್ಖನನಗಳಲ್ಲಿ ದೊರೆತಿರುವ ಹಲವು ಸಾಕ್ಷ್ಯಗಳ ಮೂಲಕ ನಾವು ಆಯಾ ಕಾಲದಲ್ಲಿ ಗೋಡೆಗಳನ್ನು ಕಟ್ಟಲು ಬಳಸುತ್ತಿದ್ದ ಸಾಮಗ್ರಿ, ಗೃಹ ವಿನ್ಯಾಸ, ಪರಿಸರ...... ಇತ್ಯಾದಿಗಳನ್ನು ಅರಿಯಬಹುದಾಗಿದೆ. ನಿದರ್ಶನಕ್ಕೆ - ಮಣ್ಣು ಹಾಗೂ ಇಟ್ಟಿಗೆಗಳಿಂದ ಊರು ಸುತ್ತಾ ಹೊರಗೋಡೆ ಕಟ್ಟುತ್ತಿದ್ದ ಪದ್ಧತಿ

'ಅಹರ್ ಸಂಸ್ಕೃತಿ'ಯಲ್ಲಿದ್ದಿತು.* ಕಿಲ್ಲೆಯ ಗೋಡೆಗೆ ಸುಟ್ಟ ಇಟ್ಟಿಗೆ ಬಳಸುತ್ತಿದ್ದರು. ಕೆಲವೆಡೆ ಬಿಸಿಲಲ್ಲಿ ಒಣಗಿಸಿದ ಇಟ್ಟಿಗೆ, ಕಲ್ಲಿನ ಮಾದರಿಗಳೂ ಅಲ್ಲಿ ಸಿಕ್ಕಿವೆ. ಮರಳು, ಜೇಡಿಮಣ್ಣು ಹಾಗೂ ಸುಣ್ಣದ ಮಿಶ್ರಣದ ಗಚ್ಚು (ಗಾರೆ) ಬಳಕೆಯೂ ಕಂಡುಬಂದಿದೆ.

ಮನೆಯ ಮಾಡನ್ನು ಕಟ್ಟಿಗೆಯ ಪಕ್ಕಾಸು, ರೀಪುಗಳಿಂದ ಕಟ್ಟುವ ಅರಿವು ಇದಾಗಲೇ ಅವರಲ್ಲಿತ್ತು. ಕಲ್ಲಿನ ಗೋಡೆಯನ್ನು ಕೆಸರಿನ ಲೇಪದಿಂದ, ಮಣ್ಣಿನ ಗೋಡೆಗಳಾದರೆ ಅರಲು, ಸೆಗಣಿಗಳಿಂದ ತೊಡೆಯುತ್ತಿದ್ದರು. ಚಪ್ಪರವನ್ನೂ ಹಾಕುತ್ತಿದ್ದರು - ಎನ್ನಲಾಗಿದೆ.

ಮನೆಗಳಿಗೆ ಬೇಕಾಗುವ ಕಲ್ಲಿನಲ್ಲಿ ಎರಡು ಗುಣವಿಶೇಷಗಳಿರುತ್ತವೆ. ಹಸೀತಲ್ಲು ಹಾಗೂ ಸುಟ್ಟಕಲ್ಲು. ಬೇಕಾದ ಆಕಾರದ ಸೈಜುಗಲ್ಲು ಮತ್ತು ಚಪ್ಪಡಿಗಳನ್ನು ಎಲ್ಲಾ ಬಂಡೆಗಳಿಂದಲೂ ಸುಲಭವಾಗಿ ಎಬ್ಬಲು ಆಗುವುದಿಲ್ಲ. ಆದ್ದರಿಂದ, ಅಂತಹ ಬಂಡೆಗಳ ಮೇಲೆ ಏನಾದರೂ ಉರುವಲು ಹಾಕಿ, ಬಿಸಿ ಮಾಡಿ ಕಬ್ಬಿಣದ ಚಾಣ, ಚಮ್ಮಟಿಕೆಗಳಿಂದ ಕಲ್ಲು ಸೀಳುವ ಪದ್ಧತಿ ಈಗಲೂ ಇದೆ (ವೈಯಕ್ತಿಕ ಮಾಹಿತಿ : ಕರಿಯಪ್ಪ, ೧೫-೪-೨೦೦೧). ಆದರೆ, ಇದು ಸು. ೪೫೦೦ ವರ್ಷಗಳಷ್ಟು ಪುರಾತನವಾದ ತಿಳಿವಳಿಕೆ ತಂತ್ರಜ್ಞಾನ ಎಂಬುದರ ಮೇಲೂ 'ಅಹರ್ ಸಂಸ್ಕೃತಿ' ಬೆಳಕು ಚೆಲ್ಲುತ್ತದೆ. ಆಗಿನ ಕಾಲದಲ್ಲಿ ಬಳಕೆಯಲ್ಲಿದ್ದ ತಾಮ್ರದ ಉಪಕರಣಗಳಿಂದ ಗ್ರೆನೈಟ್ ಹಾಗೂ ಗ್ನೀಸ್ ಬಂಡೆ ಒಡೆದು ತೆಗೆಯಲು ಆಗದ್ದರಿಂದ, ಬೆಂಕಿಯನ್ನು ಹಾಕಿ, ಕಾದ ಬಂಡೆಗೆ ನೀರು ಹಾಕಿ ಕಲ್ಲಿನ ಸುತ್ತಿಗೆ, ತಾಮ್ರ ಹಾಗೂ ಕಟ್ಟಿಗೆಯ ಬೆಣೆಗಳಿಂದ ಕಲ್ಲಿನ ತುಂಡುಗಳನ್ನು ಬೇರ್ಪಡಿಸುತ್ತಿದ್ದರು - ಎಂದು ಸಂಶೋಧಕರು ಹೇಳುತ್ತಾರೆ (ವಿವರಕ್ಕೆ ನೋಡಿ : ಹೆಗಡೆ, ೧೫-೦೪-೨೦೦೧).

---

* ಸು. ೪೫೦೦ ವರ್ಷಗಳಷ್ಟು ಹಿಂದಿನ ಹರಪ್ಪಾ ಸಂಸ್ಕೃತಿಯಷ್ಟೇ ಹಳೆಯದಾದ ಈ ಅಹರ್‌ನಾಗರಿಕತೆ ರಾಜಸ್ಥಾನದ ಉದಯಪುರದ ಸಮೀಪದ ಬಲಾತಲ ಎಂಬ ಗ್ರಾಮದಲ್ಲಿದ್ದುದನ್ನು ೧೯೫೦ರ ಈಚೆಗಿನ ಉತ್ಖನನದಲ್ಲಿ ಪತ್ತೆ ಹಚ್ಚಲಾಗಿದೆ.

ಈ ಎಲ್ಲಾ ದಾಖಲೆಗಳು ಆ ಕಾಲದ ವಿವರಗಳನ್ನು ಸ್ವಲ್ಪಮಟ್ಟಿಗೆ ಕಲ್ಪಿಸಿಕೊಳ್ಳಲು ನೆರವಾಗುತ್ತವೆಯೇ ಹೊರತು ಆಗಿನ ಯಥಾ ಚಿತ್ರವನ್ನು ನಮ್ಮ ಕಣ್ಣಮುಂದೆ ತಂದಿಡುವಲ್ಲಿ ಸಮರ್ಥವಾಗುವುದಿಲ್ಲ. ಈ ಮಿತಿಯನ್ನು ಮೀರಿ, ಅಲ್ಲಿನ ಸೂಕ್ಷ್ಮವಿವರಗಳನ್ನು ನಮ್ಮ ಕಣ್ಣಿಗೇ ಕಾಣುವಂತೆ ತಂದು ನಿಲ್ಲಿಸುವಂತಹವು ಪ್ರಾಚೀನ ಚಿಕಣಿ ಚಿತ್ರಗಳು. ಉದಾಹರಣೆಗೆ -

ದನದ ಕೊಟ್ಟಿಗೆ : ಶ್ರೀಕೃಷ್ಣನಿಗೆ ಸಂಬಂಧಿಸಿದ ಒಂದು ಚಿತ್ರದಲ್ಲಿ ದನಗಳ ಕೊಟ್ಟಿಗೆಯ ಚಿತ್ರಣವಿದೆ. ಇದರಲ್ಲಿ ದನಗಳನ್ನು ಕಟ್ಟುತ್ತಿದ್ದ ಗುಜ್ಜುಗಳು, ದನಗಳ 'ಕಣ್ಣಿ' (ಹಗ್ಗ) ಗಳನ್ನೂ ಕಲಾವಿದ ಸಹಜವಾಗಿರುವಂತೆ ಚಿತ್ರಿಸಿದ್ದಾನೆ. ಈ ಚಿತ್ರದ ಮೂಲಕ ಆ ಕಲಾವಿದನ ಪ್ರದೇಶ, ಆ ಕಾಲದ ಗೋಪಾಲಕರ ಗೃಹ ವಿನ್ಯಾಸವನ್ನು ಅರಿಯುವ ಜೊತೆಗೇ, ಕರ್ನಾಟಕವೇ ಅಲ್ಲದೆ, ದೇಶದ ಇತರ ಬೇರೆ ಬೇರೆ ಭಾಗಗಳಲ್ಲಿ ಈಗಲೂ ಗೋಪಾಲಕರು ದನಕಟ್ಟಲು ಅನುಸರಿಸುತ್ತಿರುವ ಕ್ರಮಗಳನ್ನು -'ಗ್ಯಾಂತಿಕೆ'ಗಳು, ಅಲ್ಲಿನ ಪರಿಕರ, ಅವುಗಳ ಆಕಾರ-ತೌಲನಿಕವಾಗಿ ಅಭ್ಯಾಸ ಮಾಡಬಹುದಾಗಿದೆ.

ಹಳ್ಳೀಮನೆ : ೧೬೦೩ರ ಕಾಲದ ಮೊಘಲ್ ಶೈಲಿಯ (ಆಗ್ರ) ಒಂದು ವರ್ಣ ಚಿತ್ರದಲ್ಲಿ 'ಕವಿಯ ಮನೆ'ಯನ್ನು ಚಿತ್ರಿಸಿದ್ದು, ಅದರಲ್ಲಿನ ಕೆಲ ವಿವರಗಳು ಗಮನಿಸುವಂತಿವೆ : ಅದೊಂದು ಮಣ್ಣಿನ ಮನೆ ; ಗೋಡೆಯೂ ಮಣ್ಣಿನದೇ. ಮನೆ ಮುಂದೆ ಚಿಕ್ಕ ಜಗಲಿ, ಮೇಲೆ ವಪ್ಪಾರ. ಅದಕ್ಕೆ ಸಣ್ಣ ಕಂಬ; ಪಕ್ಕದಲ್ಲೊಂದು ಅಡ್ಡಗೋಡೆ. ಮನೆ ಮುಂಬಾಗಿಲ ಪಕ್ಕ ಸಣ್ಣಗೂಡುಗಳು, ಒಂದು ಗೂಟ. ಅದಕ್ಕೆ ನೇತು ಹಾಕಿದ ಬಟ್ಟೆ.... ಇಷ್ಟಲ್ಲದೆ, ಅಂಗಳದಲ್ಲಿ ಕೋಳಿ ಮತ್ತು ಮರಿಗಳು, ಒಂದು ನಾಯಿ, ಮಾಳಿಗೆ ಮೇಲೆ ಪಾರಿವಾಳಗಳು, ಪಕ್ಕದಲ್ಲಿನ ಬಾವಿಯಿಂದ ನೀರು ತರುತ್ತಿರುವ ಮಹಿಳೆ... ಇದೊಂದು ಯಥಾವತ್ ನಾನ್ನೂರು ವರ್ಷಗಳ ಹಿಂದಿನ ಜನಪದ ಗೃಹವೇ ಆಗಿದೆ. ಹೀಗಾಗಿ, ಈ ಚಿತ್ರವನ್ನು ನೋಡುತ್ತಿದ್ದರೆ, ನಮ್ಮ ನಾಡಿನ ಈಗಿನ ಕುಗ್ರಾಮವೊಂದರ ಜನಪದ ನಿವಾಸದ ಎದಿರೇ ನಿಂತಂತೆ ಭಾಸವಾಗುತ್ತದೆ (ನೋಡಿ Douglass and Basi Gray 1978 : 95).

ಅಡುಗೆ ಕೋಣೆ : ಸು. ೨೦೦ ವರ್ಷಗಳ ಹಿಂದಿನ ಅಡುಗೆಕೋಣೆಯೊಂದರ ವಿನ್ಯಾಸ, ಅಲ್ಲಿ ಬಳಕೆಯಾಗುತ್ತಿದ್ದ ಸಲಕರಣೆಗಳ ಮಾದರಿಗಳನ್ನು ಚಿತ್ರಿಸುವ ಇನ್ನೊಂದು ವರ್ಣಚಿತ್ರವಿದೆ. ೧೮೧೦ ರಲ್ಲಿ ರಚಿತವಾದ ಚಂಬಾ ಶೈಲಿಯ ಈ ಚಿತ್ರದಲ್ಲಿ ಅನುಕೂಲಸ್ಥರ ಮನೆಯ ಗೃಹಿಣಿಯೊಬ್ಬಳು ಅಡುಗೆಕಾರ್ಯದಲ್ಲಿ ನಿರತಳಾಗಿದ್ದಾಳೆ. ಅಲ್ಲಿ ಕಾಣುವ ಸೌದೆ ಒಲೆ, ಸೌಟು, ಪಾತ್ರೆಗಳು, ಈಳಿಗೆಮಣೆ, ಹಸಿ ತರಕಾರಿಗಳು, ನೀರಿನ ಬಿಂದಿಗೆ ಮೊದಲಾದುವು ಇಂದು ನಾವು ಬಳಸುವ ಸಲಕರಣೆಗಳನ್ನೇ ಹೋಲುವುದರೊಂದಿಗೆ ಕುತೂಹಲ ಹುಟ್ಟಿಸುವಂತಿವೆ (ನೋಡಿ : Lalitkala Academy Series PortFolio ಸಂಗ್ರಹದಲ್ಲಿನ ೧೯ನೇ ಚಿತ್ರ).

'ಅಸ್ತ್ರ ಒಲೆ' ಈಗಿನ ಹೊಸ ಶೋಧ ಎಂಬಂತೆ ಕೆಲ ತಜ್ಞರು ಮಾತಾಡುವುದುಂಟು. ಆದರೆ, ಈ ತತ್ವ, ಮಾದರಿ ಹೋಲುವ ಆಲೆಮನೆ ಒಲೆಗಳು ನಮ್ಮ ಜನಪದರಲ್ಲಿ ಎಂದಿನಿಂದಲೂ ಇವೆ. ಅಡುಗೆಮನೆಯಲ್ಲೂ ಇಂತಹ ಒಲೆಗಳು ಬಹು ಹಿಂದೆಯೇ ಬಳಕೆಯಾಗುತ್ತಿದ್ದವು ಎಂಬುದನ್ನು ಆನಂದ ಕುಮಾರಸ್ವಾಮಿಯವರ Rajput paintings Vol-II, ಚಿತ್ರ ಪುಟ LVI ರಲ್ಲಿ ನೋಡಬಹುದಾಗಿದೆ.

'ಐ-ನಿ-ಅಕ್ಬರಿ' ಮೊದಲಾದ ಕೆಲ ಕೃತಿಗಳಿಂದ ಆ ಕಾಲದ ಅಡುಗೆಮನೆ ಸಲಕರಣೆಗಳೇ ಅಲ್ಲದೆ, ಊಟದ ಸಂಪ್ರದಾಯಕ್ಕೆ ಸಂಬಂಧಿಸಿದ ಕೆಲ ಆಚಾರ-ನಡವಳಿಗಳೂ ತಿಳಿದುಬರುತ್ತವೆ. ಆಗ ಚಪಾತಿ ಸುಡಲು ಸೌದೆಗೆ ಬದಲು ಬೆರಣಿ ಬಳಕೆಯಾಗುತ್ತಿತ್ತು. ಹಿಂದೂಗಳು ಕಂಚು ಅಥವಾ ಹಿತ್ತಾಳೆಯ ತಟ್ಟೆ, ಲೋಟ ಬಳಸಿದರೆ 17ನೇ ಶತಮಾನದ ಮುಸ್ಲಿಮರು ಮಣ್ಣಿನ ಅಥವಾ ತಾಮ್ರದ ಪಾತ್ರೆ ಬಳಸುತ್ತಿದ್ದರು. ಊಟಕ್ಕೆ ಮೊದಲು ಒಂದು ತುತ್ತನ್ನು ದೇವರಿಗೆ ತೆಗೆದಿಡುವ ಪದ್ಧತಿ ಹಿಂದೂಗಳಲ್ಲಿ ಇತ್ತು. ಸಾಮ್ರಾಟ ಅಕ್ಬರನೂ ಈ ಪದ್ಧತಿ ಅನುಸರಿಸುತ್ತಿದ್ದ (Chopra 1963:43). ಬಡವರು ಎಲೆಯಲ್ಲಿ ಊಟ ಮಾಡುತ್ತಿದ್ದರು. ಆನಂತರ ಆ ಜಾಗದ 'ಎಂಜಲು ಇಕ್ಕಿ' ಶುದ್ಧಮಾಡುತ್ತಿದ್ದರು.

ಎಡಗೈಲಿ ಊಟ ಮಾಡಬಾರದು, ಪಾತ್ರೆಯನ್ನು ಕಚ್ಚದೆ ಎತ್ತಿ ನೀರು ಕುಡಿಯಬೇಕೆಂಬ ನಡವಳಿಗಳು ಆಗಲೂ ಇದ್ದವು (ಅದೇ ಪು.೪೪).

ಮನೆ, ಬಾಗಿಲು ಇತ್ಯಾದಿ

ಮನುಷ್ಯನಿಗೆ ವ್ಯವಸ್ಥಿತವಾದ ವಸತಿಯ ಅಗತ್ಯ ತಲೆದೋರಿದ್ದು ಸುಮಾರು ಏಳು ಸಾವಿರ ವರ್ಷಗಳ ಹಿಂದೆ, ನವ ಶಿಲಾ ಯುಗದಲ್ಲಿ ಎನ್ನಲಾಗಿದೆ. ಅದಕ್ಕೆ ಮೊದಲು ಆತ ಗುಹೆಯಲ್ಲೋ ಮರದ ಪೊಟರೆಯಲ್ಲಿಯೋ ಆಶ್ರಯ ಪಡೆಯುತ್ತಿದ್ದ. ಮುಂದೆ ಕಾಲ ಕಾಲಕ್ಕೆ ಮನುಷ್ಯ ರೂಪಿಸಿಕೊಂಡ ಮನೆಯ ರೂಪ, ಲಕ್ಷಣಗಳಲ್ಲಿ ವ್ಯತ್ಯಾಸವಾಗುತ್ತಾ ಬಂದಿತು. ತೀರಾ ಪ್ರಾಚೀನ ಕಾಲದ ಮನೆಗಳು ಹಾಗೂ ಅವುಗಳ ಬಾಗಿಲುಗಳು ಹೇಗಿದ್ದವು ಎಂಬುದನ್ನು ಅರಿಯಲು ನಮಗೆ ಪ್ರಾಚ್ಯ ಜಾನಪದ ಅಧ್ಯಯನ ನೆರವಿಗೆ ಬರುತ್ತದೆ. ಅರ್ಥಾತ್, ಜಗತ್ತಿನ ವಿವಿಧೆಡೆ ನಡೆದಿರುವ ಪುರಾತತ್ವ ಶೋಧಗಳಲ್ಲಿ ದೊರೆತಿರುವ ವಸತಿ ಸಾಕ್ಷ್ಯಗಳಿಂದ ಆಗಿನ ಕಾಲದ ಕೆಲವಾದರೂ ಮನೆಗಳ ಹಾಗೂ ಅವುಗಳ ಬಾಗಿಲುಗಳ ಸ್ವರೂಪವನ್ನು ಕಲ್ಪಿಸಿಕೊಳ್ಳಬಹುದಾಗುತ್ತದೆ. ಹಾಗೆ ದೊರೆತಿರುವ ಕೆಲವು ಮಾಹಿತಿಗಳು ಇಲ್ಲಿವೆ : 'ಜಗತ್ತಿನಲ್ಲೇ ಅತೀ ಪ್ರಾಚೀನವಾದ (ಕ್ರಿ. ಪೂ.೩೦೦೦) ಜೊಂಡಿನ ಗುಡಿಸಲೊಂದು ಅಸ್ಸೀರಿಯದ ಉಬೈರನ್ ಗ್ರಾಮದಲ್ಲಿ ದೊರೆತಿದೆ. ಎಲ್‌ಅಮ್ರದಲ್ಲಿ (ಅದೇ ಕಾಲ)ದೊರೆತ ಮನೆಯೊಂದರ ಮಣ್ಣಿನ ಮಾದರಿಗೆ ಮಣ್ಣಿನ ಚೌಕಟ್ಟಿನ ದ್ವಾರವಿದೆ. ಟೈಗ್ರಿಸ್ ನದಿಯ ಪಶ್ಚಿಮಕ್ಕೆ ಹಸ್ಸುನ ಎಂಬಲ್ಲಿ (ನವ ಶಿಲಾಯುಗ) ಸುಸಜ್ಜಿತವಾಗಿ ಕಟ್ಟಿದ ಮನೆಗಳ ಗುರುತುಗಳಿದ್ದು ಅವುಗಳಿಗೆ ಕಲ್ಲಿನ ಕುಳಿಯ ಸುತ್ತಲೂ ತಿರುಗುವ ಗೂಟಗಳುಳ್ಳ ಮರದ ಬಾಗಿಲುಗಳಿದ್ದವು. ಮೆಸಪಟೋಮಿಯ ನಾಗರಿಕತೆಯುದ್ದಕ್ಕೂ ಬಳಕೆಯಾಗುತ್ತಿದ್ದ (ಪ್ರಾಚೀನ) ಬಾಗಿಲುಗಳು ಚರ್ಮ ಅಥವಾ ಬಟ್ಟೆಯವಾಗಿದ್ದವು. ಗಟ್ಟಿಯಾದ,ದೀರ್ಘ ಬಾಳಿಕೆಗೆ ಬರುವ ಮಾಧ್ಯಮಗಳಿಂದ ಮಾಡಿದ ಬಾಗಿಲುಗಳು ಅದೇಕಾಲಕ್ಕೆ ಸ್ಮಾರಕ ಭವನಗಳಲ್ಲಿ ಬಳಕೆಯಾಗುತ್ತಿದ್ದವು. ಕಟ್ಟಡದ ಬಹುಮುಖ್ಯ ಕೋಣೆಗಳಿಗೆ ಸಾಮಾನ್ಯವಾಗಿ

ಕಲ್ಲು ಅಥವಾ ಕಂಚಿನ ಬಾಗಿಲುಗಳು ಇದ್ದವು. ಕಂಚಿನ ಬಾಗಿಲುಗಳನ್ನು ಬಳಸುವ ಸಂಪ್ರದಾಯ ಈ ೨೦ನೇ ಶತಮಾನದಲ್ಲೂ ಮುಂದುವರೆದಿದೆ. ಮೊಟ್ಟ ಮೊದಲ ಬಾರಿಗೆ ಅಚ್ಚಿನಲ್ಲಿ ಎರಕಹೊಯ್ದ ಕಂಚಿನ ಬಾಗಿಲೊಂದು ಉತ್ತರ ಯೂರೋಪಾನಲ್ಲಿ ದೊರೆತಿದೆ. ೨೪ ಅಡಿಗಳಷ್ಟು ದೊಡ್ಡದಾದ ೨ ಕದಗಳಿರುವ ಒಂದು ಪ್ರಾಚೀನ ನಿರ್ದಶನವೂ ಇದೆ. ತೀರಾ ಪ್ರಾಚೀನ ಕಾಲದಲ್ಲಿ ಮರದ ಬಾಗಿಲ ಬಳಕೆ ಸಾಮಾನ್ಯವಾಗಿತ್ತು. ಪಾಂಪೆಯಲ್ಲಿ ಕಂಡುಬಂದ ಭಿತ್ತಿ ಚಿತ್ರಗಳು ಮತ್ತದರ ಅವಶೇಷಗಳಿಂದ ಆ ಕಾಲದ ಬಾಗಿಲುಗಳ ರಚನೆಯನ್ನು ಗುರುತಿಸಬಹುದಾಗಿದ್ದು ಅವು ಆಧುನಿಕ ಕಾಲದ ಮರದ ಬಾಗಿಲುಗಳನ್ನೇ ಬಹುಮಟ್ಟಿಗೆ ಹೋಲುವಂತಿವೆ. ಸಾಂದರ್ಭಿಕವಾಗಿ ಅವುಗಳಿಗೆ ಬೀಗಗಳೂ ಇದ್ದವು.

ಬಾಗಿಲಿನ ಈ ರೋಮನ್ ಶೈಲಿಯನ್ನು ಆನಂತರ ಮುಸ್ಲಿಂ ದೇಶಗಳೂ ಅನುಸರಿಸಿದವು. ಚೀನಾ ಹಾಗೂ ಜಪಾನ್‌ಗಳಲ್ಲಿ ಮರದ ಬಾಗಿಲಿಗೆ ಸಾಮಾನ್ಯವಾಗಿ ಎರಡು ಕದಗಳಿರುತ್ತಿದ್ದು, ಕೆಳಗಿನದು ಗಟ್ಟಿಯಾದುದಾಗಿದ್ದು (Solid) ಮೇಲಿನದು ಮರದ ಚೌಕಟ್ಟಿನಲ್ಲಿ ಅಳವಡಿಸಿದ ಕಾಗದದ್ದೂ ಆಗಿರುತಿತ್ತು. ಭಾರತದ ಅತೀ ಪ್ರಾಚೀನ ವಸತಿಗಳು ಬಲೂಚಿಸ್ತಾನದ ಕಿಲಿಘುಲ್ ಮೊಹಮದ್, ರಣಘುಂಡೆ ಮೊದಲಾದೆಡೆ (ನವಶಿಲಾಯುಗ) ಕಂಡುಬಂದಿವೆ. ಆನಂತರದ ಮೊಹೆನ್‌ಜೊದಾರೊ ಹರಪ್ಪಾ ಸಂಸ್ಕೃತಿಯ ಮನೆಗಳು ಯೋಜನಾಬದ್ಧವಾಗಿದ್ದು ಅವರು ಸುಟ್ಟ ಇಟ್ಟಿಗೆ, ಗಾರೆ, ಮರದ ಹಲಗೆ, ಕಲ್ಲು ಕಂಬಗಳನ್ನೂ ಬಳಸುವಷ್ಟು ಪ್ರವೀಣರಾಗಿದ್ದರೆಂದು ತಿಳಿದುಬರುತ್ತದೆ. ಆದ್ದರಿಂದ ಆ ಬಾಗಿಲುಗಳಿಗೂ ಹೆಚ್ಚಿನ ಪ್ರಾಮುಖ್ಯತೆ ಇದ್ದು ಅವೂ ಗಟ್ಟಿಮುಟ್ಟಾಗಿದ್ದಿರಬಹುದು. ಆದರೆ, 'ಸಿಂಧೂ' ಸಂಸ್ಕೃತಿಯ ಕಟ್ಟಡಗಳಲ್ಲಿ ಕಲಾತ್ಮಕ ಅಂಶ ಕಡಿಮೆ ಎಂಬ ಅಭಿಪ್ರಾಯವಿರುವುದರಿಂದ ಆ ಬಾಗಿಲುಗಳು ನಿರಾಲಂಕಾರವಾಗಿಯೇ ಇದ್ದಿರಬಹುದು. ವಿಶೇಷವೆಂದರೆ, ಈ ಬಾಗಿಲುಗಳು ಮುಖ್ಯರಸ್ತೆಯಿಂದ ಇರದೆ ಪಕ್ಕದ ಓಣಿಯಿಂದ ಇರುವುದು ಕಂಡು ಬಂದಿದೆ. ಉತ್ಖನನದಲ್ಲಿ ಆರು ಬಾಗಿಲುಗಳುಳ್ಳ ಒಂದು ಸ್ನಾನಗೃಹ ಕಂಡು

ಬಂದಿರುವುದೂ ಇಲ್ಲಿ ಉಲ್ಲೇಖನೀಯ. ಮುಂದೆ ವೇದಗಳ ಕಾಲಗಳಲ್ಲಿ ಜೊಂಡು, ಹುಲ್ಲು , ಎಲೆ, ಬೊಂಬಿನಂತಹ ಸಾಧನಗಳಿಂದ ವೃತ್ತಾಕಾರದ ಗುಡಿಸಲುಗಳನ್ನು ಕಟ್ಟುತ್ತಿದ್ದರು. ಹಾಗಾಗಿ ಅವರ ಬಾಗಿಲುಗಳ 'ಕದ'ವೂ 'ತಟ್ಟಿಗೆ'ಗಳ ರೀತಿಯೆ ಇದ್ದಿರಬೇಕು. ಆದರೆ ಪಟ್ಟಣಗಳಲ್ಲಿ, ಶ್ರೀಮಂತರ ಇಟ್ಟಿಗೆ ಮನೆಗಳಲ್ಲಿ ಮರ ಮುಟ್ಟುಗಳನ್ನು ಬಳಸುವ ನೈಪುಣ್ಯತೆ ಇದ್ದುದರಿಂದ ಆ ಬಾಗಿಲು-ಕದಗಳು ಅದಕ್ಕೆ ತಕ್ಕನಾಗಿಯೇ ಇದ್ದವು. ವೇದಕಾಲೀನ ಕಟ್ಟಡಗಳು ನಮ್ಮ ಕಣ್ಣ ಮುಂದೆ ಇರದಿದ್ದರೂ ವೇದಕಾಲೀನ ಸಾಹಿತ್ಯದಲ್ಲಿ (ವೇದಗಳಲ್ಲಿ) ಆ ಕಾಲದ ವಾಸ್ತುವಿನ ಬಗೆಗೆ ಅನೇಕ ಮಾಹಿತಿಗಳು ದೊರೆಯುತ್ತವೆ. ನಿರ್ದಶನಕ್ಕೆ ಋಗ್ವೇದದ ಒಂದು ಋಚೆಯಲ್ಲಿ(ಅಷ್ಟದಿಕ್ಪಾಲಕರಲ್ಲಿ ಒಬ್ಬನಾದ) ವರುಣದೇವತೆಯ ಪ್ರಾಸಾದದ ವರ್ಣನೆ ಬರುತ್ತದೆ. ಅದೊಂದು ದೊಡ್ಡ ಭವನ. ಅದರ ಭವ್ಯತೆಗೆ ತಕ್ಕಂತೆ ಅದಕ್ಕೆ ಒಂದು ಸಾವಿರ ಬಾಗಿಲು ಇದ್ದವಂತೆ ! ಒಟ್ಟಾರೆ, ಆ ಕಾಲಕ್ಕಾಗಲೇ ಮನೆಗೆ ಬಾಗಿಲು ಅತಿ ಮಹತ್ವದ್ದೆಂಬ ಭಾವನೆ ಬಲವಾಗಿತ್ತು. ಅಂತೆಯೇ, 'ದ್ವಾರ ಪೂಜೆ'ಯಂತಹ ಆಚರಣೆಳೂ ಹುಟ್ಟಿಕೊಂಡಿದ್ದವು. ರಾಮಾಯಣ, ಮಹಾಭಾರತಗಳಂತಹ ಪುರಾಣಗಳ ಕಾಲದಲ್ಲೂ ಇದೇ ಪ್ರವೃತ್ತಿ ಮುಂದುವರೆದದ್ದನ್ನು ನಾವು ಕಾಣುತ್ತೇವೆ. ಆ ಕಾಲಕ್ಕಾಗಲೇ ಹಲವು ಜನ ವಾಸ್ತು ತಜ್ಞರು ಹುಟ್ಟಿಕೊಂಡಿದ್ದರು. 'ಮಯ' ಎನ್ನುವ ದೇವತೆಗಳ ವಾಸ್ತು ತಜ್ಞನು ಪಾಂಡವರಿಗೆ ಕಟ್ಟಿ ಕೊಟ್ಟ ಅಪ್ರತಿಮ ಸಭಾಭವನದ ಬಗೆಗೆ ನೀವು ಮಹಾಭಾರತದಲ್ಲಿ ಕೇಳಿದ್ದೀರಿ. ಬಾಗಿಲು ಇದ್ದೆಡೆ ಅದು ಕಾಣದೆ ಕೇವಲ ಗೋಡೆ ಎಂದು ಭ್ರಮಿಸಿ ನಿಂತ, ಇನ್ನೊಮ್ಮೆ ಬಾಗಿಲು ಎಂದು ತಿಳಿದು ನುಗ್ಗಿ ಹೋಗುವ ಭರದಲ್ಲಿ ಗೋಡೆಗೆ ಹಣೆ ಘಟ್ಟಿಸಿಕೊಂಡ ದುರ್ಯೋಧನನ ಆ ದು:ಸ್ಥಿತಿಯು ಮಂದಿನ 'ಮಹಾಭಾರತ'ಕ್ಕೆ ಒಂದು ವಿಷಬೀಜವಾಯಿತಲ್ಲವೇ?

ವೇದ ಕಾಲದ ಹಾಗೆ ಈ ಪುರಾಣಕಾಲದಲ್ಲೂ ಬಾಗಿಲಿಗೆ ವಿಶೇಷ ಮಹತ್ವವಿದ್ದು, ಗೃಹಪ್ರವೇಶದಲ್ಲಿ ಪಶುಬಲಿಯೂ ನಡೆಯುತ್ತಿತ್ತು. ಅದನ್ನು ಅವರು 'ಪಶುಯಜ್ಞ' ಎಂದು ಕರೆಯುತ್ತಿದ್ದರು.

(ಹೆಚ್ಚಿನ ವಿವರಕ್ಕೆ "ನನ್ನ 'ಜಾನಪದೀಯ' ಕೃತಿಯಲ್ಲಿನ ಜ್ಞಾನ ನೆಮ್ಮದಿಯ ಬಾಗಿಲು" ಲೇಖನ ನೋಡಿರಿ)

ಬಾಗಿಲು, ಕಿಟಕಿ ಪರದೆಗಳು ಇತ್ಯಾದಿ

ಕ್ರಿ. ಶ. ೧೬೬೨ ಬುಂದಿ ಶೈಲಿಯ ಒಂದು ಚಿಕಣಿ ಚಿತ್ರದಲ್ಲಿ ಮನೆಯ ಅಂಗಳದಲ್ಲಿ ಒಂದು ದೊಡ್ಡ ಬಿದಿರು ಗಳ ನೆಟ್ಟು, ಅದರ ತುದಿಗೆ ಬಿದಿರು ದೆಬ್ಬೆಗಳಿಂದ ಮಾಡಿದ ಜಾಲರಿಯಂಥ ತಟ್ಟೆ ಕಟ್ಟಿದೆ. ಸಾಕಿದ ಪಾರಿವಾಳಗಳು ಹಾರಿಬಂದು ಅದರ ಮೇಲೆ ಮಿಶ್ರಮಿಸುತ್ತಿರುವಂತೆ ನಿರೂಪಿಸಲಾಗಿದೆ.

ಇದೇ ಚಿತ್ರದಲ್ಲಿ ಬಾಗಿಲಿಗೆ ಇಳಿ ಬಿಡುವ ಬಣ್ಣದ ಪರದೆಯನ್ನು ಅರ್ಧ ಮೇಲಕ್ಕೆ ಸುತ್ತಿ ನಿಲ್ಲಿಸಿದೆ. ಅದರ ಹಿಂಬದಿಯಿಂದ ಬಿದಿರು ಸಿಬರುಗಳಿಂದ ಹೆಣೆದ ಜಾಲರಿಯಂಥ ಪರದೆ ಬಾಗಿಲ ಉದ್ದಕ್ಕೂ ಇಳಿಬಿದ್ದಿದೆ. ಅದರ ಅಡ್ಡ ಕಡ್ಡಿಗಳು, ಅದನ್ನು ಕುಶಲತೆಯಿಂದ ಹೆಣೆದ ದಾರದ ವಿನ್ಯಾಸವೂ ಸ್ಪಷ್ಟವಾಗಿ ಕಾಣುತ್ತಿದೆ. ಆ ಕಡ್ಡಿಗಳಿಗೆ ಬಣ್ಣದ ಪಟ್ಟಿಗಳನ್ನು ಹಾಕಲಾಗಿದೆ. ಈ ಪರದೆ ಎಷ್ಟು ಪಾರದರ್ಶಕವಾಗಿದೆ ಎಂದರೆ, ಅದರ ಹಿಂದೆ ನಿಂತ ಪರಿಚಾರಿಕೆಯೊಬ್ಬಳು ಸಹಜವಾಗಿ ಕಾಣುತ್ತಿದ್ದಾಳೆ (ನೋಡಿ Douglass and Grey 1978:146).

ಈಗಲೂ ಶ್ರೀಮಂತರ ಮನೆಗಳು ಹಾಗೂ ಸರಕಾರಿ ಭವನಗಳಲ್ಲಿ ಬಿಸಿಲು ಹಾಗೂ ಮಳೆನೀರಿನ ಇರುಚಲು ತಡೆಯಲು ಬಳಕೆಯಾಗುವ ಇಂತಹ 'ಜಾಲರಿ ಪರದೆ'ಗಳು ನಾನ್ನೂರು ವರ್ಷಗಳಷ್ಟು ಹಿಂದೆಯೆ ಈ ದೇಶದಲ್ಲಿ ಬಳಕೆಯಲ್ಲಿದ್ದವು ಮತ್ತು ಅಂತಹವುಗಳನ್ನು ಕುಶಲತೆಯಿಂದ ನೇಯುವ ಜನಪದ ಕಸುಬಿನವರಾದ ಮೇದರು ಆಗಲೂ ಇದ್ದರು ಎಂಬುದು ಇದರಿಂದ ಸಾಬೀತಾಗುತ್ತದೆ.

ಸ್ವಯಂಚಾಲಿತ ಬಾಗಿಲು

ಮಾಟ, ಮಂತ್ರ, ಪತ್ತೇದಾರಿಯ ಬಾಂಡ್ ಸಿನಿಮಾಗಳಲ್ಲಿ ಖಳನಾಯಕನ

ರಹಸ್ಯ ಗೃಹದಲ್ಲಿ ತನ್ನಿಂತಾನೇ ತೆರೆದುಕೊಳ್ಳುವ / ಮುಚ್ಚಿಕೊಳ್ಳುವ ಬಾಗಿಲುಗಳನ್ನು ನೋಡಿದವರು ಇದೆಲ್ಲಾ ಕೇವಲ ಭ್ರಾಮಕ ಕಲ್ಪನೆ, ನಿಜ ಬದುಕಿನಲ್ಲಿ ಇದ್ದದ್ದಲ್ಲ - ಎಂದುಕೊಳ್ಳಬಹುದು. ಆದರೆ, ಅದೆಲ್ಲಾ ಕೇವಲ ಸಿನಿಮಾ ತಂತ್ರ ಅಲ್ಲ. ನಿಜವಾಗಲೂ ಕೆಲವೆಡೆ ಈಗಲೂ ಇರುವುದು ಅಥವಾ ಹಿಂದೆ ಇದ್ದ ತಂತ್ರಜ್ಞಾನದ ಒಂದು ಮಾದರಿ ಅಷ್ಟೆ - ಎಂದರೆ ಆಶ್ಚರ್ಯ ಪಡಬೇಕಿಲ್ಲ.

ಈ ಕಾಲದಲ್ಲಂತೂ ಏನೇನೋ ಸ್ವಯಂಚಾಲಿತ ಸಲಕರಣೆಗಳು ಬಂದುಬಿಟ್ಟಿವೆ. ಇದು ಸ್ವಯಂಚಾಲಿತ ತಂತ್ರಜ್ಞಾನ ಯುಗ ಅನ್ನಿಸಿಕೊಂಡು ಬಿಟ್ಟಿದೆ. ಆದರೆ, ಇಂತಹ ಚಮತ್ಕಾರದ ತಂತ್ರ - ವಿಜ್ಞಾನ ಕೇವಲ ಈ ಕಾಲಕ್ಕೆ ಮೀಸಲೇನಲ್ಲ ಎಂಬುದಕ್ಕೆ ಪ್ರಾಚ್ಯ ನಿದರ್ಶನಗಳೂ ಇವೆ. ಉದಾ.ಗೆ "ಸ್ವಯಂ ಚಾಲಿತ ಬಾಗಿಲು" ಕೇವಲ ಆಧುನಿಕ ಜಗತ್ತಿನ ಶೋಧನೆಯಲ್ಲ ; ಅದು ಎಷ್ಟೋ ಹಿಂದೆಯೇ ಕಾರ್ಯರೂಪಕ್ಕೆ ಬಂದಿದ್ದಿತು. ಅನುಮಾನವಿದ್ದರೆ ಈ ಸುದ್ದಿ ಓದಿರಿ :

“ಸ್ವಯಂ ಚಾಲಿತ ಬಾಗಿಲು ಆಧುನಿಕ ಜಗತ್ತಿನ ಶೋಧನೆ ಎನ್ನುವುದು ತಪ್ಪು. ಏಕೆಂದರೆ ಎರಡು ಸಾವಿರ ವರ್ಷಗಳ ಹಿಂದಿನ ಪ್ರಾಚೀನ ಈಜಿಪ್ಟ್‌ನ ಮುಖ್ಯ ಪಟ್ಟಣ ಅಲೆಗ್ಸಾಂಡ್ರಿಯಾದಲ್ಲಿ ದೇವಾಲಯಗಳಿಗೆ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸಲಾಗಿತ್ತು. ಹೆರೋನ್ ಎಂಬಾತ ಅದನ್ನು ರೂಪಿಸಿದ್ದ. ದೇವಾಲಯದ ಮುಂದಿದ್ದ ಪೀಠದ ದೀಪವನ್ನು ಅರ್ಚಕ ಬೆಳಗುತ್ತಿದ್ದಂತೆಯೇ ದೇವಾಲಯದ ಬಾಗಿಲುಗಳು ತೆರೆದುಕೊಳ್ಳುತ್ತಿದ್ದವು ! " (ಪ್ರಜಾವಾಣಿ : ವಿಸ್ಮಯ ವಿಹಾರ, ೨೯ - ೩ - ೧೯೯೮).

ಈ ಜಾಣತನದಲ್ಲಿ ನಮ್ಮವರೂ ಏನೂ ಕಡಿಮೆಯಿಲ್ಲ. ನಮ್ಮ ಕೆಲವೊಂದು ದೇವಾಲಯಗಳ ಮುಂದಿನ ಬಸವನ ವಿಗ್ರಹದ ಬಾಯಿಂದ ನೀರು ಸುರಿವುದು, ಆ ಮೂರ್ತಿಯನ್ನು ತಿರುಗಿಸಿದರೆ ಗುಡಿಯ ಬಾಗಿಲು ತೆರೆದುಕೊಳ್ಳುವುದು ಅಥವಾ ಮುಚ್ಚಿಕೊಳ್ಳುವುದು, ಸಂಕ್ರಾಂತಿಯಂದು ಸೂರ್ಯೋದಯಕ್ಕೆ ಸರಿಯಾಗಿ ಹೊಂಗಿರಣಗಳು ಗರ್ಭಗುಡಿಯ ವಿಗ್ರಹದ

ಮೇಲೆ ಕ್ಷಣಹೊತ್ತು ಮಾತ್ರ ಮೂಡುವುದು.... ಇಂತಹ ಚಮತ್ಕಾರಗಳೆಲ್ಲಾ ನಮ್ಮ ವಾಸ್ತು - ಶಿಲ್ಪಿಗಳ ಜಾನಪದ ಜಾಣ್ಮೆಯಿಂದಲೇ ಆದದ್ದು.

ನಮ್ಮ ಕೆಲವು ಹಳ್ಳಿ ಮನೆಗಳಲ್ಲಿಯೂ ಇಂತಹ ಕುಶಲ ತಂತ್ರಜ್ಞಾನ ಬಳಕೆಯಾಗಿದ್ದಿತು ಎಂಬುದು ಉಲ್ಲೇಖನೀಯ ಮಹತ್ವದ ಸಂಗತಿಯಾಗಿದೆ. ಶಿರಸಿ ತಾಲ್ಲೂಕಿನ ಯಡಹಳ್ಳಿಯಲ್ಲಿ ಸುಮಾರು ೨೦೦ ವರ್ಷಗಳ ಹಿಂದೆ ಕಟ್ಟಿರುವ ಮನೆಯೊಂದರಲ್ಲಿ "ಕೊಟ್ಟ" ಎಂಬ ಹೆಸರಿನ ಇಂತಹ ವಿಶಿಷ್ಟ ತಂತ್ರ ವ್ಯವಸ್ಥೆಯೊಂದಿದೆ. ಯಾವುದೇ ಆಪತ್ತಿನ ಸಮಯದಲ್ಲಿ ಮನೆಯವರು ಅಡಗಿಕೊಳ್ಳಲು ಮಹಡಿ ಮೇಲೊಂದು ರಹಸ್ಯ ಕೋಣೆ "ಕೊಟ್ಟ" ನಿರ್ಮಿಸಲಾಗಿದೆ. ಮಹಡಿ ಏರುವ ರಂಧ್ರ ಮುಚ್ಚಿದರೆ ಕೋಣೆಯ ಬಾಗಿಲು ತೆರೆದುಕೊಳ್ಳುತ್ತದೆ. ಕೋಣೆಯ ಬಾಗಿಲು ತೆಗೆದರೆ ಈ ರಂಧ್ರ ತಾನಾಗಿ ಮುಚ್ಚಿಕೊಳ್ಳುತ್ತದೆ. ಈ ಜನಪದ ಗೃಹ ನಿರ್ಮಾಣ ತಂತ್ರಜ್ಞಾನ ಇನ್ನೂ ಸುಸ್ಥಿತಿಯಲ್ಲಿರುವುದೊಂದು ವಿಶೇಷ (ಬೆಟ್ಟಕೊಪ್ಪ, ೧೯-೮-೧೯೯೬).

ಗ್ರಾಮ ವಿನ್ಯಾಸ

ಒಂದೊಂದು ಕಾಲಕ್ಕೆ ಒಂದೊಂದು ವಿನ್ಯಾಸವನ್ನು ಆ ಕಾಲದ ಆಧುನಿಕ ಗೃಹ ಮಾದರಿ ಎಂದು ಜನ ಭಾವಿಸಿ ಅದನ್ನೇ ಅನುಕರಿಸುತ್ತಾರೆ. ಅಭಿರುಚಿ, ಅಗತ್ಯಕ್ಕೆ ಅನುಗುಣವಾಗಿ (ಆಂತರಿಕ ಒತ್ತಡ) ಇವು ಬದಲಾಗುತ್ತಾ ಹೋಗುತ್ತವೆ. ಪ್ರಸ್ತುತದಲ್ಲಿ ಏಕಕಾಲಕ್ಕೆ ಅನೇಕ ವಿನ್ಯಾಸಗಳಲ್ಲಿ ಮನೆಗಳ ನಿರ್ಮಾಣ (ಪರಿಸರ ಪ್ರಜ್ಞೆ, ವೈಯಕ್ತಿಕ ಅಭಿರುಚಿ ಇತ್ಯಾದಿ ಕಾರಣಗಳಿಂದ) ಆಗುತ್ತಿರುವುದನ್ನು ಕಾಣುತ್ತೇವೆ. ಆದರೆ, ರಾಜಕೀಯ ಹಾಗೂ ಸಾಮಾಜಿಕ ಕಾರಣಗಳಿಂದಾಗಿ - ಬಾಹ್ಯ ಒತ್ತಡ - ಗ್ರಾಮಗಳ ವಿನ್ಯಾಸಗಳು ಬದಲಾಗುತ್ತಾ ಹೋಗುತ್ತವೆ. ಆದರೂ, ಸುಮಾರು - ನೂರಿನ್ನೂರು ವರ್ಷಗಳ ಹಿಂದಿನ ಒಂದು ವಿನ್ಯಾಸವನ್ನು ಆಗಿನ ಸಾಂಪ್ರದಾಯಿಕ ಗ್ರಾಮ ಮಾದರಿ ಎಂದು ನಾವು ಭಾವಿಸಿ ಅಧ್ಯಯನ ಮಾಡಬಹುದಾಗಿದೆ.

ನಾಮಾವಶೇಷವಾಗಿರುವ ಪ್ರಾಚೀನ ಕಾಲದ ಗ್ರಾಮಗಳ ಲಕ್ಷಣ, ವಿನ್ಯಾಸಗಳನ್ನು ನಾವು ಇಂದು ಸ್ವಲ್ಪ ಮಟ್ಟಿಗಾದರೂ ಅಧ್ಯಯನ ಮಾಡಬಹುದು ಎಂಬುದು ಪ್ರಾಚ್ಯ ಜಾನಪದ ಅಧ್ಯಯನದ ಹೊಸ ಸಾಧ್ಯತೆಯಾಗಿದೆ. ನಿದರ್ಶನಕ್ಕೆ ಕೃಷ್ಣನ ಬದುಕನ್ನು ನಿರೂಪಿಸುವ ಒಂದು ವರ್ಣ ಚಿತ್ರದಲ್ಲಿ ಆ ಕಲಾವಿದನ ಕಾಲದ ಒಂದು ಗ್ರಾಮದ ಕೆಲ ಲಕ್ಷಣಗಳನ್ನು, ಆಂಶಿಕ ವಿನ್ಯಾಸದ ಮಾದರಿಯನ್ನು ಅರಿಯಬಹುದಾದ ಕೆಲ ವಿವರಗಳನ್ನು ಅದರಲ್ಲಿ ಸಾದೃಶ್ಯವಾಗಿ ಚಿತ್ರಿಸಲಾಗಿದೆ : ಇಳಿಚಾರು ಛಾವಣಿಯ (ಇಪ್ಪಾರು?) ಮನೆಗಳು ; ಮನೆ ಮುಂದಿನ ಹಟ್ಟಿಯಲ್ಲಿ ನೂಲುತ್ತಾ ಕೂತ ಗೃಹಿಣಿ; ಅವಳ ಎದಿರು, ಮರದ ನೆರಳಲ್ಲಿ ಎಳೆಯ ಮಗುವನ್ನು ಕುಳ್ಳಿರಿಸಿಕೊಂಡು ಲೋಕಾಭಿರಾಮವಾಗಿ ಮಾತನಾಡುತ್ತಾ ಕೂತ ಇನ್ನೊಬ್ಬ ಮಹಿಳೆ ; ವಿವಿಧ ಕೆಲಸಗಳಲ್ಲಿ ತೊಡಗಿದ ಗಂಡಸರು, ಹೆಂಗಸರು ; ಊರು ಸುತ್ತಾ ಇರುವ ಬೇಲಿ, ಅದರಾಚೆ ತೋಪು ; ಅಲ್ಲಿ ಹರಿಯುವ ಕಿರು ಹೊಳೆ, ಅದರ ದಡದ ಹುಲ್ಲುಗಾವಲು, ಮರಗಳ ತೋಪಿನಲ್ಲಿ ದನಗಳು ಹಾಗೂ ಗೆಳೆಯರೊಡನೆ ಇರುವ ಕೃಷ್ಣ... ಈ ಎಲ್ಲಾ ಅಂಶಗಳು ನಾವೊಂದು ಹಳ್ಳಿಯ ಪಕ್ಷಿನೋಟವನ್ನೇ ಮಾಡಿದ ಅನುಭವ ತಂದುಕೊಡುತ್ತವೆ.

ರಕ್ಷಣೆಗಾಗಿ ಊರುಸುತ್ತಾ ಗೋಡೆ ಅಥವಾ ಬೇಲಿ ನಿರ್ಮಿಸುವ ಪದ್ಧತಿ ಹಿಂದೆ ವಿಶೇಷವಾಗಿತ್ತು. ಗೊಲ್ಲರ ಹಟ್ಟಿಗಳಲ್ಲಿ ಈಗಲೂ ಈ ಲಕ್ಷಣ ಉಳಿದಿದೆ. ಬೇಲಿಕಡ್ಡಿ, ಬಿದಿರು ಕಡ್ಡಿ, ಕಳ್ಳಿಗಿಡ ಮೊದಲಾದವುಗಳನ್ನು ಬಳಸಿ ಮನೆ ಅಥವಾ ಹಿತ್ತಲುಗಳಿಗೆ ಬೇಲಿ ನಿರ್ಮಿಸುವ ಪದ್ಧತಿ ಹಳ್ಳಿಗಳಲ್ಲಿ ಈಗಲೂ ಇದೆ. ಇಂತಹ ಕಡ್ಡಿಗಳಿಂದ ಊರು ಸುತ್ತಾ ಬೇಲಿ ಮಾಡಿರುವುದು, ಕೆಲ ಮನೆಗಳ ಗೋಡೆಗಳನ್ನೂ ಇಂತಹ ಕಡ್ಡಿಗಳಿಂದಲೇ ಮಾಡಿರುವುದು (ತಡಿಕೆಗೋಡೆ ?), ಆ ಕಾಲದ ನೇಗಿಲುಗಳ ವಿನ್ಯಾಸ, ಚರಕದ ಮಾದರಿ.... ಇಂತಹ ಹಲವು ವಸ್ತು ವಿಶೇಷಗಳ ಪ್ರಾಚೀನ ಮಾದರಿಗೆ ಅಗತ್ಯವಾದ ವಿವರಗಳನ್ನು ಈ ಚಿತ್ರ ಒದಗಿಸುವುದು ಗಮನಾರ್ಹವಾಗಿದೆ.

ಕಪಿಲೆ : ತೋಟಗಾರರು ಬಾವಿಯಿಂದ ನೀರು ಎತ್ತಲು ಬಳಸುತ್ತಿದ್ದ ಸಾಧನಗಳಲ್ಲಿ ಒಂದು - ಕಪಿಲೆ. ಬೋರುಗಳು ಜಾಸ್ತಿಯಾಗುವ ಮುನ್ನ ಏತ, ಕಪಿಲೆಗಳು ನಮ್ಮಲ್ಲಿ ಸಾಮಾನ್ಯವಾಗಿದ್ದ ಕೃಷಿ ನೀರಾವರಿ ತಂತ್ರಗಳಾಗಿದ್ದವು. ಆದರೆ, ಈ ಮಾದರಿಗಳು ಅರ್ಧ ಸಹಸ್ರ ಮಾನದಷ್ಟು ಹಿಂದೆಯೂ ಇದ್ದವು - ಎಂಬುದಕ್ಕೂ ದಾಖಲೆಗಳಿವೆ ! ೧೫೦೮-೦೯ರಲ್ಲಿ ಬಾಬರನು ಕಾಬೂಲ್ ಬಳಿ ನಿರ್ಮಿಸಿದ 'ಬಾಗ್-ಇ-ವಾಫಾ' ಹೆಸರಿನ ಹಣ್ಣಿನ ತೋಟಗಳನ್ನು ಕುರಿತ ಒಂದು ಚಿಕಣಿ ಚಿತ್ರವಿದೆ. ಅದರಲ್ಲಿ, ಆ ತೋಟಕ್ಕೆ ಮಾಡಿರುವ ನೀರಾವರಿ ವ್ಯವಸ್ಥೆಯ ಅಂಗವಾಗಿ ಬಾವಿಯಿಂದ 'ಚಕ್ರ ರಾಟೆ' ಯಂತಹ (ಬಟ್ಟಲು ಕಪಿಲೆ) ಒಂದು ಸಾಧನದಿಂದ ನೀರು ಎತ್ತುತ್ತಿರುವ ಅಪರೂಪದ ಚಿತ್ರಣ ಇದೆ. ಈ ಮಾದರಿಯು ಪರ್ಷಿಯನ್ ಮೂಲದಿಂದ ಬಂದಿರಬಹುದು (Randhawa, PL. VI).

ಕೋಟೆ - ಕಟ್ಟಡ

ಮೊಘಲ್ ಶೈಲಿಯ ಒಂದು ವರ್ಣ ಚಿತ್ರ ಪೂರ್ಣವಾಗಿ ಕೋಟೆ ಕಟ್ಟಡ ನಿರ್ಮಾಣ ಪ್ರಸಂಗವನ್ನೇ ವಸ್ತುವಾಗಿ ಹೊಂದಿದೆ. ಕೋಟೆ ಗೋಡೆ ಸಮೀಪಕ್ಕೆ ದಪ್ಪ ದಪ್ಪ ಕಲ್ಲುಗಳನ್ನು ಸಾಗಿಸಲು ಸಣ್ಣ ದೋಣಿಗಳನ್ನು ಬಳಸಿದ್ದಾರೆ. ಮಣ್ಣು ಇತ್ಯಾದಿಯನ್ನು ಹಸುಬೆಚೀಲದಂತಹ ಚೀಲದಲ್ಲಿ ತುಂಬಿ, ಎತ್ತುಗಳ ಮೇಲೆ ಹೇರುಹಾಕಿಕೊಂಡು ತಂದು ಸುರಿಯುತ್ತಿದ್ದಾರೆ. ನಾಲ್ವರು ಗಟ್ಟಿಗ ಗಂಡಸರು (ವಡ್ಡರು ?) ದೊಡ್ಡ ' ತೊಲೆ' ಯೊಂದನ್ನು ಅದರ ಎರಡೂ ತುದಿಗಳನ್ನು ಹಗ್ಗಗಳಿಗೆ ಕಟ್ಟಿ, ಬೊಂಬುಗಳ ಸಹಾಯದಿಂದ ಹೆಗಲುಗಳಲ್ಲಿ ಹೊತ್ತು ಕೋಟೆ ಗೋಡೆ ಮೇಲಕ್ಕೆ ಸಾಗಿಸುತ್ತಿದ್ದಾರೆ. ಅದಕ್ಕಾಗಿ ಕಟ್ಟಿರುವ ಇಳಿಜಾರು ಅಟ್ಟಣಿಗೆಯಲ್ಲಿ ಕಾಲು ಜಾರದಿರಲೆಂದು ಕೈಲಿ ಊರುಗೋಲು ಹಿಡಿದಿದ್ದಾರೆ. ಆ ಕಾಲದಲ್ಲಿ ತೊಲೆ, ಕಂಭ ಮೊದಲಾದವನ್ನು ಗೋಡೆ ಮೇಲಕ್ಕೆ ಸಾಗಿಸುತ್ತಿದ್ದ ಒಂದು ತಂತ್ರವನ್ನು ಇದು ದಾಖಲಿಸುತ್ತದೆ. ಈಗಲೂ ಗ್ರಾಮಾಂತರ ಭಾಗದಲ್ಲಿ ಮರದ ದಿಮ್ಮಿ ಮೊದಲಾದುವನ್ನು ಸ್ವಲ್ಪ ದೂರಕ್ಕೆ ಸಾಗಿಸುವಾಗ ಇದೇ ಕ್ರಮ ಚಾಲ್ತಿಯಲ್ಲಿದೆ. ಇದಲ್ಲದೆ, ಚಿತ್ರದಲ್ಲಿ ನಿರೂಪಿತವಾಗಿರುವ ಉಳಿ,

ಚಮ್ಮಟಿಗೆ ಬಳಸಿ ಕಲ್ಲು ಸೀಳುತ್ತಿರುವ ಕೆಲಸಗಾರರು, ಗೋಡೆ ನಿರ್ಮಾಣ ಮಾಡುತ್ತಿರುವವರು, ಕೂಲಿಯವರು ಮೊದಲಾದವುಗಳ ಬಗೆಗೆ ಲೆಕ್ಕ ಬರೆದುಕೊಳ್ಳುತ್ತಿರುವ ಅಧಿಕಾರಿ ಮತ್ತಿತರ ಅಂಶಗಳ ಬಗೆಗೂ ಈ ಚಿತ್ರ ಬೆಳಕು ಚೆಲ್ಲುತ್ತದೆ (ನೋಡಿ Geetisen 1984: PL. 31)

ಶಾಮಿಯಾನ ಸಂಸ್ಕೃತಿ

ಮದುವೆಯಂತಹ ವಿಶೇಷ ಸಮಾರಂಭಗಳಲ್ಲಿ ಅತಿಥಿಗಳ ಅನುಕೂಲಕ್ಕಾಗಿ ಪೇಟೆಯಿಂದ ಶಾಮಿಯಾನ ತರಿಸುವ ಅಭ್ಯಾಸ ಈಗ ಗ್ರಾಮೀಣ ಪ್ರದೇಶದಲ್ಲಿಯೂ ಸಾಮಾನ್ಯವಾಗಿದೆ. ಹಾಗೆ ನೋಡಿದರೆ, ಈ ಶಾಮಿಯಾನ ಸಂಸ್ಕೃತಿ ತೀರಾ ಈಚೆಗೆ ಭಾರತೀಯರಿಗೆ ಪರಿಚಯವಾದದ್ದಿರಬೇಕೆಂದು ಯಾರೂ ಭಾವಿಸಬೇಕಿಲ್ಲ. ಅದು ಮೊಘಲರ ಕಾಲದಿಂದಲೇ ಈ ದೇಶದಲ್ಲಿ ಉಪಯೋಗದಲ್ಲಿತ್ತು ಎಂಬುದನ್ನು ಪ್ರಾಚೀನ ಬರಹಗಳು ಹಾಗೂ ವರ್ಣಚಿತ್ರಗಳು ಸಾಬೀತು ಪಡಿಸುತ್ತವೆ. ಶಾಮಿಯಾನಗಳ ಬಣ್ಣ, ವಿನ್ಯಾಸಗಳು, ಡೇರಾಗಳನ್ನು ನಿರ್ಮಿಸುತ್ತಿದ್ದ ಕ್ರಮ.... ಇತ್ಯಾದಿ ಅಂಶಗಳ ಬಗೆಗೂ ಈ ಚಿತ್ರಗಳಲ್ಲಿ ವಿವರಗಳಿದ್ದು ಅಭ್ಯಸನೀಯವಾಗಿವೆ.

ಶಾಮಿಯಾನ ವಿಧಗಳು : ಇಂದಿನ ಬಳಕೆಯ ಶಾಮಿಯಾನಗಳಲ್ಲಿ ಮಾರವಾಡಿ (ಜೈನ)ಗಳದು ಹಾಗೂ ಇತರರದು-ಈ ಎರಡೇ ಮಾದರಿಗಳಿದ್ದಂತಿವೆ. ಆದರೆ, ಮೊಗಲರ ಕಾಲದಲ್ಲಿ ಸಾಮಾನ್ಯ ಸೈನಿಕನಿಂದ ಸುಲ್ತಾನನವರೆಗೆ ಅವರವರ ಸ್ಥಾನಮಾನಕ್ಕನುಗುಣವಾಗಿ ಸುಮಾರು ೧೨ ಬಗೆಯ 'ಟೆಂಟ್ಸ್' ಇದ್ದವೆಂದು ಸಂಶೋಧಕರು ಹೇಳುತ್ತಾರೆ.

ಈಗಿನ ಗುಡಾರ ಅಥವಾ ಶಾಮಿಯಾನಗಳ ಬಟ್ಟೆಗಳಿಗೆ ಕೆಂಪು, ಹಳದಿ ಅಥವಾ ಹಸಿರು - ಈ ಮೂರೇ ಬಣ್ಣಗಳು ವಿಶೇಷವಾಗಿ ಬಳಕೆಯಾಗುತ್ತಿವೆ. ಇದರಲ್ಲಿ ವರ್ಗ ತಾರತಮ್ಯವೇನೂ ಇದ್ದಂತಿಲ್ಲ. ಆದರೆ, ಮೊಗಲರ ಕಾಲದಲ್ಲಿ ರಾಜಮನೆತನದವರ 'ಟೆಂಟ್'ಗಳಿಗೆ ಕೆಂಪುವರ್ಣದ ಬಟ್ಟೆಯನ್ನೂ, ಮಂತ್ರಿ

ಮಾನ್ಯರ ಟೆಂಟ್‌ಗಳಿಗೆ 'ಪಟಾಪಟಿ' (ಕೆಂಪು, ಬಿಳಿ ಪಟ್ಟಿಗಳು) ವರ್ಣ ವಿನ್ಯಾಸವನ್ನೂ ಬಳಸಲಾಗುತ್ತಿದ್ದಿತು.

ಶಾಮಿಯಾನದ ಸುತ್ತಲೂ ಮರೆಗಾಗಿ ಈಗಲೂ ಒಂದು ಕೆಂಪು ಬಟ್ಟೆಯ ಪರದೆ ಕಟ್ಟುವುದುಂಟಷ್ಟೇ. ಈ ಕ್ರಮ ಸಾಮ್ರಾಟ ಅಕ್ಬರನ ಕಾಲದಷ್ಟು ಪ್ರಾಚೀನವಾದುದು. ಆಗ ಇದಕ್ಕೆ 'ಗುಲಾಲ್‌ಬಾರ್' (ಕೆಂಪುಗೋಡೆ) ಎಂಬ ಹೆಸರಿದ್ದಿತು.

(ಜಾಲರಿಯಂತಹ (mesh) ತಂತಿಬೇಲಿ, ಡೇರಾಬಟ್ಟೆಗಳ ವಿನ್ಯಾಸ, ಡೇರಾ ಕಟ್ಟುವ ಕ್ರಮ, ಬಳಕೆ ಇತ್ಯಾದಿಗಳು ೧೮೧೫ರಷ್ಟು ಹಿಂದೆಯೇ ಭಾರತದಲ್ಲಿ ಇದ್ದ ಮಾದರಿಗಳಿಗಾಗಿ Indian Painting, ಪು. ೨೬ ಹಾಗೂ ವಿವಿಧ ಬಗೆಯ ಡೇರಾಗಳಿಗಾಗಿ Early Mughal Painting, PL. II ನೋಡಿರಿ).

ಅಂದಹಾಗೆ, ' ಶಾಮಿಯಾನ' ಎಂಬ ಶಬ್ದ 'ಶಾಮ್' (ಸಂಜೆ) (That is an awining for use in the evening) ಅಥವಾ sama, a veil - ನಿಂದ ಬಂದಿರಬಹುದು ಎನ್ನಲಾಗಿದೆ (ಹೆಚ್ಚಿನ ವಿವರಕ್ಕೆ ನೋಡಿ : Irwine 1962 : 195. 'ಐ-ನಿ- ಅಕ್ಬರಿ' ಯಲ್ಲೂ ಈ ಸಂಬಂಧಿಸಿದ ಚಿತ್ರ, ವಿವರಗಳನ್ನು ಕಾಣಬಹುದು).

ಡೇರಾ ಕಟ್ಟುವ ಕ್ರಮ

ನಳದಮಯಂತಿಯರ ಕಥಾನಕ ನಿರೂಪಿಸುವ ೧೮ ನೇ ಶತಮಾನದ ಒಂದು ಪಹಾರಿ ವರ್ಣ ಚಿತ್ರದಲ್ಲಿ ದೊರೆ ಭೀಮ ರಾಜನು ದಮಯಂತಿಯ ಸ್ವಯಂವರಕ್ಕೆ ಬಂದ ರಾಜಾಧಿರಾಜರನ್ನು ಸ್ವಾಗತಿಸುತ್ತಿರುವ ಚಿತ್ರಣವಿದೆ. ರಾಜಭಟರು/ಕೆಲಸಗಾರರು ಅತಿಥಿಗಳ ವಸತಿಗಾಗಿ ಡೇರಾಗಳನ್ನು ಸಿದ್ಧಪಡಿಸುತ್ತಿರುವ ಕ್ರಮಗಳು ಇದರಲ್ಲಿ ನಮ್ಮ ಗಮನವನ್ನು ವಿಶೇಷವಾಗಿ ಸೆಳೆಯುತ್ತವೆ. ಅದರಲ್ಲಿ ಡೇರಾದ ಹಗ್ಗ ಹಿಡಿದು ಜಗ್ಗಿ, ಬಿಗಿ ಮಾಡುತ್ತಿದ್ದಾರೆ; ನೆಲಕ್ಕೆ ಗೂಟವನ್ನು ದೊಡ್ಡ ಸುತ್ತಿಗೆಯಂತಹ ಸಾಧನದಿಂದ ಒಬ್ಬ ಬೀಸಿ

ಬಡಿಯುತ್ತಿದ್ದಾನೆ. ಶಾಮಿಯಾನದ ಸುತ್ತಲ ಬಟ್ಟೆಯನ್ನು ಅಚ್ಚುಕಟ್ಟಾಗಿ ಹರಡುತ್ತಿರುವುದನ್ನೂ ಅದರಲ್ಲಿ ಚಿತ್ರಿಸಿದೆ (ನೋಡಿ : Pahari paintings of the Nala-Damayanti Theme). ಶಾಮಿಯಾನ/ಡೇರಾಗಳನ್ನು ನಿರ್ಮಿಸುವ ಕೆಲಸಗಾರರು ಇಂದೂ ಇದೇ ರೀತಿ ಕಾರ್ಯನಿರ್ವಹಿಸುವುದನ್ನು ಇದರೊಡನೆ ಹೋಲಿಸಬಹುದಾಗಿದೆ.

ನೇಕಾರಿಕೆ

ಅಶನ, ವಸತಿಗಳ ಹಾಗೆ ವಸನವೂ ಮನುಷ್ಯನಿಗೆ ನಿತ್ಯದ ಅಗತ್ಯ. ಪ್ರಾಚೀನ ಜನಪದರಿಗೆ ತುಂಡು ಲಂಗೋಟಿ, ಮೈಮೇಲೊಂದು ಕಂಬಳಿ, ತಲೆಗೆ ಸುತ್ತಲೊಂದು ಸಾಧಾರಣ ಬಟ್ಟೆ- ಇಷ್ಟಾದರೂ ಬೇಕಿದ್ದಿತು. ಶ್ರೀಮಂತರಿಗೆ ಮೈತುಂಬುವ ಬಣ್ಣದ ವಸ್ತ್ರಗಳು ಬೇಕಿದ್ದವು. ಅಂದಮೇಲೆ, ಇವನ್ನೆಲ್ಲಾ ಒದಗಿಸಲು ನೇಕಾರ ಕಸುಬಿನವರು ಆಗ ಇದ್ದಿರಬೇಕು. ಅವರು ಬಟ್ಟೆಯನ್ನು ಹೇಗೆ ನೇಯುತ್ತಿದ್ದಿರಬಹುದು ? ನೂಲು ಹೇಗೆ ಸಿದ್ಧ ಪಡಿಸುತ್ತಿದ್ದಿರಬಹುದು ? ಅದರ ತಂತ್ರಜ್ಞಾನವೇನು ? ಇಂದು ಹಳ್ಳಿಗಳಲ್ಲಿ ನಾಮಾವಶೇಷವಾಗಿರುವ ಕೈಮಗ್ಗದ ಕಾರ್ಯವಿಧಾನಕ್ಕೂ ಹಿಂದಿನವರ ನೇಯ್ಗೆ ವಿಧಾನಕ್ಕೂ ಏನಾದರೂ ಹೋಲಿಕೆಗಳಿದ್ದಿರಬಹುದೇ ? - ಇತ್ಯಾದಿ ಪ್ರಶ್ನೆಗಳು ನಮ್ಮ ಕುತೂಹಲ ಕೆರಳಿಸುತ್ತವೆ. ಪ್ರಾಚ್ಯ ಜಾನಪದ ಅಧ್ಯಯನ ಈ ಜನಪದ ಕುಲಕಸುಬಿನ ಬಗೆಗೆ ಬೇಕಾದ ಮಾಹಿತಿಗಳನ್ನು ದೊರಕಿಸಿಕೊಡುತ್ತದೆ - ಎಂಬುದು ಸಂತಸದ ವಿಷಯವಾಗಿದೆ. ಈವತ್ತಿನ ಛಾಯಾ ಚಿತ್ರಗಳ ಹಾಗೆ ಕೆಲಸ ಮಾಡುವ ಪ್ರಾಚೀನ ವರ್ಣಚಿತ್ರಗಳು ಮತ್ತೆ ಇಲ್ಲಿ ನಮ್ಮ ನೆರವಿಗೆ ಬರುತ್ತವೆ.

ಸು. ೧೫೫೦ರ ಕಾಲದ ಒಂದು ಮುಘಲ್ ಶೈಲಿ ಚಿತ್ರದಲ್ಲಿ ಅರಳೆಯನ್ನು ಗುಡ್ಡೆಹಾಕಿ, ಸಣ್ಣ ಕೋಲಿನಿಂದ ಬಡಿದು, ನೂಲು ಮಾಡುವುದರಿಂದ ಹಿಡಿದು ಬಣ್ಣದ ವಸ್ತ್ರಗಳನ್ನು ಸಿದ್ಧಪಡಿಸುವವರೆಗಿನ ವಿವಿಧ ಹಂತಗಳ ನೇಯ್ಗೆ ಕಾರ್ಯವಿಧಾನವನ್ನು ಈ ಚಿತ್ರದಲ್ಲಿ ಯಥಾವತ್ತಾಗಿ ಚಿತ್ರಿಸಿದೆ. ಮಗ್ಗಕ್ಕೆ ನೂಲು ಹರಡಿರುವ ಕ್ರಮ, ಲಾಳಿ, ನೇಕಾರ ತನ್ನ ಕಾಲನ್ನು ಇಳಿಬಿಟ್ಟು

ಕುಳಿತು, ಒತ್ತುತ್ತಿರುವ ಕ್ರಮ, ನೂಲನ್ನು ಬಿಡುತ್ತಿರುವ ರೀತಿ, ಬಹುಶಃ ಗಂಜಿ ಹಾಕುತ್ತಿರುವುದು, ನೀರು ಕಾಯಿಸಲು ಬಳಸುತ್ತಿರುವ ಎತ್ತೊಲೆ (ಬೇಕಾದಲ್ಲಿಗೆ ಸಾಗಿಸಬಹುದಾದ ಸುಟ್ಟ-ಮಣ್ಣಿನ ಸಣ್ಣ ಒಲೆ ; ಹಳ್ಳಿಗಳಲ್ಲಿ ಈಗಲೂ ಕೆಲವರು ಇದನ್ನು ಬಳಸುತ್ತಾರೆ) ಹಾಗೂ ಮಡಕೆ, ಅದರ ಬಾಯಿಗೆ ಮುಚ್ಚಿದ ಚಟ್ಟಣೆ... ಈ ಮೊದಲಾದ ಆಗಿನ ನೇಯ್ಗೆ ವಿಧಾನಗಳು ಹಾಗೂ ಸಾಧನ-ಸಲಕರಣೆಗಳು ಸು. ೪೦ ವರ್ಷಗಳ ಹಿಂದೆ ನಮ್ಮೂರಿನ ನೇಕಾರನಲ್ಲಿ ನಾನು ಕಂಡಿದ್ದ ಅಂಶಗಳನ್ನು ನೆನಪಿಗೆ ತರುತ್ತವೆ. ಯಾವುದಾದರೂ ಕುಗ್ರಾಮದಲ್ಲಿ ಅಥವಾ ಕಂಬಳಿ ನೇಕಾರರಲ್ಲಿ ಅಳಿದುಳಿದಿರುವ ಕಸುಬಿನ ವಿಧಾನದೊಂದಿಗೆ ಈ ಅಂಶಗಳನ್ನು ಹೋಲಿಸಿ, ಆಗಿರಬಹುದಾದ ವ್ಯತ್ಯಾಸಗಳನ್ನು ಅಥವಾ ಈಗಿನ ವಿಧಾನದ ಮೂಲ ರೂಪಗಳನ್ನು ಕುರಿತು ಅಭ್ಯಾಸ ಮಾಡಬಹುದಾಗಿದೆ (ಚಿತ್ರಕ್ಕೆ ನೋಡಿ, Toby Falk and Milderd Archer 1981 : 47).

ಕುಂಬಾರಿಕೆ

ಮಡಕೆಯು ದಿನನಿತ್ಯದ ಬಳಕೆಯ ಜೀವನಾವಶ್ಯಕ ವಸ್ತುಗಳಲ್ಲಿ ಒಂದು. ಮನುಷ್ಯ ಮಡಕೆ - ಕುಡಿಕೆ ಮಾಡುವುದನ್ನು ಯಾವಾಗ ಕಂಡಕೊಂಡ ಎಂಬುದೊಂದು ಕುತೂಹಲದ ಪ್ರಶ್ನೆ. ಏಕೆಂದರೆ ಅದೊಂದು ಜ್ಞಾನ, ಪ್ರೌಢ ತಂತ್ರಗಾರಿಕೆ. ಪ್ರಾಚ್ಯ ಸಂಶೋಧನೆಗಳನ್ನು ಆಧರಿಸಿ ಹೇಳಬಹುದಾದರೆ 'ಈವರೆಗೆ ದೊರೆತಿರುವ ಆಧಾರಗಳಿಂದ, ತಿಗರಿ ಮೇಲೆ ಮಣ್ಣು ಇಟ್ಟು ಮಡಕೆ ಮಾಡುವ ತಿಳಿವಳಿಕೆ ಇದ್ದದ್ದು ಮೊದಲು ಈಜಿಪ್ಟಿನಲ್ಲಿ. ನೈಲ್ ಕಣಿವೆಯ ಉತ್ಖನನದಲ್ಲಿ ೧೩,೦೦೦ ವರ್ಷಗಳ ಹಿಂದಿನ ಸುಟ್ಟ ಸೆರಾಮಿಕ್ ಪಾತ್ರೆಗಳು ದೊರೆತಿವೆ. ಕ್ರಿ. ಪೂ. ೫ ಸಾವಿರದಿಂದ ೩ ಸಾವಿರ ಕಾಲದಷ್ಟು ಹಿಂದಿನ ಕೆಲ ಮಣ್ಣಿನ ಪಾತ್ರೆ ಅವಶೇಷಗಳೂ ಈಜಿಪ್ಟಿನಲ್ಲಿ ದೊರೆತಿವೆ. ಭಾರತದಲ್ಲಿ ಈ ತಿಗರಿ ಕುಂಬಾರಿಕೆ ಯಾವಾಗಿನಿಂದ ಪ್ರಾರಂಭವಾಯಿತು, ಯಾರಿಂದ ಆಯಿತು ಎಂಬುದು ತಿಳಿದುಬಂದಿಲ್ಲ. ಆದರೆ, ಬಹುಶಃ ಇವರಿಗೆ ಈ ಕಲೆ ಅಸ್ಸೀರಿಯನ್ ಮತ್ತು ಛಲ್ಡುವನ್‌ರಿಂದ ಪ್ರಾಪ್ತವಾಗಿರಬಹುದು. ಆದರೂ, ಇತಿಹಾಸ ಪೂರ್ವ

ಕಾಲದಲ್ಲೇ ಭಾರತೀಯರು ತಮ್ಮದೇ ವಿಧಾನದಿಂದ ಮಡಕೆ ಮಾಡುವ ಕ್ರಮ ಅರಿತಿದ್ದರು. ಕ್ರಿ. ಪೂ. ೩ ನೇ ಸಹಸ್ರ ಮಾನದಷ್ಟು ಹಿಂದೆಯೇ ಭಾರತದ ಈ ಕುಂಬಾರಿಕೆ ಕಲೆ ಪ್ರೌಢಿಮೆ ಗಳಿಸಿತ್ತು ' (Krishnamurthy 1982:109) ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ಕುಲಾಲ (ಕುಂಬಾರ) ಎಂಬ ಶಬ್ದ ' ಯಜುರ್ವೇದ'ದಲ್ಲಿಯೇ ಕಾಣಬರುತ್ತದೆ. ಪ್ರಾಚೀನ ಜೈನ ಸಾಹಿತ್ಯದಲ್ಲಿ ಕುಂಬಾರರ ಅಂಗಡಿಗಳ ಪ್ರಸ್ತಾಪ ಬರುತ್ತದೆ. ' ಶತಪಥ ಬ್ರಾಹ್ಮಣ', 'ತೈತ್ತೀರಿಯ ಸಂಹಿತೆ' ಹಾಗೂ ಬುದ್ಧನ 'ಜಾತಕ ಕತೆ' ಗಳಲ್ಲಿ ಮಡಕೆ ಮಾಡುವ ಮಣ್ಣಿಗೆ ಹದಕ್ಕಾಗಿ ಮೇಕೆ ಬಂಡ (ತುಪ್ಪಳ), ಬೂದಿ, ಸಗಣಿ ಇತ್ಯಾದಿ ಮಿಶ್ರಣ ಮಾಡುತ್ತಿದ್ದುದರ ಮಾಹಿತಿ ದೊರೆಯುತ್ತದೆ.

ನಮ್ಮಲ್ಲಿ ಈಗಲೂ ಮನೆಯ ಮುಂದೆ ಅಥವಾ ಸಂತೆಗಳಲ್ಲಿ ಮಡಕೆ ಕೊಳ್ಳುವ ಹೆಂಗಸರು ಮಡಕೆ ಹದವಾಗಿ ಬೆಂದಿದೆಯೇ, ಎಲ್ಲಾದರೂ ಸೀಳಿದೆಯೇ?.. ಎಂಬುದನ್ನು ಪರೀಕ್ಷಿಸಲು, ಹೊಸ ಮಡಕೆಯನ್ನು ಎಡಗೈಲಿ ಎತ್ತಿ ಹಿಡಿದು, ಬಲಗೈ ಬೆರಳುಗಳಿಂದ ಸುತ್ತಲೂ ಬಡಿದು ನೋಡುತ್ತಾರೆ. ಆಗ ಕೇಳಿಬರುವ ಖಣಿ ಖಣಿ ನಾದದಿಂದಲೇ ಅದರ ಗುಣ - ದೋಷ ವ್ಯಕ್ತವಾಗುತ್ತದೆ.

ಮಡಕೆಗಳನ್ನು ಪರೀಕ್ಷಿಸುವ ಈ ತಾಂತ್ರಿಕ ತಿಳುವಳಿಕೆ ನಮ್ಮ ಜನಪದರಿಗೆ 'ಭೋಜ ಪ್ರಬಂಧ' ಕಾವ್ಯದಷ್ಟು ಪ್ರಾಚೀನ ಕಾಲದಿಂದಲೂ ಇದ್ದಿತೆಂಬುದು ಗಮನಾರ್ಹವಾಗಿದೆ. ಮಡಕೆಯೊಂದು ಭೋಜರಾಜನ ಬಳಿ ಬಂದು ನ್ಯಾಯ ಕೇಳಿ ನಿವೇದಿಸುವ ತನ್ನ ಅಹವಾಲಿನಲ್ಲಿ ಪರೋಕ್ಷವಾಗಿ ಆ ಕಾಲದಲ್ಲೂ ಈಗಿನಂತೆಯೇ ಮಡಕೆ ಮಾಡುತ್ತಿದ್ದ ಕ್ರಮವಿದ್ದುದು ವ್ಯಕ್ತವಾಗುತ್ತದೆ. ಮಡಕೆ ಕೇಳುತ್ತದೆ :

'ಮಣ್ಣಿನ ರೂಪದಲ್ಲಿದ್ದ ನನ್ನನ್ನು ಕುಂಬಾರ ಗುದ್ದಲಿಯಿಂದ ಅಗೆದ ಮತ್ತು ಕತ್ತೆ ಮೇಲೆ ಸವಾರಿ ಮಾಡುವಂತೆ ಮಾಡಿದ (ಹಿಂದೆ ತಪ್ಪ

ಮಾಡಿದವರನ್ನು ಕತ್ತೆ ಮೇಲೆ ಮೆರವಣಿಗೆ ಮಾಡುತ್ತಿದ್ದುದರಿಂದ ಅದೊಂದು ಅವಮಾನದ ಶಿಕ್ಷೆ ಎಂದು ಪರಿಗಣಿತವಾಗಿದ್ದಿತು). ಆಮೇಲೆ ದುರಾತ್ಮನಾದ ಅವನು ನಿರ್ದಯನಾಗಿ ನನ್ನನ್ನು ತನ್ನ ಕಾಲುಗಳಿಂದ ತುಳಿದು, ತಿಗರಿ ಮೇಲಿಟ್ಟು ಕೋಲಿನಿಂದ ಗರಗರ ಸುತ್ತಿಸಿದ. ದಾರದಿಂದ ತಳ ಕತ್ತರಿಸಿ, ಚೆನ್ನಾಗಿ ಬಡಿದು, ಆಮೇಲೆ ಬೇಯಿಸಿದ. ಇದನ್ನೆಲ್ಲಾ ನಾನು ತಾಳ್ಮೆಯಿಂದ ಸಹಿಸಿ ತಡೆದುಕೊಂಡೆ. ಅದು ಸಾಲದೆ, ಆಮೇಲೆ ಊರ ಹೆಂಗಸರು ನನ್ನ ಮೇಲೆ ಬೆರಳುಗಳಿಂದ ಅನೇಕ ಸಲ ಬಡಿದೂ ಬಡಿದೂ ನೋಯಿಸಿದ್ದನ್ನು ಮಾತ್ರ ನಾನಿನ್ನೂ ಸಹಿಸಲಾರೆ' (Ibid, P - 126).

ಈ ಕಥಾನಕ ವಿನೋದ ಪೂರ್ಣ ಕಲ್ಪನೆ ಎನಿಸಿದರೂ ನಮ್ಮ ಪ್ರಾಚೀನರ ಕುಂಬಾರಿಕೆ ಕಲೆಯ ಕೆಲ ' ತಂತ್ರ'ಗಳನ್ನು ದಾಖಲಿಸುವ ಮೂಲಕ ಪ್ರಾಚ್ಯಜಾನಪದ ಅಧ್ಯಯನಕ್ಕೆ ಅಪರೂಪದ ದಾಖಲೆಯೊಂದನ್ನು ಒದಗಿಸಿಕೊಟ್ಟಂತಾಗಿದೆ.

ಬೀದಿ ಕಲಾವಿದರು

ಭಾರತ ಎಂದಿನಿಂದಲೂ ಯಕ್ಷಣಿಗಾರರು, ದೊಂಬರು, ಹಾವಾಡಿಗರು ಮೊದಲಾದ 'ಬೀದಿ ಕಲಾವಿದ'ರಿಗೆ ಹೆಸರಾಗಿದೆ. ನೋಡುಗರ ದೃಷ್ಟಿಯಲ್ಲಿ ಇವರು 'ಮನೋರಂಜಕ'ರಾದರೂ ಅವರಿಗೆ ಅದು ಬದುಕಿನ ಒಂದು ಅನಿವಾರ್ಯ ಮಾರ್ಗವೂ ಆಗಿದೆ. ಇಂತಹ ಕೆಲ ಕಸುಬುದಾರರು ಗೂಢಚಾರಿಗಳಾಗಿಯೂ ಕೆಲಸ ಮಾಡುತ್ತಿದ್ದ ಬಗ್ಗೆ 'ಮುದ್ರಾಮಂಜೂಷ'ದಂತಹ ಪ್ರಾಚೀನ ಕೃತಿಗಳಲ್ಲಿ ಮಾಹಿತಿ ದೊರೆಯುತ್ತದೆ.

ಇವರೆಲ್ಲಾ ಬಹುಮಟ್ಟಿಗೆ ಬೀದಿ ಕಲಾವಿದರು. ಬೀದಿ ಬದಿಯಲ್ಲಿ, ರಸ್ತೆಗಳು ಕೂಡುವ ವೃತ್ತಗಳಲ್ಲಿ, ದೊಡ್ಡ ದೊಡ್ಡ ಮನೆಗಳ ಅಂಗಳಗಳಲ್ಲಿ ತಮ್ಮ ವಾದ್ಯ ಹಾಗೂ ಮಾತುಗಳ ಮೂಲಕ ಜನರನ್ನು ಆಕರ್ಷಿಸಿ, ಗುಂಪು ಸೇರಿಸಿ, ತಮ್ಮ ಚಮತ್ಕಾರ ತೋರುತ್ತಾರೆ. ಜನ ಮೆಚ್ಚಿ ಕೊಡುವ ಚಿಲ್ಲರೆ ಕಾಸು, ರಾಗಿ, ನೆಲ್ಲು, ಹಳೇಬಟ್ಟೆ ಅವರ ಜೀವನಕ್ಕಾಗುತ್ತದೆ. ಒಂದು ಕಾಲಕ್ಕೆ

ಊರೂರುಗಳಲ್ಲಿ ಕಾಣಬರುತ್ತಿದ್ದ ಇವರು ಬದಲಾದ ಸಾಮಾಜಿಕ ವ್ಯವಸ್ಥೆಗಳಿಂದಾಗಿ ಇಂದು ಸಹಜವಾಗಿಯೇ ನಗರ-ಪಟ್ಟಣ ಸೇರಿದ್ದಾರೆ. ೨೦೦-೩೦೦ ವರ್ಷಗಳಿಗೂ ಹಿಂದೆ ಇಂತಹವರ ಪರಿಸ್ಥಿತಿ ಹೇಗಿತ್ತು ? ಅವರು ಪ್ರದರ್ಶಿಸುತ್ತಿದ್ದ ಚಮತ್ಕಾರಗಳು ಹೇಗಿದ್ದವು ? ಅವುಗಳ ಸಂದರ್ಭ, ಸನ್ನಿವೇಶ, ವೇಷ ಭೂಷಣ ಹೇಗಿದ್ದವು ? ಇಂತಹ ಅಂಶಗಳನ್ನು ಕುರಿತು ಅಭ್ಯಾಸ ಮಾಡಲು, ಇವತ್ತಿನ ಸ್ಥಿತಿಯೊಡನೆ ಹೋಲಿಸಲು ನಾವು ಕೆಲವು ಪ್ರಾಚ್ಯವರ್ಣಚಿತ್ರಗಳ ನೆರವು ಪಡೆಯಬಹುದಾಗಿದೆ.

ಹಾವಾಡಿಗರು : ಕ್ರಿ. ಶ. ೧೭೬೦ ರ ಸುಮಾರಿನಲ್ಲಿ ರಚಿತವಾದ ಬುಂದಿ (ರಾಜಸ್ಥಾನ) ಶೈಲಿಯ ವರ್ಣಚಿತ್ರವೊಂದು ಹಾವಾಡಿಗನ ಪ್ರಸಂಗವನ್ನು ಕುರಿತದ್ದಾಗಿದೆ (ನೋಡಿ Havell, PL. E). ಅದರಲ್ಲಿ ಹಾವಾಡಿಗ ಪುಂಗಿಯೊಂದಿಗೆ ಇದ್ದರೆ, ಅವನ ಸಹಾಯಕ ಮುಂಗುಸಿ ಹಿಡಿದು ಎದಿರು ಕುಳಿತಿದ್ದಾನೆ. ಹಾವು- ಮುಂಗುಸಿ ಕಾಳಗಕ್ಕೆ ಸಿದ್ಧತೆಯಾಗಿದೆ. ಮೂವರು ತರುಣಿಯರು ಮನೆಬಾಗಿಲಲ್ಲಿ ನಿಂತು ಅತ್ಯಾಸಕ್ತಿಯಿಂದ ಈ ದೃಶ್ಯ ವೀಕ್ಷಿಸುತ್ತಿದ್ದಾರೆ. ಈ ಆಟವನ್ನು ಕೃಷ್ಣ ತನ್ನ ಮನೆಯ ಬಾಲ್ಕನಿಯಿಂದ ನೋಡುತ್ತಾ ನಿಂತಿದ್ದಾನೆ.

ಇದರಲ್ಲಿ ಹಾವಾಡಿಗನ ಅಂದಿನ ವೇಷ ಭೂಷಣದ ಮಾದರಿ, ಮನೆ - ಬಾಗಿಲು, ಪರದೆಗಳ ವಿನ್ಯಾಸ, ಹಳೇಕಾಲದ ಮನೆ ಮುಂದಿನ ಒಳ ಅಂಗಳ-ಗೋಡೆ - ಬಾಗಿಲು ... ಇವುಗಳನ್ನೆಲ್ಲಾ ಗಮನಿಸಬಹುದು.

ಬಿದಿರಿನ ಬುಟ್ಟಿಯಿಂದ ಹೆಡೆ ಎತ್ತಿದ ನಾಗ ಪುಂಗಿನಾದಕ್ಕೆ ಮನ ಸೋತಂತೆ ಇದ್ದರೆ, ಇನ್ನೊಂದು ಹಾವು ಹತ್ತಿರದಲ್ಲೇ ಹರಿದಾಡುತ್ತಿರುವ ಎರಡು ಚೇಳುಗಳನ್ನು ಕುತೂಹಲದಿಂದ ಗಮನಿಸುತ್ತಿದೆ. ಆ ಕಾಲದ ಹಾವಾಡಿಗರು ಜನರಂಜನೆಗಾಗಿ ಚೇಳುಗಳನ್ನು ಬಳಸುತ್ತಿದ್ದರೆಂಬ ಕುತೂಹಲದ ಅಂಶ ಈ ಚಿತ್ರದ ಮೂಲಕ ನಮ್ಮ ಗಮನ ಸೆಳೆಯುತ್ತದೆ. ಹಾಗೆಯೇ, ಇಂದಿನವರಂತೆ ಅಂದಿನ ಹಾವಾಡಿಗರೂ ' ನಿಜವಾಗಿ ಜಗಳಕ್ಕೆ ಬಿಡದಿದ್ದರೂ' ಬದ್ಧ ವೈರಿಗಳಾದ

ಹಾವು - ಮುಂಗುಸಿಗಳನ್ನು ಕಾಳಗಕ್ಕಾಗಿ ಬಿಡುವುದಾಗಿ ಹೇಳಿ, ಜನರನ್ನು ಆಟದ ಕೊನೆಯುವರೆಗೂ ಕಾದು ನಿಲ್ಲುವಂತೆ ಮಾಡುತ್ತಿದ್ದರೆಂದೂ ಊಹಿಸಬಹುದಾಗಿದೆ.

ದೊಂಬರು : ಇನ್ನೊಂದು ಚಿತ್ರ ದೊಂಬರಾಟಕ್ಕೆ ಸಂಬಂಧಿಸಿದ್ದು : ಬೀದಿಯೊಂದರಲ್ಲಿ ದೊಂಬರು ಆಟವಾಡುತ್ತಿದ್ದಾರೆ. ಎಂದಿನ ಅವರ ಶೈಲಿಯಲ್ಲಿ ಒಬ್ಬ ದೊಂಬ ಡೋಲು ಬಡಿಯುತ್ತಿದ್ದಾನೆ, ಹಗ್ಗದ ಮೇಲೆ ಇಬ್ಬರು ತರುಣಿಯರು ಸುಲಲಿತವಾಗಿ ಕಸರತ್ತು ಮಾಡುತ್ತಾ ನಡೆಯುತ್ತಿದ್ದಾರೆ (ಮನೆ ಉಪ್ಪರಿಗೆ ಮೇಲೆ ನಿಂತ ಕೃಷ್ಣ ಎದಿರು ಮನೆ ಮೇಲೆ ನಿಂತ ರಾಧೆಯನ್ನು ನೋಡುತ್ತಿದ್ದಾನೆ). ಅಂದರೆ, ಆಟಕ್ಕೆ ಆಕರ್ಷಣೆಯಾದ ಡೋಲು ವಾದನ, ಹಗ್ಗದ ಮೇಲೆ ತರುಣಿಯರ ಕಸರತ್ತು... ಇವೆಲ್ಲಾ ಬಹು ಹಿಂದಿನಿಂದಲೂ ನಮ್ಮ ದೊಂಬರಲ್ಲಿ ಇದ್ದಿರುವುದು ವೇದ್ಯವಾಗುತ್ತದೆ (ನೋಡಿ : India Magazine, June, 1984, P-36).

ಹಬ್ಬ- ಕ್ರೀಡೆಗಳು

'ಭೂಹಳ್ಳಿ' (Global Village) ಪರಿಕಲ್ಪನೆಯಿಂದಾಗಿ ಇಂದು ನಮ್ಮ ಜನರಿಗೆ ಹೊಸ ಹೊಸ ಹಬ್ಬಗಳು, ಕ್ರೀಡೆಗಳು ಪರಿಚಯವಾಗಿರುವಂತೆ ಅದೆಷ್ಟೋ ಪ್ರಾಚೀನ ಹಬ್ಬ, ಕ್ರೀಡೆಗಳು ಇನ್ನೂ ಇವರಲ್ಲಿ ಉಳಿದು ಬಂದಿವೆ. ಆದರೆ, ಈ ಹಬ್ಬ, ಆಟಗಳು ಎಷ್ಟು ಪ್ರಾಚೀನ ? ಆಗಿನ ಅವುಗಳ ಸ್ವರೂಪವೇನು ? - ಎಂಬಿತ್ಯಾದಿ ಕುರಿತಂತೆ ಪ್ರಾಚ್ಯ ಆಕರಗಳ ಶೋಧನೆ, ಅಧ್ಯಯನ ವ್ಯಾಪಕವಾಗಿ ಆಗಬೇಕಿದೆ.

ಒಂದು ಕಾಲಕ್ಕೆ ನಮ್ಮಲ್ಲಿ ಇದ್ದು, ಈಗ ನಾಮಾವಶೇಷವಾಗಿರುವ 'ಬಾದುಬ್ಬೆಯ ಹಬ್ಬ', ಈಗಲೂ ಅಲ್ಲಲ್ಲಿ ಅಳಿದುಳಿದಿರುವ 'ಹಗರಣ' ದಂತಹ ವೈನೋದಿಕ ಆಚರಣಾ ಪ್ರದರ್ಶನಗಳು ಸಾವಿರ ವರ್ಷಗಳ ಹಿಂದೆಯೇ ಕರ್ನಾಟಕದಲ್ಲಿ ಇದ್ದವು ಎಂಬ ಬಗ್ಗೆ 'ವಡ್ಡಾರಾಧನೆ' ಯಂತಹ ಸಾಹಿತ್ಯ ಕೃತಿಗಳಲ್ಲಿ ಮಾಹಿತಿ ದೊರೆಯುತ್ತದೆ.

ಪ್ರಾಚೀನ ಬೌದ್ಧ ಕೃತಿಗಳಲ್ಲೂ ಕೆಲ ಹಬ್ಬ, ಕ್ರೀಡೆಗಳ ಬಗೆಗೆ ಉಲ್ಲೇಖಗಳಿರುವುದು ತಿಳಿದುಬರುತ್ತದೆ. 'ಬೌದ್ಧ ಸಾಹಿತ್ಯದಲ್ಲಿ 'ಸಮಜ್ಜ'ಎಂಬ ಪದ ಪದೇ ಪದೇ ಪ್ರಸ್ತಾಪವಾಗುತ್ತದೆ. ಅದು 'ಹಬ್ಬದ ಮೇಳ ' (Festive Gathering) ಕುರಿತದ್ದು. " ಸಿಂಗಲೋವದ ಸುತ್ತ" ದಲ್ಲಿ ಇಂತಹ ಮೇಳಗಳಲ್ಲಿ ಹಾಡು, ಕುಣಿತ, ದೊಂಬರಾಟಗಳು ಇರುತ್ತಿದ್ದುದರ ಬಗ್ಗೆ ಹೇಳಲಾಗಿದೆ (Krishna Murthy 1982:52). " ದಿಘಾನಿಕಾಯ" ದಲ್ಲಿ ಸಹ ಜನ ಸ್ವತಃ ಅಂತಹ ಕೂಟಗಳಲ್ಲಿ ಸೇರಿ ನಲಿಯುತ್ತಿದ್ದ ಕುರಿತು ಹೇಳಲಾಗಿದೆ. ಅಲ್ಲಿ ಚಾಂಡಾಲರಿಂದ ಸಂಗೀತ, ಚಾರಣ ಕವಿಗಳ ಆಶುಕವಿತ್ವ (Chanting of bards) ಮತ್ತು ಯಕ್ಷಿಣಿ (Fairy Seenes) ಗಳು ಪ್ರದರ್ಶಿತವಾಗುತ್ತಿದ್ದವಂತೆ. ಇದರ ಜತೆಗೇ ಪ್ರಾಣಿಗಳ ಸ್ಪರ್ಧೆ, ಕುಸ್ತಿ, ಟಗರಿನ ಕಾಳಗ ಮತ್ತು Manoeuvers ಸಹ ಇರುತ್ತಿದ್ದವಂತೆ.

ನಮ್ಮಲ್ಲಿ ಕೆಲವೆಡೆ ಈಗಲೂ ಹಬ್ಬ- ಜಾತ್ರೆಗಳಲ್ಲಿ ದಲಿತರು ಮನೆಮನೆಗೆ ಹೋಗಿ ಹಬ್ಬದ ಅಡುಗೆ, ಹಣ, ವಸ್ತ್ರ ಇತ್ಯಾದಿ ಪಡೆಯುವ ಪರಿಪಾಠ ಇದೆ (ಉದಾ. ನೋಡಿ : ಗೋವಿಂದರಾಜು (ಅ) ೨೦೦೦ : ೨೮, ಕೆಲವೆಡೆ ಇವರು ವಾದ್ಯ ನುಡಿಸುತ್ತಲೂ ಹೋಗಬಹುದು. ಈ ಪ್ರವೃತ್ತಿ ಬೌದ್ಧ ಸಾಹಿತ್ಯದಷ್ಟು ಪ್ರಾಚೀನವಾಗಿದೆ. ಹಬ್ಬದ ದಿನಗಳಲ್ಲಿ ('ಛನ್ನಂ ಉಸ್ಸವೊ') ಗ್ರಾಮೀಣ ವಾದ್ಯಗಾರರು ಮತ್ತು ಶಂಖ ಊದುವ ಕಲಾವಿದರು ಹೀಗೆ ಹಣ ಸಂಗ್ರಹ ಮಾಡುತ್ತಿದ್ದ ಬಗ್ಗೆ ಬೌದ್ಧ ಜಾತಕ ಸಾಹಿತ್ಯದಲ್ಲಿ ಪ್ರಸ್ತಾಪಗಳಿವೆ. ಈ ಹಬ್ಬಗಳಲ್ಲಿ ರೈತರೂ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಜನ ಹೊಸಬಟ್ಟೆ ಉಟ್ಟು, ಬಂಧು ಮಿತ್ರರೊಡನೆ ಪ್ರೀತಿ-ಶುಭಗಳ ಮಾತಾಡಿ, ಕುಡಿದು ಖುಷಿ ಪಡುತ್ತಿದ್ದರು. 'ನಟ' ರಿಂದ 'ಹಗ್ಗದ ಜಗ್ಗಾಟ' (Rope - Racing), 'ಭರ್ಜಿ ಕುಣಿತ' (Javelin Dancing) ಮೊದಲಾದವು ಬಹು ಕೌಶಲ ಪೂರ್ಣವಾಗಿ, ಸಮ್ಮೋಹಕವಾಗಿ ಪ್ರದರ್ಶಿತವಾಗುತ್ತಿದ್ದವಂತೆ. ಕೆಲ ಕುಣಿತಗಳಲ್ಲಿ ಗಾಯಗಳೂ ಆಗುತ್ತಿದ್ದವಂತೆ (Krishnam Murthy 1982:59).

'ಚಕ್ಕಾಬಾರ','ಆನೆಘಟ್ಟ' ಮೊದಲಾದ ಕೆಲ ಆಟಗಳು ಇಂದೂ ವರ್ಣ, ವರ್ಗ, ವಯ, ಲಿಂಗ ತಾರತಮ್ಯವಿಲ್ಲದೆ ನಮ್ಮ ಊರು, ಪಟ್ಟಣಗಳಲ್ಲೂ ಜನಪ್ರಿಯವಾಗಿವೆ. ಎಷ್ಟೋ ಊರುಗಳಲ್ಲಿ ಮನೆಯ ವಪ್ಪಾರ, ಅಶ್ವತ್ಥ ಜಗಲಿ, ದೇವಸ್ಥಾನದ ಚಾವಡಿ ಮೊದಲಾದ ಜಾಗಗಳಲ್ಲಿನ ಹಾಸುಗಲ್ಲುಗಳ ಮೇಲೆ ಈ ಆಟಗಳಿಗೆ ಬೇಕಾದ 'ಘಟ್ಟ' (ಮನೆ) ಗಳನ್ನೂ ಕೊರೆದಿರುತ್ತಾರೆ. ಈ ಪ್ರವೃತ್ತಿ ಕ್ರಿ. ಶ. ೩-೪ ನೇ ಶತಮಾನದಷ್ಟು ಹಳೆಯದು -ಎಂಬುದಕ್ಕೆ ಪುರಾವೆಗಳು ಲಭ್ಯವಾಗಿವೆ. ಆಂಧ್ರದ ನಾಗಾರ್ಜುನ ಕೊಂಡದಲ್ಲಿ ನಡೆದ ಉತ್ಖನನಗಳಿಂದ ಅಲ್ಲಿನ ಸ್ನಾನಘಟ್ಟ, ಸ್ಮಶಾನ ಪ್ರದೇಶದ ಮಂಟಪ ಮೊದಲಾದ ಸ್ಥಳಗಳ ಮೆಟ್ಟಿಲು/ಹಾಸುಗಲ್ಲುಗಳ ಮೇಲೆ ಇಂತಹ ಆಟಗಳನ್ನು ಹೋಲುವ ಕೆಲ ಆಟಗಳ ಚಿತ್ರಗಳನ್ನು ಕೆತ್ತಿರುವುದು ಕಂಡು ಬಂದಿದೆ. ಆಟಗಳಿಗೆ ಬಳಸುತ್ತಿದ್ದ 'ದಾಳ'ಗಳೂ ದೊರೆತಿವೆ (ಅದೇ, ಪು. ೭೦).

ಹಾಗೆ ನೋಡಿದರೆ, ಪಗಡೆ/ ಚದುರಂಗದಾಟದ ಮೂಲ ಹರಪ್ಪ ಕಾಲಕ್ಕೂ ಹೋಗುತ್ತದೆ. ಸಿಂಧೂ ಜನ ಅನೇಕ ಕುಳಿಗಳಿರುವ ಮರದ ಮಣೆಯನ್ನು ಆಟಕ್ಕಾಗಿ ಬಳಸುತ್ತಿದ್ದರು. ಇಂತಹ ಮಣೆಯ ಸುಟ್ಟ ಮಣ್ಣಿನ ಮಾದರಿ ಮೊಹೆಂಜೊದಾರೊದಲ್ಲಿ ಸಿಕ್ಕಿದೆ (ರಾವ್ ೧೯೯೪ : ೧೧೨) - ಈ ವಿವರ ಗಮನಿಸಿದರೆ ಈ ಆಟ ಇಂದೂ ನಮ್ಮ ಮಹಿಳೆಯರಲ್ಲಿ ಜನಪ್ರಿಯವಾಗಿರುವ 'ಹರಳುಗುಣಿ ಮಣೆ' ಅಥವಾ 'ಚನ್ನೆಮಣೆ' ಆಟದ ಒಂದು ಮಾದರಿ ಇದ್ದಿರಬಹುದು ಎನ್ನಿಸುತ್ತದೆ. ಈ ಆಟ ಜಗತ್ತಿನ ಇತರ ಭಾಗಗಳಲ್ಲಿಯೂ ವಿಶೇಷ ಆಚರಣೆಯಲ್ಲಿದೆ (ವಿವರಕ್ಕೆ ನೋಡಿ : ಕ್ಲಾಸ್ ೧೯೮೭ :೨೦೦-೨೬೯).

ಸಿಂಧೂ ಸಂಸ್ಕೃತಿಯ ಜನ ಸುಟ್ಟ ಮಣ್ಣಿನ ಉಂಡೆಗಳನ್ನು 'ಗೋಲಿ'ಯಾಗಿಯೂ, ಕ್ಯಾರೆಟ್ ಆಕಾರದವನ್ನು ಬುಗುರಿಯಾಗಿಯೂ ಬಳಸುತ್ತಿದ್ದ ಬಗೆಗೂ ವಿದ್ವಾಂಸರು ಗಮನಿಸಿದ್ದಾರೆ. ಅಂದರೆ, ಈಗಿನ ಗೋಲಿಯಾಟ, ಬುಗುರಿಯಾಟಗಳು ಸು. ೪೫೦೦ ವರ್ಷಗಳಷ್ಟು ಹಿಂದಿನಿಂದಲೂ ಮಕ್ಕಳ ಜನಪ್ರಿಯ ಆಟಗಳಾಗಿವೆ ಎಂದಾಯಿತು.

ಹಾಗೆಯೇ 'ಹುಲಿ-ಕುರಿ ಆಟ', 'Chauper' ದಂತಹ ಆಟಗಳು ಮೊಗಲರ ಕಾಲದಲ್ಲೂ ಜನಸಾಮಾನ್ಯರ ಪ್ರಿಯ ಮನರಂಜನಾ ಆಟಗಳಾಗಿದ್ದವು'- ಎನ್ನುವ ಅಧ್ಯಯನಕಾರರು 'ಪ್ರಾಚೀನ ದಾಖಲೆಗಳಲ್ಲಿ ಕಬಡ್ಡಿ ಆಟವನ್ನು ಗುರುತಿಸುವಂತಹ ದಾಖಲೆಗಳಿಲ್ಲದಿರುವುದು ವಿಷಾದನೀಯ. ಆದರೆ, ಈಗಿನಂತೆ ಆಗಲೂ ಈ ಆಟ ಹಳ್ಳಿಗಳಲ್ಲಿ ಪ್ರಚಲಿತದಲ್ಲಿದ್ದಿರಬೇಕು'- ಎಂದೂ ಅಭಿಪ್ರಾಯ ಪಟ್ಟಿದ್ದಾರೆ (ನೋಡಿ : Chopra 1963 : 55).

ಈಗಿನ 'ಕಬಡ್ಡಿ'ಗೆ ೪೦ - ೫೦ ವರ್ಷಗಳ ಹಿಂದೆ ಕೆಲ ಹಳ್ಳಿಗಳಲ್ಲಿ "ಗೈಕಲ್ಲ ಪಟ್ಟೆ ಆಟ" ಎಂದೂ ಹೆಸರಿದ್ದುದನ್ನು ಕೆಲ ಹಿರಿಯರು ನೆನಪಿಸಿಕೊಡಿದ್ದಾರೆ (ನೋಡಿ : ಗೋವಿಂದರಾಜು ೧೯೯೩ : ೨೫೪). "ಉಪ್ಪಿಪ್ಪಿನ ಪಟ್ಟೆ" ಎಂಬ ಆಟವೂ ಸ್ವಲ್ಪ ಮಟ್ಟಿಗೆ "ಕಬಡ್ಡಿ ಆಟವನ್ನೇ ಹೋಲುತ್ತದೆ. ಹೀಗಾಗಿ ಕಬಡ್ಡಿಯಂತಹ ಆಟ ಬೇರೆ ಹೆಸರಿನಲ್ಲಿಯೂ ಹಿಂದೆ ಇದ್ದಿರಬಹುದಲ್ಲವೇ ?.

ಗಾಡಿಗಳು

ಮಾನವನ ರಾಕೆಟ್‌ಗಳು ಸೌರಮಂಡಲಕ್ಕೆ ಹಾರಿಹೋಗುವಷ್ಟು ವೈಜ್ಞಾನಿಕ ಅಭಿವೃದ್ಧಿ ಒಂದೆಡೆ ಆಗಿರುವ ಸಂದರ್ಭದಲ್ಲೇ, ಎತ್ತಿನ ಗಾಡಿಗಳನ್ನು ಪೂರ್ಣ ಕೈ ಬಿಡಲಾಗದ ಪರಿಸ್ಥಿತಿಯಲ್ಲೂ ನಮ್ಮ ರೈತರಿದ್ದಾರೆ. ನಮ್ಮ ಕೃಷಿ ಜೀವನದ ಅನಿವಾರ್ಯ ಭಾಗವಾಗಿರುವ ಈ ಗಾಡಿಗಳೂ ಕಾಲಕ್ಕೆ ತಕ್ಕಂತೆ ಬದಲಾವಣೆ ಬಯಸಿರುವುದಂತೂ ನಿಜ. ಈ ನಡುವೆ ಕಬ್ಬಿಣದ ಪಟ್ಟಿಗಳಿದ್ದ ಚಕ್ರಗಳ ಗಾಡಿಗಳು ಮರೆಯಾಗಿ ಈಗ ಟೈರು ಚಕ್ರಗಳ ಗಾಡಿಗಳು ಹೆಚ್ಚಾಗಿವೆ. ಎತ್ತುಗಳಿಗೆ ಹೆಚ್ಚು 'ಹೊರೆ'ಯಾಗದಂತಿರಲು ಈ ಗಾಡಿಗಳಿಗೆ ಬೇರಿಂಗ್ ಮತ್ತು ಬ್ರೇಕುಗಳನ್ನು ಅಳವಡಿಸುವ ಪ್ರಯೋಗಗಳೂ ನಡೆಯುತ್ತಿವೆ.

ಹಾಗಿದ್ದರೆ, ಇಂತಹ ಗಾಡಿಗಳು ಕಾಲಕಾಲಕ್ಕೆ ಹೊಂದಿರಬಹುದಾದ ರೂಪ ಬದಲಾವಣೆಗಳೇನು ? ವಾಸ್ತವವಾಗಿ ಇವುಗಳ ಮೂಲ ಸ್ವರೂಪ ಹೇಗಿದ್ದಿರಬಹುದು ? ಗಾಡಿಯ ಕಲ್ಪನೆ ಎಷ್ಟು ಪ್ರಾಚೀನದ್ದಾಗಿರಬಹುದು ?

ಆಗ ಅವುಗಳನ್ನು ಎಳೆಯಲು ಕಟ್ಟುತ್ತಿದ್ದ ಪ್ರಾಣಿಗಳಾವುವು ? ಅವುಗಳನ್ನು ಗಾಡಿಗೆ ಹೇಗೆ ಬಳಸುತ್ತಿದ್ದರು ? ...... ಇಂತಹ ಹಲವು ಪ್ರಶ್ನೆಗಳು ಸಹಜವಾಗಿ ನಮ್ಮ ಎದಿರು ನಿಲ್ಲುತ್ತವೆ. ಇದಕ್ಕೆ ಆದಷ್ಟೂ ತೃಪ್ತಿಕರವಾದ ಉತ್ತರಗಳನ್ನು ಕಂಡುಕೊಳ್ಳಬೇಕಾದರೆ ನಾವು ' ಪ್ರಾಚ್ಯ ಜಾನಪದ ಅಧ್ಯಯನ'ಕ್ಕೆ ಹೋಗಬೇಕಾಗುತ್ತದೆ.

ಗಾಡಿಯ ಕಲ್ಪನೆ ಎಷ್ಟು ಪ್ರಾಚೀನದ್ದೆಂದು ತಿಳಿವ ಮೊದಲು ಗಾಡಿಗೆ ಬಹು ಮುಖ್ಯ ಆಧಾರವಾದ ಚಕ್ರ/ ಗಾಲಿಯ ಕಲ್ಪನೆ ಎಷ್ಟು ಪ್ರಾಚೀನ ಎಂಬುದನ್ನು ಮೊದಲು ಅರಿಯಬೇಕು.

ಪುರಾತತ್ವ ಶಾಸ್ತ್ರಜ್ಞರ ಪ್ರಕಾರ 'ಚಕ್ರದ ರಥಗಳು ಮೊದಲಿಗೆ ಕಂಡುಬಂದದ್ದು ಮಧ್ಯ ಏಷ್ಯಾಭಾಗದಲ್ಲಿ. ಇವು ಪಶ್ಚಿಮ ಯುರೋಪ್ ಹಾಗೂ ಪೂರ್ವ ಚೀನಾದಲ್ಲಿ ಕ್ರಿ. ಪೂ. ೧೫೦೦ ರಿಂದ ೧೩೦೦ರ ಅವಧಿಯಲ್ಲಿ ಕ್ರಾಂತಿಕಾರಕ ಅವಸ್ಥಾಂತರಗಳನ್ನು ಹೊಂದಿದವು. ಕ್ರಿ. ಪೂ. ೨೦೦೦ನೇ ಇಸವಿ ಹೊತ್ತಿಗೆ ಚಕ್ರದ ರೂಪದಲ್ಲಿ ಹಲವು ಬದಲಾವಣೆಗಳಾಗಿದ್ದವು. ಚಕ್ರದ ಒಳಗೆ 'ಆಧಾರ ಕಡ್ಡಿ'ಗಳು (ಆರೆಕಾಲು) ಆ ಹೊತ್ತಿಗೆ ಸೇರಿದ್ದವು.

ಕ್ರಿ. ಪೂ. ೩೨೫೦ರಷ್ಟು ಹಳೆಯ ಮಣ್ಣಿನ ಗಾಲಿ ಮೆಸಪಟೋಮಿಯಾದಲ್ಲಿ ಮೊದಲು ಕಣ್ಣಿಗೆ ಬಿದ್ದಿತೆಂದು ಹೇಳಲಾಗಿದೆ. ಆ 'ಚಕ್ರ'ದ ಪರಿಧಿಯ ಸುತ್ತ ಪುಟ್ಟ ಪುಟ್ಟ ರಂಧ್ರಗಳಿರುವುದನ್ನು ಗುರುತಿಸಲಾಗಿದೆ. ಮೊದಲ ಚಕ್ರವುಳ್ಳ ವಾಹನ ಕಣ್ಣಿಗೆ ಬಿದ್ದದ್ದು ನಾಲ್ಕು ಚಕ್ರದ ಗಾಡಿಯ ರೂಪದಲ್ಲೇ - ಎಂಬ ವಾದವೂ ಇದೆ -ಎನ್ನಲಾಗಿದೆ. ಇದು ದೊರೆತಿರುವುದೂ ಮೆಸಪಟೋಮಿಯಾ ಭಾಗದಲ್ಲೇ ಎಂದೂ ಹೇಳಲಾಗಿದೆ(ವಿವರಕ್ಕೆ : ಕೆ.ಪಿ.ಎಂ. ೨೭-೬-೯೯).

ಜಗತ್ತಿನ ಅತಿ ಪುರಾತನ ನಾಗರಿಕತೆಗಳಲ್ಲಿ ಒಂದಾದ ಮಹೆಂಜೊದಾರೋದ ಉತ್ಖನನದಲ್ಲಿ ಒಂದು ಮಣ್ಣಿನ ಗಾಡಿಯ ಆಟಿಕೆ ಸಿಕ್ಕಿದೆ.

ಇದು " ಇಂದಿನ ಸಿಂಧ್ ಪ್ರದೇಶದ ಎತ್ತಿನ ಗಾಡಿಗಳನ್ನು ಹೋಲುವಂತಿರುವುದು ವಿಶೇಷ ಗಮನಾರ್ಹವಾಗಿದೆ. "ಈ "ಆಟದ ಗಾಡಿ" ಕೇವಲ ಮಕ್ಕಳ ಆಟಿಕೆಯಾಗಿರದೆ ಅಂದು ಬಳಕೆಯಲ್ಲಿದ್ದ ದ್ವಿಚಕ್ರವಾಹನದ "ಮಿನಿ ಆಕೃತಿ" ಎಂಬುದೂ ಅಗತ್ಯ ಗಮನಿಸಬೇಕಾಗಿದೆ. ಈ ಬಗ್ಗೆ ಹೆಚ್ಚಿನ ಅಧ್ಯಯನ ಮಾಡಿರುವ "ಸರ್ ಜಾನ್ ಮಾರ್ಷಲ್ ಅವರು ಈ ಮಣ್ಣಿನ ಗಾಡಿ ಇದುವರೆಗೆ ದೊರೆತಿರುವ ಅತ್ಯಂತ ಪ್ರಾಚೀನ (ಕ್ರಿ. ಪೂ. ೩೨೦೦) " ಗಾಲಿವಾಹನದ ಪ್ರತಿಕೃತಿ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅವರು ಮುಂದುವರೆದು " ದಪ್ಪ ಭುಜದ ಹೋರಿಗಳ ಚಿತ್ರಗಳುಳ್ಳ ಅವಶೇಷಗಳು ಅಪಾರ ಪ್ರಮಾಣದಲ್ಲಿ ದೊರೆತಿರುವುದನ್ನು ಪ್ರಸ್ತಾಪಿಸುತ್ತಾ ಆಗ ಈ ಬಗೆಯ ಹೋರಿಗಳು ಹೆಚ್ಚು ಜನಪ್ರಿಯವಾಗಿಯೂ ಅಪಾರ ಸಂಖ್ಯೆಯಲ್ಲೂ ಇದ್ದಿರಬೇಕೆಂದಿದ್ದಾರೆ."

'ಹರಪ್ಪ ನಿವೇಶನದಲ್ಲಿ... ತಾಮ್ರದಿಂದ ಮಾಡಿರುವ ಆಟದ ಗಾಡಿಯೂ ಸಿಕ್ಕಿದ್ದು, ಅದು 'ಇಂದಿನ ಎತ್ತಿನ ಗಾಡಿಯನ್ನು ಬಹುಮಟ್ಟಿಗೆ ಹೋಲುತ್ತದೆ. ಎರಡು ಗಾಲಿಗಳ ಈ ಚಿಕ್ಕ ಆಟದ ಗಾಡಿಗೆ ಕಟ್ಟಿರಬಹುದಾದ 'ಪ್ರಾಣಿಗಳು' ಕಳೆದುಹೋಗಿದ್ದು, ಅವು ಕುದುರೆಗಳೋ, ಎತ್ತುಗಳೋ ಎಂಬ ಸಂದೇಹ ಬಂದರೂ ಅದು ಇಂದಿನ ಎತ್ತಿನ ಗಾಡಿಯನ್ನು ಹೋಲುತ್ತದೆ" ಎನ್ನಲಾಗಿದೆ.

ಮಹೆಂಜೊದಾರೋದ ಮಣ್ಣಿನ ಆಟದ ಗಾಡಿಗಳ ಮಾದರಿಯಲ್ಲಿನ ಗಾಲಿಗಳು ಅಚ್ಚಿನ ಸುತ್ತ ಸಾಕಷ್ಟು ದಪ್ಪವಿದ್ದು ಅಂಚಿನ ಬಳಿ ತೆಳ್ಳಗಿರುವುದು ಕಂಡುಬರುತ್ತದೆ. ಆರೆಗಳಿಲ್ಲದ ಈ ಬಗೆಯ ಅಖಂಡವಾದ ಗಾಲಿಗಳ ಪುಟ್ಟ ಗಾಡಿಗಳು "ಒಡ್ಡರ ಬಂಡಿ" ಎಂಬ ಹೆಸರಲ್ಲಿ ಈಗಲೂ ನಮ್ಮಲ್ಲಿ ಕೆಲವಡೆ ಬಳಕೆಯಲ್ಲಿರುವುದನ್ನು ಇಲ್ಲಿ ಅಗತ್ಯ ಸ್ಮರಿಸಬೇಕು (ಉಳುಮೆಯಾದ ತೆಂಗಿನ ತೋಟಗಳಲ್ಲಿ ದೊಡ್ಡ ಗಾಡಿಗಳು ಓಡಾಡುವುದು ಪ್ರಯಾಸವೆನಿಸುವುದರಿಂದ ಇಂತಹ ಅತಿ ಚಿಕ್ಕ ಬಂಡಿಗಳಲ್ಲಿ ಕೇವಲ ಎರಡು - ಮೂರು ಮಂಕರಿಯಷ್ಟು ಗೊಬ್ಬರ ಅಥವಾ ಗೋಡು ಮಣ್ಣನ್ನು ತುಂಬಿಕೊಂಡು ಹೋಗಿ ತೆಂಗಿನ ಮರಗಳ

ಬುಡಕ್ಕೆ ಸುರಿಯುತ್ತಿದ್ದ ದೃಶ್ಯವನ್ನು ನಾನು ೧೯೬೨ರ ಸುಮಾರಿನಲ್ಲಿ ಅರಸೀಕೆರೆ ಹತ್ತಿರದ ಬೆಳಗುಂಬದಲ್ಲಿ ಕಂಡಿದ್ದೇನೆ).

ತೀರಾ ಪ್ರಾಚೀನ ಕಾಲದ ಗಾಡಿಗಳ ಗಾಲಿಗಳು 'ಆರೆಕಾಲು'ಗಳಿಲ್ಲದೆ ಅಖಂಡವಾಗಿರುತ್ತಿದ್ದವು - ಎಂಬುದನ್ನು ಕೇವಲ ಒಡ್ಡರ ಬಂಡಿಗಳಷ್ಟೇ ಅಲ್ಲದೆ ಈಗಲೂ ನಮ್ಮಲ್ಲಿ ಉಳಿದಿರುವ ಕೆಲವು ದೇವಸ್ಥಾನಗಳ ರಥಗಳ ಚಕ್ರಗಳೂ ಸಾಬೀತುಪಡಿಸುತ್ತವೆ. ಹಾಗೆಯೇ ಚಾಮರಾಜನಗರ ಜಿಲ್ಲೆ ಕಸ್ತೂರು ಮೊದಲಾದ ಗ್ರಾಮಗಳಲ್ಲಿ ವಾರ್ಷಿಕವಾಗಿ ನಡೆಯವ "ಬಂಡಿಹಬ್ಬ" ಕ್ಕಾಗಿಯೇ ಮಾಡಿಸಿರುವ ಮರದ ಗಾಡಿಗಳಲ್ಲಿಯೂ ಚಕ್ರಗಳು ಆರೆಕಾಲು ರಹಿತವಾಗಿರುವುದಲ್ಲದೆ ಸ್ವಲ್ಪಮಟ್ಟಿಗೆ ಮೊಹೆಂಜೊದಾರೋದ ಆಟಿಕೆ ಬಂಡಿಯ ಚಕ್ರದ ರೂಪವನ್ನೇ ಹೋಲುತ್ತದೆ ಎಂಬುದೂ ಗಮನಾರ್ಹ. ಅವುಗಳ ಆಧಾರದಿಂದಲೂ ಗಾಲಿಗಳು ಅಖಂಡವಾಗಿದ್ದರೂ "ಅಚ್ಚಿನಿಂದ ಅಂಚಿನವರೆಗೂ ಒಂದೇ ದಪ್ಪ ಇದ್ದಿರಬೇಕೆಂದು" ನಂಬಬಹುದಾಗಿದೆ.

ಆದರೆ, ಗಾಲಿಗಳಿಗೆ 'ಆರೆ'ಗಳನ್ನು ಸೇರಿಸುವ ಬೆಳವಣಿಗೆ ಹರಪ್ಪ-ಮಹೆಂಜೋದಾರೋ ನಾಗರಿಕತೆಯ ಆನಂತರದ ಋಗ್ವೇದ ಕಾಲಘಟ್ಟದ ಹೊತ್ತಿಗೇ ಆಗಿತ್ತು ಎಂಬುದಕ್ಕೆ ನಿದರ್ಶನಗಳಿವೆ. ಅಲ್ಲದೆ, ಆ ಕಾಲದ ಜೋಡೆತ್ತಿನ ಗಾಡಿಗಳ ಒಟ್ಟು ಸ್ವರೂಪವನ್ನು ದಾಖಲಿಸುವ ಋಕ್‌ಗಳೂ ಋಗ್ವೇದದಲ್ಲಿ ಬರುತ್ತವೆ. ಪ್ರಯಾಣಕ್ಕೆ ಮೊದಲು ಶುಭಯಾತ್ರೆಯನ್ನು ಆಶಿಸಿ ಮಾಡಿದ ಈ ಪ್ರಾರ್ಥನೆಯಲ್ಲಿನ ವಿವರಗಳನ್ನು ಗಮನಿಸಿ :

"ಗಾಡಿಯ ಎತ್ತುಗಳು ಸ್ಥಿರವಾಗಿರಲಿ (ಅಂದರೆ, ಈಗಿನ ಕೆಲ ಎತ್ತುಗಳು ಮಾಡುವಂತೆ ಮಾರ್ಗಮಧ್ಯೆ ಕಣ್ಣಿಹಾಕಿಕೊಂಡು, ಹೆಗಲ ಮೇಲಿಂದ ನೊಗ ಎಸೆದು, ಗಾಡಿ ಮುಗ್ಗರಿಸುವಂತೆ ಆಗದಿರಲಿ), ಗಾಡಿಯ ಅಚ್ಚು ದೃಢವಾಗಿರಲಿ, ಗಾಡಿಯ ಮಧ್ಯಭಾಗದ ಮರದ ದಿಂಡು ತೊಲೆ ನಷ್ಟವಾಗದಿರಲಿ, ನೊಗವು ಸೀಳದಿರಲಿ, ಕೀಲುಗಳು ಮುರಿದುಬೀಳದಂತೆ ಇಂದ್ರನು ಹಿಡಿದಿರಲಿ. ಯಾರಿಗೂ ಹಿಂಸೆ ಉಂಟು ಮಾಡದೆ ಚಕ್ರಗಳುಳ್ಳ ಎಲ್ಲೈ ರಥವೆ ಹೊರಡುವುದಕ್ಕೆ ಸಿದ್ಧವಾಗು.

"ಖದಿರ ಮರದಿಂದ ಮಾಡಿದ ಅಣಿಗಳಿಂದ ಚಕ್ರಗಳು ಕಳಚಿ ಹೋಗದಿರಲಿ, ಗಾಡಿಯ ವೇಗಕ್ಕೆ ಅದರ ಶಿಂಶುಪಾಮರದ ಹಾಸು ಹಲಗೆಗಳು ಮುರಿಯದೆ ಇರಲಿ, ನಮ್ಮಿಂದ ದೃಢವಾಗಿ ಸ್ಥಾಪಿತವಾಗಿರುವ ಅಚ್ಚಿನ ಮರವೂ ದೃಢವಾಗಿರಲಿ....." (ಶ್ರೀಧರಮೂರ್ತಿ, ೨೯-೯-೧೯೭೪).

ವೇದಗಳ ಕಾಲದ ಈ ಬಂಡಿಗೆ ಎತ್ತುಗಳಿವೆ ; ಅಚ್ಚು, ಮೂಕಿನ ಮರ, ನೊಗ, ಕೀಲು/ ಕಡಾಣಿ, ಹಾಸು ಹಲಗೆ... ಎಲ್ಲವೂ ಇವೆ ! ಈವತ್ತಿನ ಗಾಡಿಗಳಿಗೂ ಇವು ಇವೆ. ಬಹುಶಃ ಶಿಂಶುಪಾಮರಕ್ಕೆ ಬದಲು ಈಗ ಜಾಲಿ, ಹಲಸು... ಇಂತಹ ಮರದ ಹಲಗೆಗಳು ಬಳಕೆಯಾಗಬಹುದು. ಅಷ್ಟೇ ಅಲ್ಲವೆ.

ಟಗರಿನ ಗಾಡಿ ?

ಕೆಲವು ಪ್ರಾಚ್ಯ ದಾಖಲೆಗಳನ್ನು ನೋಡಿದರೆ ಗಾಡಿಗಳಿಗೆ ಎತ್ತುಗಳಲ್ಲದೆ ಟಗರುಗಳನ್ನೂ ಕಟ್ಟುತ್ತಿದ್ದರೇ ? ಎಂಬ ಸಂಶಯ ಬರುತ್ತದೆ. ಗಾಂಧಾರದ (೭-೪ ನೇ ಶತಕ) ಒಂದು ಉಬ್ಬು ಶಿಲ್ಪದಲ್ಲಿ ಸಿದ್ಧಾರ್ಥನು ಶಾಲೆಗೆ ಹೋಗುತ್ತಿರುವ ಸನ್ನಿವೇಶ ಚಿತ್ರಿತವಾಗಿದೆ. ಆತ ಕುಳಿತಿರುವ ರಥಕ್ಕೆ ಎರಡು 'ಕೊಂಬುತಿರುಗಿದ'(ದಷ್ಟ ಪುಷ್ಟವಾದ) ಟಗರುಗಳನ್ನು ಕಟ್ಟಿ ಹೆಗಲ ಮೇಲೆ ನೊಗ ಇಟ್ಟಿದೆ. ನೊಗದ ಅಂಚುಗಳಲ್ಲಿ 'ಒಳ್ಳಂಗುಟ್ಟ' ಗಳನ್ನೂ ಸಿಗಿಸಿದೆ. ಮೂಕಿನ ಮರವೂ ಸ್ಪಷ್ಟವಾಗಿದೆ. ಟಗರುಗಳನ್ನು ಹಿಡಿಯಲು ಅವುಗಳ ಮುಖಕ್ಕೆ 'ಮಕೋಡ' ಹಗ್ಗಗಳನ್ನು ಹಾಕಿದೆ. ಈ 'ರಥ' ವಡ್ಡರ ಬಂಡಿಯನ್ನು ಹೋಲುತ್ತಿದ್ದು ಅದರ ಚಕ್ರಕ್ಕೆ ೧೬ 'ಆರೆಕಾಲು'ಗಳಿವೆ. ಮಸಿ ಕುಡಿಕೆ, ಬರಹದ ಹಲಗೆ ಹಿಡಿದವರು ಗಾಡಿಯ ಹಿಂಬದಿ ನಡೆದಿದ್ದಾರೆ (ನೋಡಿ : Rice 1965:157, ಚಿತ್ರ 142)..

ಈಗಿನ ರಥಗಳ ಮೂಲ ರೂಪ ' ಎತ್ತಿನ ಗಾಡಿಯಂತಹ 'ಕುರ್ಜು'ಗಳೇ ಇದ್ದಿರಬಹುದೇ ?- ಎಂಬುದಕ್ಕೂ ಈಗಲೂ ಕೆಲ ಹಳ್ಳಿಗಳ ಜಾತ್ರೆಗಳಲ್ಲಿ ಎತ್ತಿನ ಗಾಡಿಗಳನ್ನೇ ರಥದಂತೆ ಅಲಂಕರಿಸಿ, ದೇವರು ಇಟ್ಟು ಮೆರವಣಿಗೆ ಮಾಡುವುದನ್ನು

ಗಮನಿಸಬಹುದು. ಇವುಗಳನ್ನು "ಕುರ್ಜು"ಗಳೆಂದು ಕರೆಯುತ್ತಾರೆ. ಅಕ್ಕಪಕ್ಕದ ಊರ ಒಕ್ಕಲುಗಳು ಹೀಗೆ "ಕುರ್ಜು" ಕಟ್ಟಿಕೊಂಡು ಜಾತ್ರೆಗೆ ಬರುತ್ತಾರೆ. (ನೆಲಮಂಗಲ ಸುತ್ತಿನ ಕೆಲ ಹಳ್ಳಿಗಳ ಜಾತ್ರೆಗಳಲ್ಲಿ ಈ ಅಭ್ಯಾಸ ಇದೆ).

ಜನಪದ ವಾದ್ಯಗಳು

ಹರೆ, ತಮಟೆ, ಕೊಂಬು, ಭಾಂಕಿ ಮೊದಲಾದ ನಮ್ಮ ಜನಪದದ ವೈವಿಧ್ಯಮಯವಾದ ವಾದ್ಯಗಳು ಸಾವಿರಾರು ವರ್ಷಗಳ ಹಿಂದೆ ಯಾವ ಆಕಾರದಲ್ಲಿದ್ದವು ? ಅವುಗಳನ್ನು ನುಡಿಸುತ್ತಿದ್ದ ಕ್ರಮ, ಸಂದರ್ಭ-ಸನ್ನಿವೇಶವೇನು ?... ಇಂತಹ ಹಲವಾರು ಕುತೂಹಲಕರ, 'ಕ್ಲಿಷ್ಟ' ಪ್ರಶ್ನೆಗಳಿಗೂ 'ಪ್ರಾಚ್ಯ ಜಾನಪದ ಅಧ್ಯಯನ'ದಲ್ಲಿ ತೃಪ್ತಿಕರ ಉತ್ತರಗಳನ್ನು ಕಂಡುಕೊಳ್ಳಬಹುದಾಗಿದೆ (ಹೆಚ್ಚಿನ ವಿವರಕ್ಕೆ ಇದೇ ಪುಸ್ತಕದಲ್ಲಿನ "ಪ್ರಾಚೀನ ವಾದ್ಯಗಳು" ಭಾಗ ನೋಡಿ).

ಪ್ರಾಚ್ಯ ಜಾನಪದ ಅಧ್ಯಯನ ಈಗ ಇರುವ ವಸ್ತು ವಿಷಯಗಳ ಬಗ್ಗೆ ತೌಲನಿಕ ಅಧ್ಯಯನಕ್ಕಷ್ಟೇ ನೆರವಾಗದೆ ಒಂದು ಕಾಲಕ್ಕೆ ಅಸ್ತಿತ್ವದಲ್ಲಿದ್ದು ಈಗ ಕಣ್ಮರೆಯಾಗಿರುವ ವಸ್ತು ವಿಚಾರಗಳ ಬಗೆಗೂ ಬೆಳಕು ಚೆಲ್ಲುತ್ತದೆ ಎಂಬುದು ವಿಶೇಷ ಉಲ್ಲೇಖನೀಯ. ನಿದರ್ಶನಕ್ಕೆ -

ನಮ್ಮಲ್ಲಿ ಈಗಿನ ತಿಮ್ಮಪ್ಪನ ಭಕ್ತರಾದ 'ದಾಸಯ್ಯ'ಗಳು ಬಳಸುವ 'ಜಾಗಟೆ'ವಾದ್ಯ ಚಿರಪರಿಚಿತವಾಗಿದೆ. ದೇವಸ್ಥಾನ, ಕರಾವಳಿಯ ಯಕ್ಷಗಾನದಲ್ಲೂ ಇದರ ಬಳಕೆ ಇದೆ. ಇದೊಂದು ಚಿಕ್ಕ, ಕಂಚಿನ, ತಟ್ಟೆಯಂತಹ ಸಾಧನ. ಆದರೆ, ಇದು ಸು. ೨೦೦-೩೦೦ ವರ್ಷಗಳ ಹಿಂದೆಯೂ ಹೀಗೇ ಇತ್ತೇ ? ಅಥವಾ ಇದರ ಪ್ರಭೇದವಾಗಿ-ಇಂದು ರೂಢಿಯಲ್ಲಿರದಂತಹ-ಬೇರೆಯ ರೂಪದ್ದೂ ಇದ್ದಿತೇ ? - ಇದಕ್ಕೆ ಉತ್ತರ ಸುಲಭವಲ್ಲ.

ಆದರೆ, ಈಚೆಗೆ ಗಮನಿಸಿದ ಕೆಲ ಮಾದರಿಗಳು ಈ ಬಗೆಗೆ ಹೆಚ್ಚಿನ ಶೋಧಕ್ಕೆ ಒತ್ತಾಯಿಸುತ್ತಿವೆ. ಶೃಂಗೇರಿಯ ವಿದ್ಯಾಶಂಕರ ದೇವಾಲಯದ

ಗೋಡೆಯ ಒಂದು ಪಕ್ಕದ ಅಡಿಪಟ್ಟಿಕೆ ಮೇಲೆ ಕೆತ್ತಿರುವ ಎರಡು ಉಬ್ಬುಶಿಲ್ಪಗಳಲ್ಲಿನ ವಿವರಗಳು ಹೀಗಿವೆ (ದಿನಾಂಕ ೮-೪-೧೯೯೮ ರಂದು ವೀಕ್ಷಿಸಿದ್ದು) :

೧) ಅದೊಂದು ದೊಡ್ಡ ಜಾಗಟೆ. ಇಬ್ಬರು ಅಡ್ಡೆ ಹಾಕಿ ಭುಜಗಳ ಮೇಲೆ ಹೊರುವಷ್ಟು ಅದು ದೊಡ್ಡದೂ, ಭಾರವಾದುದೂ ಆಗಿದೆ ! ಅದನ್ನು ಕೋಲಿನಿಂದ ಬಾರಿಸುವುದಕ್ಕಾಗಿಯೇ ಇನ್ನೊಬ್ಬನಿದ್ದಾನೆ !!

ನಮ್ಮಲ್ಲಿ ಅತಿ ಚಿಕ್ಕ 'ವಾದ್ಯ' ಇರುವಂತೆ ಅಸಾಮಾನ್ಯವೆನ್ನಬಹುದಾದ ದೊಡ್ಡ ಆಕಾರದ ವಾದ್ಯಗಳಿರುವುದೂ ಅಪರೂಪವೇನಲ್ಲ. ಜಗ್ಗಲಿಗೆ, ರಂಡೋಲು, ಡೊಳ್ಳಿನಂತಹ ವಾದ್ಯಗಳು ಈಗಲೂ ಬಳಕೆಯಲ್ಲಿವೆ. ಬಹುಶಃ ಆ ಶಿಲ್ಪದಲ್ಲಿ ಕೆತ್ತಿರುವ ಬೃಹತ್ ಜಾಗಟೆ ಒಂದು ಕಾಲಕ್ಕೆ ಇದ್ದು, ತದನಂತರ ರೂಢಿ ತಪ್ಪಿಹೋಗಿರಬಹುದೇ ?

೨) ಅದರ ಪಕ್ಕ ಇನ್ನೊಂದು ಉಬ್ಬು ಶಿಲ್ಪದಲ್ಲಿ ಡೋಲಿನಂತಹ ವಾದ್ಯವೊಂದನ್ನು ಇಬ್ಬರು ಅಡ್ಡೆಗೆ ನೇತುಹಾಕಿ, ಭುಜದ ಮೇಲೆ ಹೊತ್ತು ನಿಂತಿದ್ದಾರೆ. ಕೆಳಗೆ ಒಂದು ಪಕ್ಕ ಮಂಡಿಯೂರಿ ಕುಳಿತ ಇನ್ನೊಬ್ಬಾತ ಕೋಲಿನಿಂದ ಅದನ್ನು ಬಾರಿಸುತ್ತಿದ್ದಾನೆ !

ಇಷ್ಟೊಂದು ಭಾರೀ ಗಾತ್ರದ ಡೋಲು ಕೇವಲ ಉತ್ಪ್ರೇಕ್ಷಿತ ಚಿತ್ರಣವಿದ್ದಿರಬಹುದೇ ? ಅನುಮಾನ ಬೇಕಿಲ್ಲ (ಈಗಿನ ಕೆಲ ಕಲಾವಿದರು ಹೆಗಲಿಗೆ ನೇತುಹಾಕಿದ ಡೊಳ್ಳಿನ ಮೇಲೆ ಇನ್ನೊಬ್ಬ ಕಲಾವಿದನನ್ನು ನಿಲ್ಲಿಸಿ ಕಸರತ್ತು ಮಾಡುವ ಸಾಹಸದ ಛಾಯಾಚಿತ್ರವನ್ನು ಇನ್ನು ೫೦-೧೦೦ ವರ್ಷಗಳ ನಂತರದವರು ನೋಡಿದಾಗಲೂ ಹೀಗೇ ಏನೋ ಕಲ್ಪನೆ - ಎಂದು ಅನುಮಾನ ಪಡಬಹುದಲ್ಲವೇ ?) ಡೊಳ್ಳಿಗಿಂತ ದೊಡ್ಡದಾದ ಈ ವಾದ್ಯ ಒಂದು ಕಾಲಕ್ಕೆ ಯುದ್ಧ, ಬೇಟೆ ಮೊದಲಾದವುಗಳ ಮೆರವಣಿಗೆಯಲ್ಲಿ ಬಳಕೆಯಲ್ಲಿದ್ದಿರಬಹುದು. ಈಗ ಅಪರೂಪವಾಗುತ್ತಿರುವ 'ರಂಡೋಲಿ'ನಂತೆ

ಅದೂ ಕ್ರಮೇಣ ಬಳಕೆ ತಪ್ಪಿರಬಹುದು. ಈ ಊಹೆಯನ್ನು ಸಮರ್ಥಿಸುವ ಒಂದು ಜೀವಂತ ಸಾಕ್ಷಿ ಈಚೆಗೆ ದೂರದರ್ಶನದಲ್ಲಿ ಕಂಡುಬಂದದ್ದು ಉಲ್ಲೇಖನೀಯ :

೨೦೦೧, ಏಪ್ರಿಲ್ ಮೊದಲ ವಾರದ ಒಂದು ದಿನ ಪ್ರಸಾರವಾದ ಹಿಂದಿ ಧಾರಾವಾಹಿಯೊಂದರಲ್ಲಿ (ಡಾ. ರಾಹಿ ಮಾಸೂಂ ರಾಜಾ ಅವರ 'ದಸ್ತೂರ್' ಹಿಂದು - ಮುಸ್ಲಿಮರ ಕತೆ) - ಮೊಹರಂ ಮೆರವಣಿಗೆ ಪ್ರಸಂಗ - ಅದರಲ್ಲಿ ಇಬ್ಬರು ನಮ್ಮ ಡೊಳ್ಳಿನಂತಹ ದೊಡ್ಡ ವಾದ್ಯವನ್ನು ಅಡ್ಡಗೆ ನೇತು ಹಾಕಿ, ಹೆಗಲಲ್ಲಿ ಹೊತ್ತುಕೊಂಡಿದ್ದರು. ಅವರಲ್ಲೇ ಒಬ್ಬಾತ ಸಣ್ಣಕಡ್ಡಿಯಿಂದ ಆ ವಾದ್ಯದ ಒಂದು ಮುಖ ಬಡಿದು ನುಡಿಸುತ್ತಿದ್ದ. ಬಹುಶಃ ಉತ್ತರ ಭಾರತದ ಕೆಲ ಪ್ರಾಂತ್ಯಗಳಲ್ಲಿ ಇಂತಹ ವಾದ್ಯ ಈಗಲೂ ಬಳಕೆಯಲ್ಲಿರಬಹುದು. ನಮ್ಮ ಕುಗ್ರಾಮಗಳಲ್ಲಿಯೂ ನೆರೆ ರಾಜ್ಯಗಳಲ್ಲಿಯೂ ಇದ್ದಿರಬಹುದಾದ ಇಂತಹ ವಾದ್ಯಗಳೊಂದಿಗೆ ತೌಲನಿಕ ಅಧ್ಯಯನ ನಡೆಸಿ, ಮರೆಯಾದ ವಾದ್ಯಗಳ ಬಗೆಗೆ ಬೆಳಕು ಚೆಲ್ಲಬೇಕಾಗಿದೆ.

ಕಾಯಿಲೆಗಳು

'ಮನುಷ್ಯನಿಗಲ್ಲದೆ ಮರಕ್ಕೆ ಬರುತ್ತದೆಯೇ, ಕಾಯಿಲೆ ?' ಎಂಬಂತೆ ಅನಾದಿ ಕಾಲದಿಂದಲೂ ಕಾಯಿಲೆಗಳು ಮನುಷ್ಯರನ್ನು -ಎಲ್ಲಾ ಜೀವಿಗಳನ್ನು ಕಾಡುತ್ತಾ ಬಂದಿವೆ. ಈಚೆಗೆ ಕೆಲ ಹೊಸ ಕಾಯಿಲೆಗಳೂ ಹುಟ್ಟಿಕೊಂಡಿವೆ. ಒಂದೆರಡು ಅವುಗಳಿಗೆ ತಕ್ಕ ವಾತಾವರಣವಿರದೆ, ನಾಮಾವಶೇಷವಾಗಿವೆ. ಕೆಲವು ಮಾತ್ರ ಆದಿಮ ಕಾಲದಿಂದಲೂ ಮನುಷ್ಯನ ಬೆನ್ನುಹತ್ತಿದ ಬೇತಾಳಗಳಾಗಿವೆ... ಎಂಬುದು ಸಾಮಾನ್ಯ ಅಭಿಪ್ರಾಯವಾದೀತು.

ಹಾಗಿದ್ದರೆ, ಆದಿ ಕಾಲದ ಮನುಷ್ಯನಿಗೆ ಬರುತ್ತಿದ್ದ ಕಾಯಿಲೆಗಳು ಯಾವಾಗಿರಬಹುದು ? ಅವು ಯಾವಾದರೂ ಈಗಲೂ ಉಳಿದಿವೆಯೇ ? ಪ್ರಾಚೀನ ಮಾನವ ಎಂಥಾ ಕಾಯಿಲೆಯಿಂದ ಬೇಗ ಸಾಯುತ್ತಿದ್ದಿರಬಹುದು ?

ಆಗಿನ ಅವನ ಸರಾಸರಿ ಆಯುರ್ಮಾನ ಏನು ? .... ಇತ್ಯಾದಿ ಕುತೂಹಲದ ಪ್ರಶ್ನೆಗಳಿಗೂ ಪಳೆಯುಳಿಕೆಗಳ ವೈದ್ಯಕೀಯ ಅಧ್ಯಯನದ ಮೂಲಕ 'ಪ್ರಾಚ್ಯ ಜಾನಪದ ಅಧ್ಯಯನ'ದಲ್ಲಿ ಉತ್ತರ ಕಂಡುಕೊಳ್ಳಬಹುದಾಗಿದೆ. ನಿದರ್ಶನಕ್ಕೆ -

ಆಲ್ಪ್ಸ್ ಪರ್ವತದ ಹಿಮದಡಿ ಪುರಾತತ್ವ ಇಲಾಖೆಯವರು ಪತ್ತೆ ಹಚ್ಚಿದ ಒಂದು ಮನುಷ್ಯ 'ಶವ'ದ ಬಗ್ಗೆ ಆಧುನಿಕ ತಂತ್ರ-ಸಲಕರಣೆಗಳ ಮೂಲಕ (ಮರಣೋತ್ತರ !) ಪರೀಕ್ಷೆ, ವಿಶ್ಲೇಷಣೆ ಮಾಡಿದ ವೈದ್ಯರು ನೀಡಿದ ಈ ಫಲಿತಾಂಶ ಗಮನಿಸಿ :

".... ಈ ಶರೀರವನ್ನು ಹೊಂದಿದ್ದ ಮನುಷ್ಯ ಐದು ಸಾವಿರ ವರ್ಷಗಳ ಹಿಂದೆ ಹಿಮಯುಗದಲ್ಲಿ ಜೀವಿಸಿದ್ದ. ಸತ್ತಾಗ ಅವನಿಗೆ ಕೊನೆಯ ಪಕ್ಷ ನಲವತ್ತು ವರ್ಷ ವಯಸ್ಸಾಗಿತ್ತು... ಹಿಮಯುಗದಲ್ಲಿ ನವಲತ್ತು ವರ್ಷ ಆಯಿತು ಎಂದರೆ ಸಾಯುವ ವಯಸ್ಸು ಬಂತು ಎಂದೇನೇ. ಆದರೂ ಅವನು ದೃಢವಾಗೇ ಇದ್ದ. ಆದರೆ, ಅವನು ಸಂಧಿವಾತ ರೋಗದಿಂದ ಬಳಲುತ್ತಿದ್ದ. ಅದೂ ಡೀ ಜನರೇಟಿವ್ ಆರ್ಥರೈಟಿಸ್ !" (ಜಗದೀಶ್, ೯-೮-೧೯೯೮).

ಇದು ಈಗಲೂ ಪೂರ್ಣ ವಾಸಿಯಾಗದ 'ಭಯಂಕರ' ಕಾಯಿಲೆ. ೪೦ ಆಗುತ್ತಿದ್ದಂತೇ ಬಡವ, ಬಲ್ಲಿದ ಎಲ್ಲರನ್ನೂ ಅಮರಿಕೊಳ್ಳುತ್ತದೆ ; ಐದು ಸಾವಿರ ವರ್ಷಗಳಿಂದಲೂ ಜಗತ್ತಿನ ಜನಪದರನ್ನು ಕಾಡುತ್ತಾ ಬಂದ ಕಾಯಿಲೆ ಈ ಸಂಧಿವಾತ !

' ಜಗತ್ತು'- ಎಂದ ಮೇಲೆ ನಮ್ಮ ದೇಶವೂ ಸೇರುತ್ತದೆಯೆ ? ಎಂಬ ಅನುಮಾನ ಬೇಕಿಲ್ಲ. ಆಲ್ಪ್ಸ್ ಪರ್ವತದ ಪ್ರಾಂತ್ಯದಲ್ಲಿದ್ದದ್ದು ಹಿಂದೂಸ್ಥಾನದಲ್ಲೂ ಇತ್ತು ಎಂಬುದನ್ನು ಒಂದು ಸ್ವದೇಶಿ ಪಳೆಯುಳಿಕೆಯೇ ಜಗಜ್ಜಾಹೀರು ಮಾಡಿದೆ :

' ಉದಯಪುರ (ರಾಜಸ್ಥಾನ) ಹತ್ತಿರದ ಬಲಾತಲ ಎಂಬಲ್ಲಿ (೧೯೫೦ ರ ಸುಮಾರಿನಲ್ಲಿ) ಉತ್ಖನನ ನಡೆಸಿದ ಅಧ್ಯಯನಕಾರರು ಅಲ್ಲಿ ಸು. ೪೫೦೦ ವರ್ಷಗಳಷ್ಟು ಹಿಂದಿನ ಹರಪ್ಪಾ ಸಂಸ್ಕೃತಿಯಷ್ಟು ಪ್ರಾಚೀನದ್ದಾದ 'ಅಹರ್' ಎಂಬ ನಾಗರಿಕತೆ ಇದ್ದುದನ್ನು ಪತ್ತೆಹಚ್ಚಿದ್ದಾರೆ. ಹಾಗೆಯೇ ಆ ಕಾಲದ ಕೆಲ ಅಸ್ಥಿಪಂಜರಗಳನ್ನೂ ಪತ್ತೆಹಚ್ಚಿದ್ದಾರೆ. ಅವುಗಳಲ್ಲಿ ಒಂದರ ಬಗ್ಗೆ ಅಭ್ಯಾಸ ಮಾಡಿದ ಅಮೇರಿಕೆಯ ಓರೆಗಾನ್ ವಿವಿಯ ಮಾನವ ಶರೀರ ಶಾಸ್ತ್ರಜ್ಞೆ ಗ್ವೇನ್ ರಾಬಿನ್ಸ್ - ಆ ಅಸ್ಥಿ ಪಂಜರ ಸಂಧಿರೋಗದಿಂದ ಸತ್ತ ೫೦ ವರ್ಷ ವಯಸ್ಸಿನ ಗಂಡಸಿನದ್ದೆಂದು ಅಭಿಪ್ರಾಯ ಪಟ್ಟಿದ್ದಾರೆ' (ಹೆಗಡೆ, ೧೫-೪-೦೧).

ಹೆಸರು ಬದಲಾಯಿಸಿಕೊಂಡ ಕಾಯಿಲೆಗಳು ?

ಹೆಸರನ್ನು ಬದಲಾಯಿಸಿಕೊಳ್ಳುವ 'ರೋಗ' ಮನುಷ್ಯರ ಹಾಗೆ ಕಾಯಿಲೆಗಳಿಗೂ ಇದೆಯೇ ? ಕೆಲ ಪ್ರಸ್ತಾಪಗಳನ್ನು ಗಮನಿಸಿದರೆ ಇದು ನಿಜವೆನ್ನಿಸುತ್ತದೆ. ಈಗಿನ ' ಕಾಲರಾ ' ಕ್ಕೆ ಹಿಂದೆ " ಮಹೇಶ್ವರಿ ಉಪದ್ರ" ಎಂಬ, ವಿಷಮಶೀತ ಜ್ವರಕ್ಕೆ "ಮಹೇಶ್ವರ ಜ್ವರ" ಎಂಬ ಹೆಸರು ಇದ್ದಿರಬಹುದಾದುದರ ಬಗ್ಗೆ ಅಧ್ಯಯನವೊಂದರಲ್ಲಿ ಪ್ರಸ್ತಾಪಿಸಲಾಗಿದೆ (ನೋಡಿ : ಚಿದಾನಂದ ಮೂರ್ತಿ ೧೯೯೩:೩೯೧-೩).

ಊರಿಗೆ ಬರುವ ಸಾಂಕ್ರಾಮಿಕ ರೋಗಗಳ ನಿವಾರಣೆಗಾಗಿ ಜನ ದೇವತೆಗಳನ್ನು ಪೂಜಿಸುವುದು, ದೇವತೆಗಳು ಮೈ ಮೇಲೆ ಬರುವುದು... ಇಂದೂ ಎಲ್ಲಾ ಹಳ್ಳಿಗಳಲ್ಲೂ ಕಾಣುವ ಸಾಮಾನ್ಯ ನಡವಳಿ. ಇಂತಹ ನಂಬಿಕೆ ಶತಮಾನಗಳ ಹಿಂದೆಯೂ ಇದ್ದುದು ಕೆಲ ಶಾಸನಗಳಲ್ಲಿ ಪ್ರಸ್ತಾಪವಾಗಿರುವುದೂ ಗಮನಾರ್ಹವಾಗಿದೆ (ನೋಡಿ : ಅದೇ, ಪು. ೩೯೨).

ಬೋಳು

ಆಧುನಿಕ ಜಗತ್ತಿನ 'ರೋಗವಲ್ಲ'ದ 'ಮಹಾರೋಗ' ಬೋಳು (ಬೊಕ್ಕತಲೆ). ಆದರೆ, ಇದು ವೇದಕಾಲದ ಋಷಿಗಳನ್ನೂ ಪೀಡಿಸಿದ್ದ

ಸಮಸ್ಯೆಯಾಗಿತ್ತು. ಅತ್ರಿಋಷಿಯ ಮಗಳು ಅಪಾಲಾ ವೇದಸೂಕ್ತವನ್ನುರಚಿಸಿದ ಕವಿಯತ್ರಿ. ಅವಳ ಗುಹ್ಯ ಭಾಗದಲ್ಲಿ ಚರ್ಮರೋಗದಿಂದ ಕೂದಲು ಬೆಳೆದಿರಲಿಲ್ಲ. ತಂದೆಯ ಮಂಡೆಯು ಬೋಳಾಗಿತ್ತು. ಜಮೀನಿನ ಬೆಳೆಗೂ ರೋಗ ಬಂದಿತ್ತು. ಪರಿಹಾರಕ್ಕಾಗಿ ಆಕೆ ಸೋಮಲತೆಯನ್ನು ಅಗಿದು, ಅದರ ರಸವನ್ನು ತನ್ನ ಬಾಯಿಯಿಂದ ನೇರವಾಗಿ ಇಂದ್ರನಿಗೆ ಕೊಟ್ಟಳಂತೆ. ಸಂತೃಪ್ತನಾದ ಇಂದ್ರ ಆ ಮೂರು ರೋಗಗಳನ್ನು ನಿವಾರಿಸಿದನಂತೆ (ವೀರಭದ್ರಪ್ಪ ೨೦೦೧ ;೩೫). ಬೋಳಿನ ಗೋಳಿನವರು ಈ ಪ್ರಯೋಗ ಮಾಡಬಾರದೇಕೆ ?

ನಾಣ್ಯಗಳು ಹಾಗೂ ಮೊಹರುಗಳು

ಪ್ರಾಚ್ಯ ಜಾನಪದ ಅಧ್ಯಯನದಲ್ಲಿ ಪ್ರಾಚೀನ ನಾಣ್ಯಗಳು ಹಾಗೂ ಮೊಹರುಗಳನ್ನೂ ಆಕರಗಳಾಗಿ ಬಳಸಿಕೊಳ್ಳಬಹುದಾಗಿದೆ. ನಾಣ್ಯಗಳ ಮೇಲಿನ ಚಿತ್ರಣಗಳಿಂದ ಆಗಿನ ರಾಜರ ವೇಷ - ಭೂಷಣ, ಸಂಪ್ರದಾಯ, ಬದುಕಿಗೆ ಸಂಬಂಧಿಸಿದ ಕೆಲವಾದರೂ ಸ್ಥೂಲ ಮಾಹಿತಿಗಳು ಲಭ್ಯವಾಗುತ್ತಿದ್ದು, ತೌಲನಿಕ ಅಧ್ಯಯನಕ್ಕೆ ಅವುಗಳ ಕೊಡುಗೆಯೂ ಮಹತ್ವದ್ದಾಗುತ್ತದೆ.

ಖ್ಯಾತದೊರೆ ಸಮುದ್ರಗುಪ್ತನು ತಾನು ಗಳಿಸಿದ ಹಲವು ವಿಜಯಗಳ ನೆನಪಿಗಾಗಿಯೂ ಮತ್ತು ಯಜ್ಞಗಳಲ್ಲಿ ಭಾಗವಹಿಸಿದ ಪುರೋಹಿತರಿಗೆ ದಾನಾದಿಗಳನ್ನು ನೀಡುವ ಸಲವಾಗಿಯೂ ಮುದ್ರಿಸಿದ ನಾಣ್ಯಗಳಲ್ಲಿ 'ಸುವರ್ಣಯುಗ'ದ ಸಾಂಪ್ರದಾಯಿಕ ಸಂಸ್ಕೃತಿಯ ಪ್ರತೀಕವಾದ ಕೆಲವು ಆಚರಣೆ - ವಿಧಿಗಳ ಚಿತ್ರಗಳೂ ಕಂಡುಬರುತ್ತವೆ. ಆತನ 'ಅಶ್ವಮೇಧ' ಮಾದರಿಯ ಒಂದು ನಾಣ್ಯದ ಮುಖಭಾಗದಲ್ಲಿ ಅಶ್ವ ಮೇಧ ಯಾಗದ ಕುದುರೆಯು ಯಜ್ಞಕುಂಡಕ್ಕೆ ಅಭಿಮುಖವಾಗಿ ನಿಂತಿರುವಂತೆ ಚಿತ್ರಿಸಿದೆ. ಅದರ ಬೆನ್ನು ಭಾಗದಲ್ಲಿ ಒಬ್ಬ ಮಹಿಳೆ ಬಲಗೈಲಿ ಚಾಮರ (Fly whisk) ಹಿಡಿದು ನಿಂತಿದ್ದರೆ, ಬಾವುಟ ಹಿಡಿದ ಆಳು ಅವಳ ಎದಿರು ನಿಂತಂತೆ ಚಿತ್ರಿತವಾಗಿದೆ. ಅವಳ ಹಿನ್ನೆಲೆಗೆ ದೇವನಾಗರಿ ಲಿಪಿಯಲ್ಲಿ 'ಅಶ್ವಮೇಧಯಾಗ ಮಾಡುವುದರಿಂದ ಪರಾಕ್ರಮ....' ಎಂಬರ್ಥದ

ಶಬ್ದವಿದೆ. ಇದರ ಮೂಲಕ ಆ ದೊರೆಗಳು ಯಾಗಕ್ಕೆ ಕೊಟ್ಟ ಪ್ರಾಧಾನ್ಯತೆ ಹಾಗೂ ಯಾಗದ ಆಚರಣೆ ಬಗೆಗಿನ ಅವರ ನಂಬಿಕೆಗಳು ವ್ಯಕ್ತವಾಗುತ್ತವೆ.

ಇನ್ನೊಂದು ನಾಣ್ಯದ ಮೇಲೆ ದೊರೆ ಸಮುದ್ರಗುಪ್ತನು ಲೈರ್ ವಾದ್ಯ ನುಡಿಸುತ್ತಾ ಕುಳಿತಿರುವುದನ್ನು ಸುಂದರವಾಗಿ ಬಿಡಿಸಲಾಗಿದೆ. ಆತ ಕುಳಿತಿರುವ ಚಿಕ್ಕ ಆರಾಮಾಸನ, ಇಳಿಬಿಟ್ಟ ಪಾದದ ವಿಶ್ರಾಂತಿಗಾಗಿ ಇಟ್ಟುಕೊಂಡಿರುವ ಸಣ್ಣ ಪಾದಪೀಠ, ಅವುಗಳ ವಿನ್ಯಾಸ ಹಾಗೂ ಬಳಕೆಯ ಕ್ರಮ ಇಂದಿಗೂ ಉಳಿದುಬಂದಿರುವ ನಡವಳಿ ಮಾದರಿಗಳೊಂದಿಗೆ ಅಭ್ಯಾಸನೀಯವಾಗಿವೆ (ವಿವರಕ್ಕೆ : Sivaramamurti 1983 : 34-35).

ಲಕ್ಷ್ಮಿ

ಭಾರತೀಯ ದೇವಾನುದೇವತೆಗಳ ಬಗ್ಗೆ ಪ್ರಾಚೀನರ ಪರಿಕಲ್ಪನೆಗಳು ಹೇಗಿದ್ದವೆಂಬುದನ್ನು ಕೆಲ ಕಾವ್ಯ - ಪುರಾಣಗಳಲ್ಲಿ ಓದಿ ತಿಳಿಯಬಹುದಾದರೂ ಅವುಗಳ ಚಿತ್ರಣ ಕಣ್ಣಿಗೇ ಕಾಣುವ ರೂಪದಲ್ಲಿದ್ದರೆ ಗ್ರಹಿಕೆಗೆ ಹೆಚ್ಚು ಸ್ಪಷ್ಟ ಹಾಗೂ ಸುಲಭವಾಗುತ್ತದೆ. ಇಂತಹ ಅಭ್ಯಾಸಗಳಿಗೆ ಗುಪ್ತರ ನಾಣ್ಯಗಳ ಮೇಲಿನ ಲಕ್ಷ್ಮಿಯ ಚಿತ್ರವನ್ನು ಒಂದು ಉದಾಹರಣೆಯಾಗಿ ನೋಡಬಹುದು : ಒಂದನೇ ಚಂದ್ರಗುಪ್ತನ ಕಾಲದ ಒಂದು ನಾಣ್ಯದಲ್ಲಿ ದೊರೆಯು ತನ್ನ ರಾಣಿಯೊಂದಿಗೆ ಧೀಮಂತಿಕೆಯಿಂದ ನಿಂತಂತೆ ಚಿತ್ರಿಸಿದೆ. ಪ್ರಾಚೀನ ನಾಣ್ಯಗಳಲ್ಲಿ ರಾಜರ ಚಿತ್ರಣಕ್ಕೆ ಹೊರತಾಗಿ ರಾಣಿಯರ ಚಿತ್ರಗಳು ಇರುತ್ತಿರಲಿಲ್ಲ ಎಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ ಆತ ತನ್ನ ರಾಣಿಗೆ ನೀಡುತ್ತಿದ್ದ ಸ್ಥಾನ - ಗೌರವದ ದಾಖಲೆ ದೃಷ್ಟಿಯಿಂದ ಇಂತಹ ನಾಣ್ಯಗಳಿಗೆ ಹೆಚ್ಚಿನ ಮಹತ್ವ ಬರುತ್ತದೆ. ಇದೇ ನಾಣ್ಯದ ಹಿಂಭಾಗದಲ್ಲಿ ಸಿಂಹಾಸನಾರೂಢ ರಾಜ್ಯಲಕ್ಷ್ಮಿಯನ್ನು ಸೂಚಿಸುವಂತೆ, ಸಿಂಹದ ಮೇಲೆ ಕುಳಿತು, ಪಾದಗಳನ್ನು ಕಮಲದ ಮೇಲೆ ಇಟ್ಟು, ಕೈಲಿ ಸಮೃದ್ಧಿಯ ಸಂಕೇತವಾದ ಆಡಿನ ಕೊಂಬಿನಂತಹ ಅಕ್ಷಯಪಾತ್ರೆ ಹಿಡಿದ ಲಕ್ಷ್ಮಿಯ ಚಿತ್ರಣವಿದೆ. ಅವಳ ಬಲಗೈಲಿ ದಂಡಪಾಶ, ಎಡಗೈಲಿ ಅಕ್ಷಯ ಪಾತ್ರೆ ಇದೆ. (Chakraborty 1986 : 15). ಕೆಲ ಚಿತ್ರಗಳಲ್ಲಿ ಲಕ್ಷ್ಮಿಯ ಬಲಹಸ್ತದಿಂದ


ನಾಣ್ಯ ಉದುರುವಂತಹ ಚಿತ್ರಣವೂ ಇದೆ (ಅದೇ, ಪು. 357 ನೋಡಿ). ಲಕ್ಷ್ಮಿಯ ಚಿತ್ರ ಕಲ್ಪನೆ ಈಗ ಸಾಕಷ್ಟು ಬೆಳೆದಿದೆ. ಈಗ ಲಕ್ಷ್ಮಿಯ ಹಸ್ತದಿಂದ ನೋಟುಗಳು ಉದುರುವಂತೆ ಚಿತ್ರಿತವಾಗಿರುತ್ತದೆ. ಮುಂದೆ ಡಾಲರ್‌ಗಳೋ, ಯೂರೋಗಳೂ ಬರಬಹುದು.

ಬಿಲ್ಲು, ಬಾಣ


ನಾಣ್ಯಗಳ ಮೇಲಣ ಚಿತ್ರಣಗಳಿಂದ ಪ್ರಾಚೀನ ಕಾಲದಲ್ಲಿ ಬಳಕೆಯಾಗುತ್ತಿದ್ದ ಬಿಲ್ಲು, ಬಾಣಗಳ ಮಾದರಿಗಳನ್ನೂ ಅಭ್ಯಸಿಸಬಹುದಾಗಿದೆ (ವಿವರಕ್ಕೆ ನೋಡಿ : Pant 1978 : 67). ನಾಣ್ಯಗಳನ್ನು ಕಾಲಾನುಕ್ರಮಣಿಕೆಯಲ್ಲಿ ಅಧ್ಯಯನ ಮಾಡುವ ಮೂಲಕ ಕಾಲಕಾಲಕ್ಕೆ ಬಿಲ್ಲು - ಬಾಣಗಳ ಸ್ವರೂಪದಲ್ಲಿ ಆದ ಬೆಳವಣಿಗೆ, ಬಳಕೆಯ ವಿಧಾನ, ಆಯಾಕಾಲದ ಜನಪ್ರಿಯತೆ ಮೊದಲಾದವುಗಳನ್ನೂ ತಿಳಿದುಕೊಳ್ಳಬಹುದಾಗಿದೆ. ಈ ಸಂಬಂಧದ ಪೂರಕ ಮಾಹಿತಿಗಾಗಿ ಗುಹಾಚಿತ್ರಗಳು ಹಾಗೂ ಶಿಲ್ಪ, ಚಿತ್ರಗಳಲ್ಲಿನ ಆಯುಧಗಳನ್ನೂ ಅಗತ್ಯವಾಗಿ ಗಮನಿಸಬಹುದಾಗಿದೆ.

ನಾಣ್ಯಗಳ ಮೇಲೆ ನಮೂದಿತವಾಗಿರುವ ಕೆಲವು ಪ್ರಾಚೀನ ಆಯುಧಗಳ ಚಿತ್ರಗಳು ಹೀಗಿವೆ :


೧.




೨.




೩.




೪.




೫.




೬.



೭.



೮.



೧. ೩ ಬಾಣ, ೩ ಅರ್ಧ ಚಂದ್ರಗಳನ್ನೊಳಗೊಂಡ ಚಕ್ರ.

೨. ಚಕ್ರ

೩. ಗರಿಗಳುಳ್ಳ ತುಸು ಬಾಗಿದ ಬಾಣ

೪. ಸಾಧಾರಣ ಬಾಣ - ಬಿಲ್ಲು

೫. ಗರಿಗಳುಳ್ಳ ಬಾಗಿದ ಬಾಣ

೬. ಅಂಕುಶ

೭. ತ್ರಿಶೂಲ

೮. ತ್ರಿಶೂಲ ಪರಶು

(ವಿವರಕ್ಕೆ : ಅದೇ, ಪು. 88).

ಪೆರಿಣಿ

ಪ್ರಾಚ್ಯ ಜಾನಪದ ಅಧ್ಯಯನದಿಂದ ಇಂದು ರೂಢಿ ತಪ್ಪಿ ಹೋಗಿರುವ ಕೆಲವೊಂದು ಕಲೆಗಳ ಸ್ವರೂಪ, ಬಳಕೆಗಳ ಬಗೆಗೆ ತಿಳಿದುಕೊಳ್ಳಲೂ ಅಂತಹ ಸಂಗೀತ-ನೃತ್ಯ ಸಂಪ್ರದಾಯವನ್ನು ಪುನರ್ ರಚಿಸಿಕೊಳ್ಳುವುದಕ್ಕೂ ಸಾಧ್ಯವಾಗುತ್ತದೆ. ಈ ಮಾತಿಗೆ ನಿದರ್ಶನವಾಗಿ 'ಪೆರಿಣಿ' ಎಂಬ ನೃತ್ಯ ಪ್ರಕಾರವನ್ನು ಇಲ್ಲಿ ಗಮನಿಸಬಹುದು.

ಸು. ೭೫೦ ವರ್ಷಗಳ ಹಿಂದೆ ತೆಲುಗು ದೇಶದಲ್ಲಿ ಅಸ್ತಿತ್ವದಲ್ಲಿದ್ದ ಒಂದು ವಿಶಿಷ್ಟ ನೃತ್ಯ ಪ್ರಕಾರ ಈ 'ಪೆರಿಣಿ'. ವೀರಶೈವರಲ್ಲಿನ ನಿರ್ದಿಷ್ಟ

ಪಂಗಡದವರು ಶಿವನ ಸಂಪ್ರೀತಿ ಹಾಗೂ ಯೋಧರ ಉದ್ದೀಪನಕ್ಕಾಗಿ ಈ ನೃತ್ಯ ಕಲೆಯನ್ನು ಪ್ರದರ್ಶಿಸುತ್ತಿದ್ದರು ('ಪೆರಿಣಿ' ಎಂಬುದು ಸಂಸ್ಕೃತದ 'ಪ್ರೇರಣಾ'ದಿಂದ ಬಂದದ್ದು). ಕಾಕತಿ ಗಣಪತಿದೇವನ ದಂಡನಾಯಕ ಜಯಪ್ಪ ಸೇನಾನಿ ಎಂಬಾತ ಈ ಗೀತನೃತ್ಯದ ಸಂಯೋಜಕ. ಆ ಮೊದಲು ಲಾಸ್ಯ ಪ್ರಧಾನವಾಗಿದ್ದ ನೃತ್ಯವನ್ನು ಈತ ತಾಂಡವ ಪ್ರಧಾನ ಮಾಡಿ, ಪುರುಷ ಪ್ರಧಾನವಾಗಿ ರೂಪಿಸಿದ.

ಮುಂದೆ ಕಾಕತೀಯ ಸಾಮ್ರಾಜ್ಯ ಹಾಳಾಗಿ, ವೀರಶೈವರ ಪ್ರಾಬಲ್ಯವೂ ಕಡಿಮೆಯಾಗಿ, ವಿಜಯನಗರದವರ ಕಾಲದಲ್ಲಿ ವೈಷ್ಣವ ಪಂಥದ ಪ್ರಭಾವ ಹೆಚ್ಚಾಯಿತು. ಮುಂದೆ, ತೆಲುಗು ದೇಶ ಹಲವು ಯುದ್ಧಗಳೊಡನೆ ಮುಖಾಮುಖಿಯಾಗಬೇಕಾಯಿತು. ಹಾಗಾಗಿ ಆ ಜನರಿಗೆ ತಮ್ಮ ಸಂಗೀತ ನೃತ್ಯಾದಿಗಳನ್ನು ಜೀವಂತ ಉಳಿಸಿಕೊಳ್ಳಲು ವ್ಯವಧಾನವಿರಲಿಲ್ಲ. ಅಂತೆಯೇ, ಪೆರಿಣಿ ತಾಂಡವವೂ ಅಳಿಯುವಂತಾಯಿತು. ಆದರೆ, ಆಗಿನ ಪ್ರಜ್ಞಾವಂತ ಶಿಲ್ಪಿಗಳಿಂದಾಗಿ ಆ ಕಲಾ ಸಂಪ್ರದಾಯ ಅಪರೋಕ್ಷವಾಗಿಯಾದರೂ ಉಳಿಯುವಂತಾಯಿತು. ಅರ್ಥಾತ್, ಅವರು ಕಟ್ಟಿದ ದೇವಸ್ಥಾನಗಳ ಗೋಡೆಗಳು, ಕಂಬಗಳ ಮೇಲೆ ಆ ನೃತ್ಯ ಭಂಗಿಗಳು ಖಾಯಂ ಆಗಿ ಉಳಿದಿವೆ.

ವಾರಂಗಲ್ ಜಿಲ್ಲೆ, ಪಾಲಂ ಪೇಟದಲ್ಲಿ ೧೨೧೩ರಲ್ಲಿ ನಿರ್ಮಾಣವಾದ ರಾಮಪ್ಪ ದೇವಸ್ಥಾನದ (ಈ ಗುಡಿಯನ್ನು ಶಿಲ್ಪಿಯ ಹೆಸರಿನಲ್ಲಿಯೇ ಇಂದೂ ಗುರುತಿಸುತ್ತಾರೆ) ಕಂಬಗಳ ಮೇಲಿನ ಪೆರಿಣಿ ನೃತ್ಯ ಭಂಗಿಗಳನ್ನು ಸೂಕ್ಷ್ಮವಾಗಿ ಅಭ್ಯಾಸ ಮಾಡಿದ ಖ್ಯಾತ ನೃತ್ಯಪಟು ನಟರಾಜ ರಾಮಕೃಷ್ಣ ಅವರು, ಮರೆತು ಹೋಗಿದ್ದ ಆ ಪೆರಿಣಿ ತಾಂಡವವನ್ನು ಪುನರ್ ಸೃಷ್ಟಿಸುವ ಪ್ರಯತ್ನ ಮಾಡಿದ್ದಾರೆ. ಶಿಲ್ಪಗಳಲ್ಲಿನ ಮೃದಂಗಗಳ ಸ್ಥಿತಿ, ಕೋನ ಮೊದಲಾದ ಸಂಗತಿಗಳನ್ನು ಅಭ್ಯಾಸ ಮಾಡಿಯೇ ಆ ನೃತ್ಯದ ಹಿನ್ನೆಲೆ ಸಂಗೀತವನ್ನು ಕಲ್ಪಿಸಿದ್ದಾರೆ (ಕಂಬಗಳ ಮೇಲಿನ ಚಿತ್ರಗಳಿಗಾಗಿ ನೋಡಿರಿ : The Indian Magazine of her people and culture Page - 52).

ದೇವಾಲಯ ನೃತ್ಯ ಸಂಪ್ರದಾಯಗಳನ್ನು ಪುನರ್ ಸೃಷ್ಟಿಸುವ

ಪ್ರಯತ್ನಗಳನ್ನು ಕರ್ನಾಟಕದ ಕೆಲವು ನೃತ್ಯ ಕಲಾವಿದೆಯರೂ ಮಾಡಿರುವುದನ್ನು ಇಲ್ಲಿ ಸ್ಮರಿಸಬಹುದು.

ಹೀಗೆ, 'ಪ್ರಾಚ್ಯ ಜಾನಪದ ಅಧ್ಯಯನ' ನಮ್ಮ ಜನಪದ ಬದುಕಿನ ಸಾಮಾನ್ಯ ಸಂಗತಿಯ ಬಗೆಗೂ ಸ್ವಾರಸ್ಯದ ಬೆಳಕನ್ನು ಚೆಲ್ಲುತ್ತದೆ. ಆಧುನಿಕದಲ್ಲಿ ನಿಂತು ಆದಿಮಕ್ಕೆ ಕೈ ಚಾಚುವ ಈ ಜ್ಞಾನ ವೃಕ್ಷ, ಪ್ರಾಚೀನ ಆಕರಗಳು ಹೆಚ್ಚು ಹೆಚ್ಚು ದೊರೆತಷ್ಟೂ ಸ್ವತಃ ಸತ್ವಯುತವಾಗಿ ಬೆಳೆಯುತ್ತಾ, ದೃಢವಾಗುತ್ತಾ ಹೋಗುತ್ತದೆ. ಒಂದೊಂದು ಹೊಸ ಆಕರವೂ ಒಂದೊಂದು ಹೊಸ ಬೇರು ಆಗಿ ಇದನ್ನು ಸಮೃದ್ಧವಾಗಿ ಬೆಳೆಸುತ್ತವೆ.

ಈ ಎಲ್ಲಾ ಆಕರಗಳೂ ಒಮ್ಮೆಗೇ ಸಿಗುವಂತಹವು ಅಲ್ಲವಾದ್ದರಿಂದ, ಇಲ್ಲಿ ಈಗ ಕಂಡುಕೊಂಡಿದ್ದೇ ಅಂತಿಮವಲ್ಲ. ಇದಿಷ್ಟೇ ಕೊನೇ ಮಾತು ಆಗಬೇಕಾಗಿಲ್ಲ. ಹೀಗಾಗಿ, ಇದು 'ನಿತ್ಯವೂ ಹೊಸದಾಗಿ,' ದಿಕ್ಕು ದಿಕ್ಕಿನಲ್ಲಿ ತನ್ನ ನೂತನ ಶಾಖೆಗಳನ್ನು ಬೆಳೆಸುತ್ತಾ ಹೊಸ ಅರಿವಿನ ಹೂ ಹಣ್ಣುಗಳನ್ನು ನೀಡುತ್ತಾ ಅಭ್ಯಾಸಿಗಳಿಗೆ ಅನುಪಮ ಮುದವನ್ನುಂಟುಮಾಡುತ್ತದೆ: ಆ ಮೂಲಕ ಇಂದಿನ ಜನಪದ ಬದುಕಿನ ಪ್ರಾಚೀನ ರೂಪಗಳನ್ನು ಅರಿಯಲು ಅಥವಾ ಅಂದಿನ ಬದುಕು ಇಂದು ಯಾವ ನೆಲೆ ಮುಟ್ಟಿದೆ ಎಂಬುದನ್ನು ಗುರುತಿಸಲು ಸಹಕಾರಿಯಾಗುತ್ತದೆ.

ಒಟ್ಟಾರೆ, 'ಕಣ್ಮರೆಯಾದ' ಪ್ರಾಚೀನ ಕಾಲದ ಜಾನಪದದ ಅಧ್ಯಯನಕ್ಕೂ ವಿಶ್ವಾಸಾರ್ಹವಾದ ಅಸಂಖ್ಯ ಪ್ರಾಚೀನ ದಾಖಲೆಗಳಿವೆ ಎಂಬುದನ್ನು ಈ ಮೂಲಕ ಸಾಬೀತು ಪಡಿಸಿದಂತಾಯಿತು.

ಆಕರ ವಿವರ :

ಅ. ನ. ಕೃ. ೧೯೭೦

ಚಿತ್ರಕಲೆ ; ಮೈಸೂರು

ಎಲಿಗಾರ, ಡಾ । ಚೆನ್ನಕ್ಕ ೧೯೯೦

ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ ; ಧಾರವಾಡ

ಕಾರಂತ, ಡಾ । ಶಿವರಾಮ ೧೯೭೧

ಕರ್ನಾಟಕದಲ್ಲಿ ಚಿತ್ರಕಲೆ ; ಮೈಸೂರು

ಕ್ಲಾಸ್, ಡಾ । ಪೀಟರ್, ಜೆ. ೧೯೮೭

ತುಳುವ ದರ್ಶನ: ಅನುವಾದ : ಎ. ವಿ. ನಾವಡ ಮತ್ತು ಶುಭಾಶ್ಚಂದ್ರ, ಕುಂದಾಪುರ.

ಖಂಡೋಬಾ, ಡಾ । ಪಿ. ಕೆ. ೧೯೯೧

ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ, ಗುಲಬರ್ಗಾ

ಗೋವಿಂದರಾಜು, ಡಾ । ಟಿ.

೧೯೯೩ : ಚನ್ನಾದೇವಿ ಅಗ್ರಹಾರ ಜಾನಪದೀಯ ಅಧ್ಯಯನ ;

ಅ) ೨೦೦೦ : ಕಣ ; ಮೈಸೂರು.

ಆ) ೨೦೦೦ : ಜಾನಪದೀಯ ; ಚನ್ನಾದೇವಿ ಅಗ್ರಹಾರ.

ಚಿದಾನಂದ ಮೂರ್ತಿ, ಡಾ । ಎಂ. ೧೯೯೩

ಹೊಸತು ಹೊಸತು ; ಹಂಪಿ

ದೇರ್ಲ, ನರೇಂದ್ರ ರೈ ೧೯೯೫

ಕನ್ನಡದಲ್ಲಿ ಬೇಟೆ ಸಾಹಿತ್ಯ ; ಪುತ್ತೂರು.

ನಾಯಕ, ಸವಿತಾ ೧೯೯೪

ಉತ್ತರ ಕನ್ನಡ ಜಿಲ್ಲೆಯ ಕೆಲವು ಬುಡಕಟ್ಟುಗಳಲ್ಲಿ ಪ್ರಸಾಧನ ಕಲೆ (ಅಪ್ರಕಟಿತ ಮಹಾಪ್ರಬಂಧ)

ರಾವ್, ಎಸ್. ಆರ್. ೧೯೯೪

ಲೋಥಲ್ ಮತ್ತು ಸಿಂಧೂ ನಾಗರಿಕತೆ : (ಅನು) ಗುರುರಾಜಾಚಾರ್, ಎಸ್, ಧಾರವಾಡ

ವೀರಭದ್ರಪ್ಪ, ಬಿ. ವಿ. ೨೦೦೧. ವೇದಗಳಲ್ಲಿ ಜನಸಾಮಾನ್ಯರು, ಹಂಪಿ

Chakraborty, Swati 1986

Ancient Indian Coins ; Delhi

Chopra, Pran Nath 1963(1955)

Society and culture in Mughal Age.

Douglass Barrett and Basil Gray 1978

Indian Paintings

Early Mughal Painting

- Lalitkala Series No. 24

Gascoigne, Bamber 1979 (1971)

The Great Moghuls, New Delhi

Geetisen 1984

Paintings from the Akbar Nama ; New Delhi

Havell, E. B.

The Art Heritage of India

Irwine, William 1962

The Army of the Indian Moghuls, New Delhi

Krishna Murthy. K. 1982

Social and Cultural life in Ancient India, New Delhi

Pant, Dr. G. N. : 1978

Indian Arms and Armour, vol-I ; Army educational stores, New Delhi

Randhawa, M.S., 1983, Paintings of the Babur Nama, New Delhi

Rice, TamaraTalbot 1965

Ancient Arts and Central Asia, New york

Kirankumar, Thaplyal 1972

Sivaramamurti, C 1983 (1945)

Numismatic Parallels of Kalidasa ; New Delhi.

Toby Falk and Milderd Archer 1981

Indian Miniatures In the India office Library ; New Delhi

Uma Maheswari, C. S. 1995

Dress and Jewellery of Women : Sata Vahana to Kakatiya ; Madras.

Upadhyaya, Dr. Padma 1978

. Female Images in the Museums of Uttar Pradesh and their Social Background ; Varanashi

Lalit Kala Series, PortFolio No. 19

Pahari Paintings of the Nala - Damayanti Theme

1995 (1975); Pub. Division ; Ministry of I & B:, Govt of India.

ವೈಯಕ್ತಿಕ ಮಾಹಿತಿ

ಕರಿಯಪ್ಪ, ಟಿ.

ಶಿಕ್ಷಕರು, ಚನ್ನಾದೇವಿ ಅಗ್ರಹಾರ, ದೊಡ್ಡಬಳ್ಳಾಪುರ, ತಾ.

ಹೊನ್ನಮ್ಮ. ಕೋಂ ದೊಡ್ಡೇರಿ ತಿಮ್ಮರಾಯಪ್ಪ ; ಗೃಹಿಣಿ, ಚ. ದೇ. ಅಗ್ರಹಾರ.

ಪತ್ರಿಕೆಗಳು

ಆಚಾರ್ಯ, ಪಾ. ವೆಂ.

"ವೃಷಣ ಮಹಿಮೆ ಮತ್ತು ಶಿಷ್ನಶಕ್ತಿ" : ರತಿವಿಜ್ಞಾನ ದರ್ಪಣ (ಮಾಸಿಕ) ಸೆಪ್ಟೆಂಬರ್, ೧೯೮೬ ; ಬೆಂಗಳೂರು

ಕೆ. ಪಿ. ಎಂ.

"ಗುಲಿಗಳ ಮೂಲ" : ಆಂದೋಲನ (ದಿನಪತ್ರಿಕೆ) ; ಹಾಡುಪಾಡು ವಿಭಾಗ, ೨೭ -೬-೧೯೯೯, ಮೈಸೂರು.

ಗೋವಿಂದರಾಜು, ಡಾ । ಟಿ.

"ಜ್ಞಾನ ನೆಮ್ಮದಿಯ ಬಾಗಿಲು " : ಪ್ರಜಾವಾಣಿ ದೀಪಾವಳಿ ವಿಶೇಷಾಂಕ ೧೯೯೨, ಬೆಂಗಳೂರು

" ಪ್ರಾಚೀನ ವಾದ್ಯಗಳು" : ಉದಯವಾಣಿ ದೀಪಾವಳಿ ವಿಶೇಷಾಂಕ ೧೯೯೪, ಮಣಿಪಾಲ

"ಅಗತ್ಯ ಅಧ್ಯಯನದ ಪ್ರಾಚ್ಯ ಜಾನಪದ, ಪ್ರಜಾವಾಣಿ. ೧೨-೧೨-೧೯೯೯.

"ಜನಪದ ವಾಸ್ತುಕಲೆ" : ಮಾನವಿಕ ಕರ್ನಾಟಕ : ಸಂ ೨೫-೨೬ ಸಂಯುಕ್ತ ಸಂಪುಟ, ೧೯೯೫ - ೯೬ ; ಮೈಸೂರು ವಿ.ವಿ.

ಜಗದೀಶ, ದೀಪಿಕಾ

"ಎರಡು ಶಾಪದ ಸುದ್ದಿ " : ಆಂದೋಲನ, ಹಾಡುಪಾಡು ವಿಭಾಗ ; ೯-೮-೧೯೯೮, ಮೈಸೂರು.

ದಿವಾಕರ್. ಎಸ್

ಫೋಟೋ – ೧೯೨೩ : ದೇಶಕಾಲ–೧,
ಏಪ್ರಿಲ್–ಜೂನ್–೨೦೦೫

ಬೆಟ್ಟಕೊಪ್ಪ, ರಾಘವೇಂದ್ರ

"ಕೊಟ್ಟ" : ಪ್ರಜಾವಾಣಿ, ನಾಡು-ನುಡಿ ವಿಭಾಗ, ೧೯-೦೮-೧೯೯೬.

ಶ್ರೀಧರಮೂರ್ತಿ, ಮ.

"ಎತ್ತಿನ ಗಾಡಿ - ಹಳ್ಳಿ ಹಾದಿಯಿಂದ ದಿಳ್ಳಿ ಬೀದಿಗೆ" : ಪ್ರಜಾವಾಣಿ,
ಸಾಪ್ತಾಹಿಕ ಪುರವಣಿ, ೨೯-೦೯-೧೯೭೪.

ಹೆಗಡೆ, ಮೋಹನ, ಗ.

"ಅಹರ್ - ಹರಪ್ಪಾ ಹಾಗೂ ಅವರ ಪೂರ್ವಜರ ಕೊಂಡಿ ?" :
ಹೊಸದಿಂಗತ, ಸಾಹಿತ್ಯ ಸಾಪ್ತಾಹಿಕ ವಿಭಾಗ, ೧೫-೦೪-೨೦-೦೧.

ಲೀಲಾ, ಡಾ । ಎನ್. ಎಸ್.

"ಹೇನು ಹೇನೆನ್ನದಿರಿ ತಲೆಯಿಲ್ಲದ ಜನರೇ !" : ಪ್ರಜಾವಾಣಿ,
ಸಾಪ್ತಾಹಿಕ ಪುರವಣಿ, ೧೫-೩-೧೯೯೧.

India Magazine, June, 1984.

The Indian Magazine of her People and culture, vol. 8, No. 9 ; Aug. 1988.

ಅನುಬಂಧ

ಪ್ರಾಚೀನ ವಾದ್ಯಗಳು

ಬಾಯಿಂದ ಬಾಯಿಗೆ ಹರಿದು ಹೋಗುವ ಜಾನಪದಕ್ಕೆ ದಾಖಲೆಗಳಿರುವುದಿಲ್ಲ ಎಂಬುದು ಬಹುಪಾಲು ವಿದ್ವಾಂಸರ ಸಾಮಾನ್ಯ ತಿಳಿವಳಿಕೆ. ಆದ್ದರಿಂದಲೇ, ನೂರಿನ್ನೂರು ವರ್ಷಗಳ ಹಿಂದೆ ಒಂದು ಜನಪದ ಕತೆ ಹೇಗಿತ್ತೆಂಬುದು ನಮಗೀಗ ಲಭ್ಯವಾಗುವುದಿಲ್ಲ. ಜಾನಪದದ ಈ ಮನೋಭಾವ ಪರಂಪರೆಯ ಇತಿಹಾಸದ ಅರಿವಿಗೆ ಭಾರೀ ಪೆಟ್ಟು ಕೊಟ್ಟಿದೆ.

ಆದರೆ, ಈ ಕೊರತೆ ಜಾನಪದದ ಎಲ್ಲಾ ಪ್ರಕಾರಗಳಿಗೂ ಅನ್ವಯವಾಗುತ್ತದೆಯೇ ? -'ಬಹುಮಟ್ಟಿಗೆ ಹೌದು' - ಎಂಬುದು ಹೆಚ್ಚು ಆತಂಕ ತಂದರೆ, 'ಕೊಂಚಮಟ್ಟಿಗೆ ಅಲ್ಲ' ಎಂಬುದು ಆಶಾಕಿರಣ ಬೆಳಗಿಸುತ್ತದೆ. ಭೌತಿಕ ಜಾನಪದದ ಕೆಲ ಅಂಶಗಳು ಸಾವಿರಾರು ವರ್ಷಗಳಿಂದ ದಾಖಲೆಗಳಲ್ಲಿ ಉಳಿದುಬಂದು ದಾಖಲೆಗಳಾಗಿರುವುದು ಬಹು ಆಶ್ಚರ್ಯವಾದರೂ ವಾಸ್ತವವಾಗಿದೆ. ಜನಪದ ವಾದ್ಯಗಳು ಇದಕ್ಕೊಂದು ಅತ್ಯುತ್ತಮ ನಿದರ್ಶನ. ಪಳೆಯುಳಿಕೆಗಳಿಂದ, ಪ್ರಾಚೀನ ಚಿತ್ರ, ಶಿಲ್ಪಗಳಿಂದ ನಮ್ಮ ಹಲವಾರು ವಾದ್ಯಗಳ ಇತಿಹಾಸವನ್ನು ಅರಿಯಬಹುದೆಂಬುದು ಬಹು ಕುತೂಹಲಕರ ಸಂಗತಿ.

ಪ್ರಾಚ್ಯ ವಾದ್ಯ ವಿಜ್ಞಾನ

ಕುಣಿತ ಮಾನವನ ಆದಿಮ ಅಭಿವ್ಯಕ್ತಿಗಳಲ್ಲಿ ಒಂದು ಎಂಬುದನ್ನು ಅತಿ ಪ್ರಾಚೀನ ಕಾಲದ ಗುಹಾಚಿತ್ರಗಳೇ ಸಾಬೀತು ಪಡಿಸುತ್ತವೆ. ಕುಣಿತ ಇದ್ದ ಮೇಲೆ ಹಾಡೂ ಇದ್ದಿರಬಹುದು. ಹಾಡು ('ಸಾಹಿತ್ಯ') ಇಲ್ಲವಾದರೂ 'ನಾದ', ಅದಕ್ಕೆ ಪೂರಕವಾಗಿ ವಾದ್ಯ ಪರಿಕರವಂತೂ ಇರಲೇಬೇಕು. ಹಾಗಿದ್ದರೆ, ಇತಿಹಾಸ ಪೂರ್ವಕಾಲದ ಮನುಷ್ಯ ಯಾವ ರೀತಿ ವಾದ್ಯ ಬಳಸುತ್ತಿದ್ದ ? ಕಾಲಕಾಲಕ್ಕೆ ಅವುಗಳ ಆಕಾರ, ರಚನೆ, ನುಡಿಸುವ ಕ್ರಮ, ಸಂದರ್ಭಗಳಲ್ಲಿ ಆಗಿರುವ

ಬದಲಾವಣೆಗಳೇನು ? - ಈ ರೀತಿಯ ಪ್ರಶ್ನೆಗಳು ನಮಗೆ ಎದಿರಾಗುತ್ತವೆ. ಇದಕ್ಕೆ ಉತ್ತರ ಕಂಡುಕೊಳ್ಳಲು ನಾವು ಪುರಾತತ್ವ ಶೋಧಗಳ ನೆರವು ಪಡೆಯಬೇಕಾಗುತ್ತದೆ. ಪುರಾಣ ಕಾವ್ಯಗಳಲ್ಲಿ ಕೆಲವೊಮ್ಮೆ ವಾದ್ಯಗಳ ಉಲ್ಲೇಖವಿರುತ್ತದೆಯಾದರೂ ಅಲ್ಲಿ ಅವುಗಳ ಸ್ವರೂಪ, ನುಡಿಸುವ ಕ್ರಮ ಇತ್ಯಾದಿ ಗೊತ್ತಾಗುವುದಿಲ್ಲ. ಸಂಗೀತಶಾಸ್ತ್ರ ಕೃತಿಗಳಲ್ಲಿ ಕೆಲ ವಿವರಗಳಿದ್ದರೂ ವಾದ್ಯವನ್ನು ಕಣ್ಣಿನಿಂದ ನೋಡಿದಷ್ಟು ವಿವರ ಮನದಟ್ಟಾಗದಿರಬಹುದು. 'ಪಳೆಯುಳಿಕೆ'ಗಳಲ್ಲಿ ವಾದ್ಯ ಪೂರ್ಣರೂಪದಲ್ಲಿರಲಾರದು. ಜೊತೆಗೆ, ಅದರ ನುಡಿಸುವ ಕ್ರಮವೂ ತಿಳಿಯಲಾರದು. ಆದ್ದರಿಂದ ಪ್ರಾಚೀನ ಶಿಲ್ಪ ಹಾಗೂ ಚಿತ್ರಗಳಲ್ಲಿನ ವಿವರಗಳು ಆಯಾ ಕಾಲದ, ಆಯಾ ವಾದ್ಯಗಳ, ಬಹುಮಟ್ಟಿಗೆ ಯದ್ವತ್ ಚಿತ್ರಣಗಳಾಗಿದ್ದು, ಅವುಗಳ ರಚನೆ, ನುಡಿಸುವ ಕ್ರಮ, ಸಂದರ್ಭ ಅಲ್ಲದೆ, ವಾದಕರ ಬಗೆಗೂ ಹಲವು ವಿಶ್ವಸನೀಯ ಮಾಹಿತಿ ದೊರಕಿಸಿ ಕೊಡುತ್ತವೆ. ಕಣ್ಣಿಗೆ ಸ್ಪಷ್ಟವಾಗಿ ಕಾಣುವ ಈ ಶಿಲ್ಪ - ಚಿತ್ರಗಳು ಹೆಸರೂ ಗೊತ್ತಿರದ ಎಷ್ಟೋ ಪಾಶ್ಚಾತ್ಯ- ಪ್ರಾಚೀನ ವಾದ್ಯಗಳನ್ನು ತೌಲನಿಕವಾಗಿ ಅಭ್ಯಾಸ ಮಾಡಲು ಉತ್ತಮ ಆಕಾರಗಳಾಗುತ್ತವೆ. ಹೀಗಿದ್ದೂ, ಕನ್ನಡದಲ್ಲಿ ಈ ರೀತಿಯ ಅಭ್ಯಾಸಗಳು ವಿಶೇಷವಾಗಿ ಆಗಿಲ್ಲದಿರುವುದು ವಿಷಾದನೀಯ. ಪುರಾತತ್ವ ಶಾಸ್ತ್ರದ ಹಿನ್ನೆಲೆಯಲ್ಲಿ ವಾದ್ಯಗಳನ್ನು ಅಭ್ಯಸಿಸುವ ಪ್ರಯತ್ನ ಈಚೆಗೆ ಪಾಶ್ಚಾತ್ಯರಲ್ಲಿ ಪ್ರಾರಂಭವಾಗಿದ್ದು, ಆ ಶಾಖೆಯನ್ನು ಅವರು Archaeo organology ಎಂದು ಕರೆಯುತ್ತಾರೆ. ನಾವು ಕನ್ನಡದಲ್ಲಿ ಇದನ್ನು 'ಪ್ರಾಚ್ಯ ವಾದ್ಯ ವಿಜ್ಞಾನ' ಎಂದು ಹೆಸರಿಸಬಹುದಾಗಿದೆ.

ವಾದ್ಯಗಳ ಹುಟ್ಟಿಗೂ ಆದಿಮಾನವನ ಬದುಕಿಗೂ ನಿಕಟ ಸಂಬಂಧವಿದೆ. ಮುಖ್ಯವಾಗಿ ಇದು ಎರಡು ತೆರನಾದುದು : ೧) ಅವನ ವೃತ್ತಿ ೨) ಅವನ ನಂಬಿಕೆ.

ಅಧ್ಯಯನಕಾರರು ಊಹಿಸಿರುವಂತೆ, ಅಂದಿನ ಮಾನವ ತಾನು ಬೇಟೆಯಾಡಿದ ಪ್ರಾಣಿಗಳ ಮಾಂಸ ತಿಂದು ತೊಗಲನ್ನು ಹೊದ್ದ ಹಾಗೆ,

ಹದಮಾಡಿದ ಚರ್ಮದಿಂದ ನಾದ ಹೊರಡಿಸಬಹುದೆಂಬುದನ್ನೂ ಕಂಡುಕೊಂಡ. ಚರ್ಮ ವಾದ್ಯಗಳ ಹುಟ್ಟಿಗೆ ಇದೇ ಮೂಲವಾಯಿತು. ಬೇಟೆಯಾಡಲು ಆತ ಬಳಸುತ್ತಿದ್ದ ಬಿಲ್ಲಿಗೆ ಕಟ್ಟಿದ್ದ ನಾರು ಅಥವಾ ಪ್ರಾಣಿಯ ಕರುಳನ್ನು ಎಳೆದು ಬಿಟ್ಟಾಗ ಉಂಟಾಗುತ್ತಿದ್ದ ನಾದ ಮುಂದೆ ತಂತೀ ವಾದ್ಯಗಳಿಗೆ ಪ್ರಚೋದನೆ ನೀಡಿತು. ಇನ್ನೆಷ್ಟೋ ಬಗೆಯ ವಾದ್ಯಗಳಿಗೆ ನಿಸರ್ಗವೇ ಸ್ಫೂರ್ತಿಯಾಯಿತು.

ಆದಿಮಾನವನಿಗೆ ದುಷ್ಟ ಶಕ್ತಿಗಳ ಬಗೆಗೆ ಬಹಳ ಭಯವಿತ್ತು. ವಿಚಿತ್ರ ಹಾಗೂ ಕರ್ಕಶವಾದ ಶಬ್ದಗಳಿಂದ ಆ ಪೀಡೆಗಳನ್ನು ದೂರ ಓಡಿಸಬಹುದೆಂಬ ನಂಬಿಕೆಯೂ ಆತನಿಗಿತ್ತು. ಪುರಾತತ್ವ ಶೋಧಗಳಲ್ಲಿ ಗಿಲಕಿ ಮತ್ತಿತರ ಕೆಲ ಅಲುಗಾಡಿಸುವ, ಬಡಿಯುವ ಸಾಧನಗಳು ದೊರೆತಿದ್ದು, ಇತಿಹಾಸ ಪೂರ್ವಕಾಲದ ಮಾನವ ರೋಗಿಯಿಂದ ದುಷ್ಟ ಶಕ್ತಿಗಳನ್ನು ದೂರವಿರಿಸಲು ಅಗತ್ಯವಾದ ಶಬ್ದ ಮಾಡಲು ಅವುಗಳನ್ನು ಬಳಸುತ್ತಿದ್ದಂತೆ ಕಾಣುತ್ತದೆ. ಮುಂದೆ, ಅವುಗಳನ್ನು ಆತ ಮಕ್ಕಳ ಆಟಿಕೆಯಾಗಿಯೂ ಉಪಯೋಗಿಸಿದ್ದಿರಬೇಕು. ಏಕೆಂದರೆ ರಷ್ಯಾ, ಮಾಲ್ಡೀವಿಯಾ ಮುಂತಾದೆಡೆ ಕ್ರಿ. ಪೂ. ೨ನೇ ಮಿಲಿನಿಯಂಗೆ (ಸಹಸ್ರಮಾನ) ಸೇರಿದ ಕೆಲ ಮಕ್ಕಳ ಗೋರಿಗಳಲ್ಲಿ ಬಣ್ಣ ಹಚ್ಚಿದ ಜೇಡಿ ಮಣ್ಣಿನ ಗಿಲಕಿಗಳು ಕಂಡುಬಂದಿವೆ. ಹಾಗೆಯೇ ಪೂರ್ವ ಶಿಲಾಯುಗದ ಮಾನವನಿಗೆ ನಾದದ ಬಗೆಗೆ ಸಾಕಷ್ಟು ಅರಿವಿತ್ತೆಂಬುದನ್ನು ಮೂಳೆಗಳಲ್ಲಿ ಮಾಡಿದ್ದ ಆ ಕಾಲದ ಕೆಲ ಪೀಪಿಗಳೂ, ಕೊಳಲುಗಳೂ ಸಾಕ್ಷಿ ಹೇಳುತ್ತವೆ.

ಭಾರತದ ಮಟ್ಟಿಗೇ ಹೇಳುವುದಾದರೂ, ಕ್ರಿ. ಪೂ. ೩ನೇ ಮಿಲಿನಿಯಂನಷ್ಟು ಹಿಂದೆಯೇ ಭಾರತೀಯರಿಗೆ ಸಂಗೀತ ವಾದ್ಯಗಳ ಪರಿಚಯವಿತ್ತು. ಆರ್ಯರು ಭಾರತಕ್ಕೆ ಬರುವ ಮೊದಲೇ (ಕ್ರಿ. ಪೂ. ೧೫೦೦ - ೧೨೦೦) ಭಾರತದಲ್ಲಿ ಕೊಳಲು ಇತ್ತೆಂಬುದನ್ನು ಪುರಾತತ್ವ ಶೋಧಗಳು ಸಾಬೀತು ಪಡಿಸಿವೆ. ದ್ರಾವಿಡರು ಬಹು ಹಿಂದೆಯೇ ಈಜಿಪ್ಟ್ ಮತ್ತು ಮೆಸಪಟೋಮಿಯಾ ಜತೆ ವ್ಯಾಪಾರ ಸಂಬಂಧ ಇಟ್ಟುಕೊಂಡಿದ್ದರು ಎಂಬುದನ್ನು ಗಮನಿಸಿದಾಗ ವಾದ್ಯಗಳ ಮೇಲೆ ಆಗಿರುವ ಪರಸ್ಪರ ಪ್ರಭಾವದ ಅರಿವೂ

ಆಗುತ್ತದೆ. ಭಾರತದಲ್ಲಿನ ಕೆಲ ವಾದ್ಯಗಳನ್ನು ಹೋಲುವ ವಾದ್ಯಗಳು ಏಷ್ಯಾದ ಇತರ ದೇಶಗಳಲ್ಲೂ ಇವೆ (ಉದಾ. ಗೆ - ನಮ್ಮಲ್ಲಿನ 'ಜಂಝಾ' (ದೊಡ್ಡತಾಳ) ಗಳನ್ನು ಆಕಾರ ಮತ್ತು ನಾದದಲ್ಲಿ ಹೋಲುವ ತಾಳಗಳು ಟರ್ಕಿಯಲ್ಲೂ ಇವೆ). ಗ್ರೀಕರ ಪ್ರಭಾವದಿಂದ ಕ್ರಿ. ಶ. ೨ನೇ ಶತಮಾನದ ಹೊತ್ತಿಗೇ ಸ್ತೂಪ ಮೊದಲಾದೆಡೆ ಉಬ್ಬು ಶಿಲ್ಪಗಳಲ್ಲಿ ಆ ಕಾಲದ ನೃತ್ಯ, ವಾದ್ಯ - ವಾದಕರನ್ನು ಚಿತ್ರಿಸುವ ಹವ್ಯಾಸ ಭಾರತದಲ್ಲೂ ರೂಢಿಗೆ ಬಂತು. ಮುಂದೆ, ಭಾರತದ ವಿವಿಧೆಡೆ, ಬೇರೆ ಬೇರೆ ಪ್ರಸ್ಥಾನಗಳಲ್ಲಿ ಹುಟ್ಟಿಕೊಂಡ ಗುಡಿಗೋಪುರಗಳ ಶಿಲ್ಪಗಳಲ್ಲೂ, ಕಲಾವಿದರ ಚಿಕಣಿ ಚಿತ್ರಗಳಲ್ಲೂ ಸಾಂದರ್ಭಿಕವಾಗಿ ವಾದ್ಯ-ವಾದಕರನ್ನು ದಾಖಲಿಸುವ ಪ್ರವೃತ್ತಿ ವಿಶೇಷವಾಗಿ ನಡೆದಿರುವುದಕ್ಕೆ ವಿಪುಲ ಸಾಕ್ಷ್ಯಗಳಿವೆ. ಈ ಎಲ್ಲದರ ಹಿನ್ನೆಲೆಯಲ್ಲಿ ಕೆಲ ವಾದ್ಯಗಳನ್ನು ಈ ಮುಂದೆ ಪ್ರಾತಿನಿಧಿಕವಾಗಿ ಪರಿಚಯಿಸಿದೆ :

ಕಿನ್ನರಿ

ಅತಿ ಪ್ರಾಚೀನ ವಾದ್ಯಗಳಲ್ಲಿ ಒದು. 'ಕರ್ನಾಟಕದ ಈ ವಾದ್ಯ ಬೈಬಲಿನಲ್ಲಿ ವರ್ಣಿತವಾಗಿರುವ ಕಿನ್ನೋರ್ ವಾದ್ಯವನ್ನು ಹೆಸರು ಹಾಗೂ ಸ್ವರೂಪದಲ್ಲಿ ಬಹಳಷ್ಟು ಹೋಲುವುದು' ಅದರ ಪ್ರಸರಣ ಗುಣವನ್ನು ಹೇಳುತ್ತದೆ. 'ಈ ಎರಡೂ ಒಂದೇ ಆರ್ಯ ಮೂಲದಿಂದ ಹುಟ್ಟಿರಬಹು'ದೆಂಬ ಅಭಿಪ್ರಾಯವೂ ಇದೆ. ವೇದಗಳಲ್ಲಿ ಇದನ್ನು 'ಕಿನ್ನರಿ ವೀಣೆ' ಎಂದು ಕರೆದಿದೆ. ಕಿನ್ನರಿಗೂ ಪ್ರಾಚೀನ 'ಕಿನ್ನರಿ ವೀಣೆ'ಗೂ ಬಹಳಷ್ಟು ಹೋಲಿಕೆ ಇದೆ. ದೊಡ್ಡ ಗದ್ದವಳ್ಳಿಯ ಲಕ್ಷ್ಮೀದೇವಸ್ಥಾನದ ಛಾವಣಿಯಲ್ಲಿ ಕಿನ್ನರಿಯ ಚಿತ್ರವಿದ್ದು, ವಾದಕ ಎಡಭುಜದ ಕಡೆಯಿಂದ ಬಲ ಪಕ್ಕೆಯವರೆಗೆ ಹಿಡಿದು, ಎರಡೂ ಕೈಗಳಿಂದ ನುಡಿಸುತ್ತಿರುವುದು ; ದಂಡದ ಮೇಲುಭಾಗದಲ್ಲಿ ಹಿಂಬದಿಗೆ ಬಂದು 'ಬುರುಡೆ' ಇರುವುದು ಕಾಣುತ್ತದೆ. ಸೋಮನಾಥಪುರದ ಕೇಶವ ದೇವಾಲಯದಲ್ಲಿ ಕಾಣುವ ಕಿನ್ನರಿ ಚಿತ್ರಗಳಲ್ಲಿ ಒಂದಕ್ಕೆ ಸೋರೆ ಬುರುಡೆಗೆ ಬದಲು ಅಗಲವಾದ ತಟ್ಟೆಯಂತಹ ಸಾಧನವಿದೆ. ಕ್ರಿ. ಶ. ೧೬೭೦-೮೦ ಕಾಲದ ದಖ್ಖನಿ ಶೈಲಿಯ

ಚಿಕಣಿ ಚಿತ್ರಗಳಲ್ಲೂ 'ಕಿನ್ನರಿ'ಗಳಿವೆ. ಒಂದು ಚಿತ್ರದಲ್ಲಿ ರಾಜಕುವರನೊಬ್ಬ ಉದ್ಯಾನದಲ್ಲಿ ಕುಳಿತಿದ್ದಾನೆ. ಸುತ್ತಲೂ ಹೆಂಗಳೆಯರು ; ಹಿಂದೆ ನಿಂತವಳೊಬ್ಬಳು ಕಿನ್ನರಿ ನುಡಿಸುತ್ತಿರುವ ಕ್ರಮ ಈಗಿನಂತೆಯೇ ಇದೆ. ಅದಕ್ಕೂ ಎರಡು 'ಬುರುಡೆ'ಗಳಿವೆ. ದಂಡದ ಉದ್ದಕ್ಕೂ ಸಣ್ಣ-ದೊಡ್ಡ ಅಳತೆಯ ಹಲವು 'ಮೆಟ್ಟಲು'ಗಳಿವೆ. ಅದರ ಮೇಲೆ ಹಾದುಹೋಗಿರುವ ತಂತಿಗಳನ್ನು ಬಿಗಿ ಮಾಡಲು ತುದಿಯಲ್ಲಿ 'ಬಿರಡೆ'ಗಳೂ ಇವೆ ! ಕ್ರಿ. ಶ. ೭೫೦ ರ ಕಾಲದ ಉತ್ತರ ದಖ್ಖನಿ ಶೈಲಿಯ ವರ್ಣ ಚಿತ್ರಗಳಲ್ಲೂ ಇದೇ ರೀತಿ ದಂಡ, ತಂತಿ, ಮೆಟ್ಟಲುಗಳೂ, ಅಲಂಕೃತ ಬುಗುರಿಯಾಕಾರದ 'ಬುರುಡೆ'ಗಳೂ ಇರುವುದು ಸಾವಿರ ವರುಷಗಳಷ್ಟು ಹಿಂದಿನಿಂದಲೂ ಈ ವಾದ್ಯದ ರಚನೆ ಯಾವ ಸ್ವರೂಪ ಉಳಿಸಿಕೊಂಡಿದೆ ಎಂಬುದನ್ನು ಸೂಚಿಸುತ್ತದೆ. ಆದರೂ, ಕೆಲವರ ಪ್ರಕಾರ 'ಕಿನ್ನರಿ' ಮೊದಲು 'ಸಾರಿ' (ಮೆಟ್ಟಿಲು)ಗಳಿಲ್ಲದ 'ನಿಸ್ಸಾರಿ'ಯಾಗಿತ್ತು. ನಂತರ, 'ಸಾರಿ' ಪಡೆದು, ಪರಿಷ್ಕಾರಗೊಂಡು, ಸಂಗೀತ ಕಛೇರಿಗಳಲ್ಲಿ ಪಕ್ಕ ವಾದ್ಯವಾಗಿಯೂ ಬಳಕೆಯಾಗಿ ಕ್ರಮೇಣ ಆದ ಪ್ರಭಾವಗಳಿಂದ ಮತ್ತೆ ಸಾರಿ ಕಳೆದುಕೊಂಡು ಕೇವಲ ಜನಪದರ ವಾದ್ಯವಾಗಿ ಉಳಿದಿದೆ. ಅಂತೂ, ಹಿಂದಿದ್ದ ಕಿನ್ನರಿಗಳ ವರ್ಣ- ಬೆಡಗು ಈಗ ಕಡಿಮೆಯಾಗಿದೆ ಎಂಬುದೇನೋ ನಿಜ. ಆದರೂ, ಸಾರಿ ಇರುವ ಕಿನ್ನರಿಗಳು ನಮ್ಮ ಕಿನ್ನರಿ ಜೋಗಿಗಳು ಕೆಲವರಲ್ಲಿ ಈಗಲೂ ಇವೆ.

ವೀಣೆ

ಕಿನ್ನರಿಯ ಮುಂದುವರೆದ ರೂಪವೇ 'ವೀಣೆ'. ಈ ಎರಡಕ್ಕೂ ಎಷ್ಟೊಂದು ಹೋಲಿಕೆ ಇದೆ ಎಂದರೆ, ಎಷ್ಟೋ ಸಂದರ್ಭಗಳಲ್ಲಿ ಅಧ್ಯಯನಕಾರರು ಕಿನ್ನರಿಯನ್ನು 'ವೀಣೆ' ಎಂದೇ ಕರೆದಂತೆ ಕಾಣುತ್ತದೆ. ಅಷ್ಟಲ್ಲದೆ, ಪ್ರಾಚೀನ ವೀಣೆ ಹಾಗೂ ಪಾಶ್ಚಾತ್ಯ ವಾದ್ಯಗಳಾದ 'ಹಾರ್ಪ್' ವಾದ್ಯಗಳಿಗೂ ಹೋಲಿಕೆ ಇದೆ. ಕ್ರಿ. ಪೂ. ೪೦೦೦ದಷ್ಟು ಹಳತಾದ ಈಜಿಪ್ಟಿನ ಬಿಲ್ಲಿನಾಕೃತಿಯ ಹಾರ್ಪ್‌ವಾದ್ಯ ಏಷ್ಯಾ ರಾಷ್ಟ್ರಗಳ ಬಿಲ್ಲಿನಾಕಾರದ ವೀಣೆಯನ್ನೇ ಹೋಲುತ್ತದೆ ಎಂಬುದು ಇದರ ಪ್ರಾಚೀನತೆ ಹಾಗೂ ಪ್ರಸರಣವನ್ನು ಹೇಳುತ್ತದೆ.

ಮೊದಲು ಪ್ರಾಣಿಯ ಕರುಳೇ ವೀಣೆಯ 'ತಂತಿ' ಆಗಿತ್ತು. ನಂತರ, ಮಾಧ್ಯಮದ ಜೊತೆಗೆ ತಂತಿಗಳ ಸಂಖ್ಯೆಯೂ ಬದಲಾಗಿ ನಾದ ವೈವಿಧ್ಯಕ್ಕೂ ಕಾರಣವಾಯಿತು. 'ರಾಮಾಯಣ' ದಲ್ಲಿ (ಕ್ರಿ. ಪೂ. ೪೦೦) 'ಚಿತ್ರ' (ಏಳು ತಂತಿ) ಹಾಗೂ 'ವಿಪಂಚಿ' (೯ ತಂತಿ) ವೀಣೆಗಳ ಪ್ರಸ್ತಾಪವಿದೆ.

'ವೀಣಾ' - ಎಂಬುದು 'ವಾಣ' ಎಂಬ ಶಬ್ದದಿಂದ ಬಂದಿದ್ದು, ಅದಕ್ಕೆ 'ಶಬ್ದ ಮಾಡು' ಎಂಬ ಅರ್ಥವಿದೆ. ಆದಿಮಾನವ ಬೇಟೆಗೆ ಬಳಸುತ್ತಿದ್ದ ಬಿಲ್ಲಿನ ಹೆದೆಯನ್ನು ಎಳೆದು, ಬಾಣ ಬಿಟ್ಟಾಗ ಉಂಟಾಗುತ್ತಿದ್ದ ಹೆದೆಯ ಕಂಪನ ನಾದ ಎದೆ ನಡುಗಿಸುವಂತಿದ್ದರೂ, ಬೆರಳುಗಳಿಂದ ಮೃದುವಾಗಿ ಮಿಡಿದಾಗ ಉಂಟಾಗುತ್ತಿದ್ದ ಹಿತವಾದ ನಾದದಿಂದ ಆಕರ್ಷಿತನಾದ ಮನುಷ್ಯ ಬಿಲ್ಲಿನ ಆಕಾರ, ರಚನೆಯನ್ನೇ ಹೋಲುವ ವಾದ್ಯವೊಂದನ್ನು ರೂಪಿಸಿಕೊಂಡ. ಅದು ಪಾಶ್ಚಾತ್ಯದಲ್ಲಿ ಈಗಲೂ ಇರುವ 'ಲೈರ್' ಅಥವಾ 'ಹಾರ್ಪ್' ವಾದ್ಯ ಹೋಲುತ್ತಿತ್ತು. ಭಾರತೀಯರ ವೀಣೆಯೂ ಇದೇ ಬಿಲ್ಲಿನ ಮೂಲದಿಂದಲೇ ಹುಟ್ಟಿಕೊಂಡದ್ದು.

ಪ್ರಾಚೀನ ಶಿಲ್ಪ, ಚಿತ್ರಗಳಲ್ಲಿ ವಿವಿಧ ಮಾದರಿ ವೀಣೆಗಳ ಚಿತ್ರಣವಿದೆ. ವಾದಕ ಬಲಗೈ ಬೆರಳುಗಳಿಂದ ಅಥವಾ 'ಕೋಣ'ದಿಂದ ತಂತಿ ಮೀಟುತ್ತಾ ಎಡಗೈಯಿಂದ ತಂತಿಗಳ 'ಬಿರಡೆ'ಬಿಗಿ ಮಾಡುತ್ತಿರುವ ಚಿತ್ರಗಳೂ ಇವೆ. 'ದಂಡಿ' ಬಿಗಿ ಮಾಡುತ್ತಿರುವ ಚಿತ್ರಗಳೂ ಇವೆ. 'ದಂಡಿ' ಮರ ಅಥವಾ ಬಿದಿರಿನದಾಗಿದ್ದು, ಅದರ ಮೇಲಿನ ಮರ ಅಥವಾ ಕೊಂಬಿನ 'ಮೇರು' (ಸಾರಿ) ಗಳ ಮೇಲೆ ತಂತಿ ಹಾದು ಹೋಗುವಂತಿದ್ದವು. ನಾದ ವರ್ಧನಕ್ಕೆ ಸೋರೆ ಬುರುಡೆಗಳನ್ನು ಉಪಯೋಗಿಸುತ್ತಿದ್ದ ಅಂಶವನ್ನು ವೇದಗಳೂ ತಿಳಿಸುತ್ತವೆ. ಇಂದು ಅಸ್ತಿತ್ವದಲ್ಲಿರುವ ಕೆಲವು ವಿಶಿಷ್ಟವಾದ 'ವೀಣೆ'ಗಳ ಚಿತ್ರಣ ಬೇಲೂರಿನ ಶಿಲ್ಪಗಳಲ್ಲಿ ದಾಖಲಾಗಿದೆ. ಇಷ್ಟಲ್ಲದೆ, ತಂಬೂರಿ, ಸಾರಂಗಿ, ಗೋಟು ವಾದ್ಯದಂತಹ ತಂತಿ ವಾದ್ಯಗಳೂ ನಮ್ಮ ಪ್ರಾಚೀನ ಶಿಲ್ಪ-ಚಿತ್ರಣಗಳಲ್ಲಿ ಕಾಣ ಬರುತ್ತವೆ.

ವೀಣೆಗಳಲ್ಲಿ ೧) ಕಮಾನಾಕೃತಿ (bow-shaped) ಅಥವಾ ಹಾರ್ಪ್ ಮಾದರಿ ವೀಣೆ, ೨) ಗಿಟಾರ್ ಮಾದರಿ ವೀಣೆ (lute), ೩) ನೇರದಂಡ ಏಕಬುರುಡೆ ವೀಣೆ (Straight board Vina), ೪) ಲೈರಾ ಮೊದಲಾದ ಮಾದರಿಗಳು ನಮ್ಮ ಚಿತ್ರ - ಶಿಲ್ಪಗಳಲ್ಲಿ ಕಾಣಬರುತ್ತವೆ. ಹಾರ್ಪ್, ಗಿಟಾರ್ ಮಾದರಿಗಳ ಮೂಲಕ ಆ ಕಾಲಕ್ಕಾಗಲೇ ಭಾರತದೊಂದಿಗೆ ರೋಮ್‌ನ ಸಂಪರ್ಕ ಆಗಿದ್ದಿತ್ತೆಂಬುದು ಇದರಿಂದ ವೇದ್ಯವಾಗುತ್ತದೆ.

ಕಮಾನಾಕೃತಿ ವೀಣೆ : ಸಾಂಚಿಯ ಶಿಲ್ಪದಲ್ಲಿ 'ಮಾರನ ದಂಡು' ಸನ್ನಿವೇಶದಲ್ಲಿ ನೃತ್ಯಕ್ಕೆ ಸಹವಾದ್ಯವಾಗಿ ಈ ವಾದ್ಯ ಬಳಕೆಯಾಗಿದೆ. ಪುರುಷ ಅಥವಾ ಸ್ತ್ರೀ ತಮ್ಮ ಎಡ ಇಲ್ಲವೇ ಬಲ ಕೈ ಬೆರಳುಗಳಿಂದ ತಂತಿಗಳನ್ನು ಎಳೆದು ಅಥವಾ ಸಣ್ಣ ಕಡ್ಡಿಯೊಂದರಿಂದ (ಕೋಣ) ತಂತಿಗಳನ್ನು ಮೀಟಿ ನುಡಿಸುತ್ತಿರುವಂತೆ ಚಿತ್ರಿತವಾಗಿದೆ. ತಂತಿಗಳ ಸಂಖ್ಯೆ ಕೆಲವೆಡೆ ಐದು ಇದ್ದರೆ ಕೆಲವೆಡೆ ಏಳು ಕಂಡುಬರುತ್ತವೆ.

ಗಿಟಾರ್ ವೀಣೆ : ಸಾಂಚಿಯ ಸ್ತೂಪದ 'ಬುದ್ಧನ ಪುನರಾಗಮನ' ಸನ್ನಿವೇಶದಲ್ಲಿ ಒಂದೆಡೆ ಈ ವಾದ್ಯ ಚಿತ್ರಿತವಾಗಿದೆ. ವಾದಕ ತನ್ನ ಬಲಗೈ ಬೆರಳುಗಳಿಂದ ತಂತಿಗಳನ್ನು ಮೀಟುತ್ತಿದ್ದರೆ, ಎಡಗೈ ಬೆರಳುಗಳಿಂದ ಶೃತಿ ಸರಿ ಹೊಂದಿಸುತ್ತಿರುವಂತೆ ಕಂಡುಬರುತ್ತದೆ. ಈ ವಾದ್ಯದ 'ಕಂಠ' ನೇರವಾಗಿದೆ. ಪಿಯರ್ ಹಣ್ಣಿನ ಆಕಾರದ 'ಶೃತಿ ಬುರುಡೆ' (resonator) ಯೂ ಇದೆ. ಅಮರಾವತಿ, ಗಾಂಧಾರ ಹಾಗೂ ನಾಗಾರ್ಜುನ ಕೊಂಡದ ಶಿಲ್ಪಗಳಲ್ಲೂ ಈ ವಾದ್ಯದ ಚಿತ್ರಣವಿದೆ. ಆದರೆ, ತಂತಿ ಬಿಗಿಮಾಡುವ ಬಿರಡೆಗಳ ಸಂಖ್ಯೆಯಲ್ಲಿ ವೈವಿಧ್ಯವಿದೆ. ಅಜಂತಾದ ಭಿತ್ತಿ ಚಿತ್ರವೊಂದರಲ್ಲಿ ಇದೇ ಮಾದರಿ ವಾದ್ಯದ ಸ್ಪಷ್ಟ ಆಕೃತಿ ಇದೆ. ಒಂದರ ಪಕ್ಕದಲ್ಲೊಂದರಂತೆ ಹಲವು ತಂತಿಗಳು, ನೇರವಾದ ಕಂಠ ಹಾಗೂ ದುಂಡಾದ 'ಬುರುಡೆ'ಗಳು ಚೆನ್ನಾಗಿ ಕಂಡು ಬರುವುದಲ್ಲದೆ, ಅದನ್ನು ಬಹುಶ: ಮರದಿಂದ ಮಾಡಿರಬಹುದೆಂಬುದನ್ನು ಗುರುತಿಸಬಹುದಾಗಿದೆ.

ಈ ಎರಡೂ ವಾದ್ಯಗಳು ಇಂದಿಗೂ ನಮ್ಮಲ್ಲಿ 'ಹೊರಗಿನವು' ಎಂಬ ಭಾವನೆಯಲ್ಲೇ ಇದ್ದರೂ, ಅವು ಬಹು ಹಿಂದೆಯೇ ಬಂದು ನಮ್ಮೊಡನೆ ಸೇರಿರುವುದನ್ನು ಅರಿಯಲು ಅವುಗಳ ಆಕಾರ ಹಾಗೂ ನುಡಿಸುವ ಕ್ರಮವನ್ನು ಇಂದಿನ ವಿವರಗಳೊಂದಿಗೆ ಹೋಲಿಸುವ ಸಲುವಾಗಿಯೂ ಈ ಎಲ್ಲಾ ವಿವರಗಳು ಅಗತ್ಯವಾಗುತ್ತವೆ.

ಪ್ರಾಚೀನ ಉಲ್ಲೇಖಗಳಿರುವ ಇತರ ಕೆಲವು ವೀಣೆಗಳು ನಾನಾ ರೂಪಗಳಲ್ಲಿ ಕಂಡುಬಂದರೂ ಅವು ಮುಖ್ಯವಾಗಿ ಬಿದಿರು ಇಲ್ಲವೆ ಮರದ ಉದ್ದವಾದ, ದಂಡಿಯ ಎರಡೂ ತುದಿಗಳಿಗೆ ಬಿಗಿದ ಮರದ ಅಥವಾ ಕೊಂಬಿನ 'ಮೇರು'ಗಳ ಮೇಲೆ ಹಾದು ಹೋಗುವ ತಂತಿಗಳನ್ನು ಹೊಂದಿದ್ದವು. ನಾದವರ್ಧನಕ್ಕೆ ಸೋರೆಬುರುಡೆಗಳನ್ನು ಉಪಯೋಗಿಸುತ್ತಿದ್ದ ಅಂಶವನ್ನೂ ವೇದಗಳು ತಿಳಿಸುತ್ತವೆ.

ಅಬುಲ್‌ಫಜಲ್‌ನೆಂಬ ಪ್ರವಾಸಿ ವರ್ಣಿಸಿರುವ 'ಯಂತ್ರ'ಎಂಬ ಒಂದು ತಂತಿ ವಾದ್ಯ ಬಹುಮಟ್ಟಿಗೆ ಈ ಮೊದಲು ವಿವರಿಸಿದ 'ಕಿನ್ನರಿ ವೀಣೆ'ಯನ್ನೇ ಹೋಲುತ್ತದೆ.

ಬೇಲೂರು ಚೆನ್ನ ಕೇಶವ ದೇವಾಲಯದ ದಕ್ಷಿಣ ದ್ವಾರದ ಬಳಿ ಇರುವ ಶಿಲ್ಪದಲ್ಲಿ ಮದನಿಕೆಯೊಬ್ಬಳು ವೀಣೆಯೊಂದನ್ನು ಹಿಡಿದು ಶ್ರುತಿ ಮಾಡುತ್ತಿರುವ ಭಾವದಲ್ಲಿದ್ದಾಳೆ. ಈ 'ವೀಣೆ'ಗೆ ಮೇಲು ಹಂತದಲ್ಲಿ ಸುಮಾರು ೧೧ 'ಮೆಟ್ಟಿಲು'ಗಳಿದ್ದು ಮೇಲಕ್ಕೆ ಹೋದಂತೆ ಅವುಗಳ ಅಗಲ ಕಿರಿದಾಗಿದೆ. ದಂಡದ ಕೊನೆ ತುದಿಯಲ್ಲಿ ಒಂದು ನಕ್ಷತ್ರಾಕಾರದ ರಚನೆ ಇದೆ. ದಂಡದ ಎರಡೂ ಕೊನೆಗೆ ಒಂದೊಂದು ಬುರುಡೆಗಳೂ ಇವೆ. ಎಡಗೈಲಿ ಆಕೆ ಅದನ್ನು ಲಂಬವಾಗಿ ಹಿಡಿದಿದ್ದಾಳೆ. ಈ ಹಿಡಿದ ಬೆರಳುಗಳ ಭಾಗ ಹಾಳಾಗಿದ್ದು ಉಳಿದ ವಿವರ ಅಸ್ಪಷ್ಟವಾಗಿದೆ.

ಬೇಲೂರಿನ ಇನ್ನೊಬ್ಬ ಶಿಲಾ ಬಾಲಿಕೆ ತನ್ನ ಎಡಗೈನಿಂದ ವಾದ್ಯ ಹಿಡಿದು

ಬೆರಳುಗಳಿಂದ ತಂತಿ ಮೀಟುತ್ತಾ ಬಲಗೈನ 'ಕೋಣ' (ಕೋಲು)ದಿಂದ ತಂತಿಗಳನ್ನು ಬಡಿಯುತ್ತಾ ಒಂದು 'ವೀಣೆ'ಯಂತಹ ವಾದ್ಯವನ್ನು ನುಡಿಸುತ್ತಿದ್ದಾಳೆ. ಇದನ್ನು ನಾಗವೀಣೆ ಎಂದು ಗುರುತಿಸಲಾಗಿದೆ. ಆಧುನಿಕ ಕಾಲದಲ್ಲಿ ಈ ವಾದ್ಯ ಬಳಕೆಯಲಿಲ್ಲ (ಆದರೆ, ಸಣ್ಣ ಸರಳಿನಿಂದ ತಂತಿ ಬಡಿದು ಏಕನಾದದಿಂದ ನಾದ ಹೊರಡಿಸುತ್ತಾ ಹಾಡುವ ಪರಿಪಾಠ ಈಗಲೂ ಕೆಲವರಲ್ಲಿದೆ). ಇಂತಹದ್ದೇ ಇನ್ನೊಂದು ಅಪರೂಪದ ವಾದ್ಯ ಹಳೇ ಬೀಡಿನ ಶಿಲ್ಪದಲ್ಲಿ ದಾಖಲಾಗಿದೆ. ಇದರ ದಂಡಿಯ ಕೆಳಭಾಗ ಅಗಲ ಹಾಗೂ ದಪ್ಪವಾಗಿದ್ದು, ಮೇಲಕ್ಕೆ ಹೋದಂತೆಲ್ಲಾ ಕಿರಿದಾಗಿ, ಕಂಠ (ತುದಿ) ಡೊಂಕಾಗಿ ಬಾಗಿದೆ. ಇದರ ಮೇಲೆ ಉದ್ದಕ್ಕೂ ಅಸಂಖ್ಯ ಗೆರೆಗಳಿದ್ದು ಅವು 'ವೀಣೆ'ಯ ಮೆಟ್ಟಲುಗಳನ್ನು ಸೂಚಿಸುತ್ತವೆ. ದಂಡಿಯ ತಳಭಾಗದಲ್ಲಿ ಒಂದು ಬಲವಾದ ಶ್ರುತಿ ವರ್ಧಕ ಸಾಧನ (resonator)ವಿದೆ. ಮತ್ತು, ಈ ವಾದ್ಯವನ್ನು ಉದ್ದವಾದ ಕಮಾನಿನಿಂದ (bow) ನುಡಿಸುತ್ತಿರುವಂತಿದೆ. ಆದರೆ ಇದಕ್ಕೆ 'ಬಿರಡೆ'ಗಳಿಲ್ಲ. ಇಲ್ಲಿ ಬಿಟ್ಟು ಈ ವಾದ್ಯ ಬೇರೆಲ್ಲೂ ಕಂಡುಬರುವುದಿಲ್ಲ ಎಂಬುದು ಕುತೂಹಲದ ಅಂಶವಾಗಿದೆ.

ಸಾಮಾನ್ಯವಾಗಿ ವೀಣೆ ಎಂದರೆ ಸರಸ್ವತಿಯ ನೆನಪು ಬರುತ್ತದೆ. ಆದರೆ, ದೊಡ್ಡಗದ್ದವಳ್ಳಿಯ ಲಕ್ಷ್ಮೀದೇವಿ ದೇವಾಲಯದ ಛಾವಣಿಯಲ್ಲಿನ ಶಿಲ್ಪದಲ್ಲಿ ಶಿವ ನೃತ್ಯ ಭಂಗಿಯಲ್ಲಿ, ವೀಣೆ ಹಿಡಿದು ನುಡಿಸುತ್ತಿರುವುದು ಅಪರೂಪದ್ದಾಗಿದೆ.

ಕಿನ್ನರಿ ವೀಣೆಗಳೇ ಅಲ್ಲದೇ, ತಂಬೂರಿ, ಸಾರಂಗಿ, ಗೋಟುವಾದ್ಯದಂತಹ ವಾದ್ಯಗಳೂ ವಿವಿಧ ಶಿಲ್ಪಗಳಲ್ಲಿ ಕಂಡುಬರುತ್ತವೆ. ತಂಬೂರಿ ಹೋಲುವ ವಾದ್ಯ ಪರ್ಷಿಯಾದಲ್ಲೂ ಉಂಟು.

ಕೊಳಲು

ಮೂಳೆಗಳಲ್ಲಿ ರಂಧ್ರ ಕೊರೆದು ಮಾಡಿದ್ದ ಸರಳವಾದ ಪೀಪಿಗಳು (Whistles), ಕೊಳಲುಗಳು ದೊರೆತಿದ್ದು, ಅವು ಪೂರ್ವ ಶಿಲಾಯುಗದ

ಮಾನವನಿಗೆ ನಾದದ ಬಗೆಗಿದ್ದ ಅರಿವನ್ನು ಸೂಚಿಸುತ್ತವೆ. ಪೂರ್ವ ಯೂರೋಪ್‌ನ ಹಲವು ಪುರಾತತ್ವ ಶೋಧಗಳಲ್ಲಿ ದೊರೆತ ಸಾಕ್ಷ್ಯಗಳಿಂದ ಆಗಿನ ಮನುಷ್ಯ ಕೊಳಲು ಪ್ರಿಯನಾಗಿದ್ದ ಎಂಬುದು ಸಾಬೀತಾಗುತ್ತದೆ.

ದಂತದ ಕೊಳಲು ಕೊಳಲನ್ನು ಪ್ರಾಣಿಯ ದಂತದಿಂದಲೂ ಮಾಡುತ್ತಿದ್ದರೆಂಬುದು ಹೊಸ ಸಂಶೋಧನೆಯಾಗಿದೆ. ಬೃಹತ್ ಗಾತ್ರದ ಪ್ರಾಣಿಯ ದಂತದಿಂದ ನಿರ್ಮಿಸಿದ ಕೊಳಲನ್ನು ಜರ್ಮನಿಯ ಪ್ರಾಚ್ಯವಸ್ತು ಸಂಶೋಧಕರು ಸಂಶೋಧನೆ ಮಾಡಿದ್ದು ಅದು ಸು. ೩೦,೦೦೦ ವರ್ಷಗಳಷ್ಟು ಪುರಾತನದ್ದೆಂದು ಹೇಳಿದ್ದಾರೆ, ದಕ್ಷಿಣ ಜರ್ಮನಿಯ ಸ್ವಾಬಿಯನ್ ಪರ್ವತ ಶ್ರೇಣಿಯಲ್ಲಿ ದೊರೆತಿರುವ ಈ ಕೊಳಲು ೧೮.೭ ಸೆಂಟಿ ಮೀಟರ್ (೭.೪ ಇಂಚು) ಉದ್ದ ಇದ್ದು ಅದಕ್ಕೆ ಕೇವಲ ಮೂರು ರಂಧ್ರಗಳಿವೆ. ದಶಕದ ಹಿಂದೆ ಇದೇ ಪ್ರದೇಶದಲ್ಲಿ ಹಂಸದ ಎಲುಬಿನಿಂದ ಮಾಡಿದ ಕೊಳಲೂ ದೊರಕಿತ್ತಂತೆ. ಈ ಮಾದರಿಗಳನ್ನು ಗಮನಿಸಿದಾಗ ಆ ಕಾಲದ ಕುಸುರಿ ಕೆಲಸ ಎಷ್ಟು ಸೂಕ್ಷ್ಮವಾಗಿತ್ತೆಂಬುದು ವೇದ್ಯವಾಗುತ್ತದೆ (ನೋಡಿ : ಕನ್ನಡ ಪ್ರಭ, ೩೧-೧೨-೨೦೦೪, ಪು. ೧೦)

ಸು. ಕ್ರಿ. ಪೂ. ೧೮,೦೦೦ ದಷ್ಟು ಪ್ರಾಚೀನದ್ದಾದ ಮೂಳೆಯ ಇನ್ನೊಂದು ಕೊಳಲಿನ ಅವಶೇಷವೂ ದೊರೆತಿದೆ. ಹೀಗೆಯೇ ಬೇರೆ ಬೇರೆಡೆ ದೊರೆತ ಕೊಳಲುಗಳು ಸು. ೧೧.೫ ಸೆಂ. ಮೀ. ವರೆಗೂ ಉದ್ದವಿದ್ದು, ೪ರಿಂದ ೮ರ ವರೆಗೂ ರಂಧ್ರ ಹೊಂದಿವೆ. ಪಿಳ್ಳಂಗೋವಿಗಳ ಚಿತ್ರಣಗಳು ಪಾಶ್ಚಾತ್ಯರಲ್ಲಿ ಬಹು ಪ್ರಾಚೀನತೆ ಹೊಂದಿದ್ದು, ಕ್ರಿ. ಪೂ. ೪೬೦ರ ಒಂದು ಗ್ರೀಸ್ ಶಿಲ್ಪದಲ್ಲಿ ಕೋಮಲೆಯೊಬ್ಬಳು ಏಕಕಾಲಕ್ಕೆ ಎರಡು ಪಿಳ್ಳಂಗೋವಿಗಳನ್ನು ಎರಡೂ ಕೈಲಿ ಒಂದೊಂದು ಹಿಡಿದು ನುಡಿಸುತ್ತಿರುವುದು (ಪಾಶ್ಚಾತ್ಯರಲ್ಲಿ ಇಂಥಾ ಪದ್ಧತಿಗಳು ವಿಶೇಷವಾಗಿ ಕಾಣಬರುತ್ತವೆ) ದಾಖಲಾಗಿದೆ. ಕ್ರಿ. ಪೂ. ೪೭೫ ರಷ್ಟು ಹಳೆಯ ಒಂದು ರೋಂ ವರ್ಣ ಭಿತ್ತಿಚಿತ್ರದಲ್ಲೂ ಇಂತಹ ನಿದರ್ಶನವಿದೆ.

ನಮ್ಮಲ್ಲೂ, ಎಲ್ಲೋರಾ, ಅಜಂತಾ, ಸಾಂಚಿ ಮೊದಲಾದೆಡೆಯ ಶಿಲ್ಪ,

ಭಿತ್ತಿಚಿತ್ರಗಳಲ್ಲಿ ಬಾಯಿಗೆ ಅಡ್ಡವಾಗಿಟ್ಟು ನುಡಿಸುವ ಕೊಳಲು ಹಾಗೂ, ಬಾಯೊಳಗಿಟ್ಟು, ದೇಹಕ್ಕೆ ಲಂಬವಾಗಿ ಹಿಡಿದು ನುಡಿಸುವ ಪಿಳ್ಳಂಗೋವಿ - ಈ ಎರಡೂ ವಾದ್ಯಗಳು ಚಿತ್ರಿತವಾಗಿವೆ.* ಆದರೆ, ಬಹುಮಟ್ಟಿಗೆ ಈ 'ಪಿಳ್ಳಂಗೋವಿ' ವಾದಕರ ವೇಷಭೂಷಣ, ಕೇಶಾಲಂಕಾರ, ಮುಖಚಹರೆಗಳು ಗ್ರೀಕರನ್ನು ಹೋಲುತ್ತವೆ. ಆ ಕಾರಣಕ್ಕೆ ಈ ವಾದ್ಯ ಭಾರತೀಯರಿಗೆ ಗ್ರೀಕರ ಸಂಪರ್ಕದಿಂದ ಬಂದದ್ದು ಎಂಬ ಅಭಿಪ್ರಾಯವಿದೆ.

ಪಿಟೀಲು ಕಮಾನು ಅಥವಾ ದಂಡ, ಅಡ್ಡಕೊಳ್ಳಲು ಭಾರತದ ಕಾಣಿಕೆಗಳೆಂದು ಪಾಶ್ಚಾತ್ಯರು ಒಪ್ಪಿಕೊಂಡಿದ್ದಾರೆ - ಎಂಬ ಅಂಶವನ್ನು ಇಲ್ಲಿ ಅಗತ್ಯವಾಗಿ ಸ್ಮರಿಸಬಹುದಾಗಿದೆ.

ಅಕ್ಬರನ ಆಸ್ಥಾನ ಕಲಾವಿದರ ವರ್ಣಚಿತ್ರಗಳಲ್ಲಿ ಸ್ತ್ರೀ / ಪುರುಷರು ಕೊಳಲು (ಬಾನ್ಸುರಿ) ಹಾಗೂ ಪಿಳ್ಳಂಗೋವಿಗಳನ್ನು ದಪ್ಪು ಮತ್ತಿತರ ಸಹ ವಾದ್ಯಗಳೊಂದಿಗೆ ನುಡಿಸುತ್ತಿರುವುದು ಕಂಡುಬರುತ್ತದೆ.

ಕರ್ನಾಟಕದ ಸಂದರ್ಭದಲ್ಲಿ, 'ಪೂರ್ವ ಚಾಲುಕ್ಯರ ಕಾಲದ ಕೊಳಲು ಚಿಕ್ಕದಾಗಿಯೂ, ಗಟ್ಟಿಮುಟ್ಟಾಗಿಯೂ ಇದ್ದವು. ನಂತರದ ಚಾಲುಕ್ಯರ ಕಾಲದಲ್ಲಿ ಉದ್ದಕೊಳಲನ್ನು ವಾರೆಯಾಗಿ ಹಿಡಿದು ನುಡಿಸುವ ಪದ್ಧತಿ ಬಂತು' ಎನ್ನಲಾಗಿದೆ. ಬಾದಾಮಿಯ ಭಿತ್ತಿಚಿತ್ರಗಳಲ್ಲಿ ಅತಿ ಉದ್ದವಾದ ಕೊಳಲು ನುಡಿಸುತ್ತಿರುವ ಮಹಿಳೆಯ ಚಿತ್ರಣವಿದೆ (ಈ ವಾದ್ಯ ಬಹುಮಟ್ಟಿಗೆ ಇಂದಿನ ಗೊಲ್ಲರ 'ಗಣೆ' ವಾದ್ಯ ಹೋಲುತ್ತದೆ). ಮುಂದೆ, 'ರಾಷ್ಟ್ರಕೂಟರ ಕಾಲದ ಕೊಳಲು ತುಸು ತೆಳುವಾಗಿದ್ದಂತೆ ಚಿತ್ರಿತವಾಗಿವೆ. ಹೊಯ್ಸಳರ ಶಿಲ್ಪಗಳಲ್ಲಿ ಮಧ್ಯಮ ಗಾತ್ರದ, ಉದ್ದದ ಕೊಳಲುಗಳನ್ನು ಅಡ್ಡವಾಗಿ ಹಿಡಿದು ನುಡಿಸುವುದು ಕಂಡು ಬಂದರೆ, ಕೆಲವೆಡೆ ತೆಳುವಾದ, ಸ್ವಲ್ಪ ಉದ್ದವೆನ್ನಬಹುದಾದ ಕೊಳಲುಗಳು ಕಾಣಬರುತ್ತವೆ.'

* ಈ ಎರಡೂ ವಾದ್ಯಗಳನ್ನು ಬಹಳ ಜನ ಒಂದೇ ಹೆಸರಿನಲ್ಲಿ (ಕೊಳಲು) ಬರೆದಿದ್ದಾರೆ. ಇಂಗ್ಲೀಷ್‌ನಲ್ಲಿ ಬಹುಶಃ ಇರದ ಶಬ್ದ ಭೇದ ಕನ್ನಡದಲ್ಲಿದೆ. ಅದನ್ನು ಗಮನಿಸಿಯೇ ನಾನು ಎರಡಕ್ಕೂ ಬೇರೆ ಬೇರೆ ಹೆಸರುಗಳನ್ನೇ ಬಳಸಿದ್ದೇನೆ.

ತುತ್ತೂರಿ

ತುತ್ತೂರಿ, ಕೊಂಬು, ಕಹಳೆ- ಇವೆಲ್ಲಾ ಮೂಲತಃ ರಣ ವಾದ್ಯಗಳು. ಇಂಗ್ಲಿಷ್‌ನಲ್ಲಿ ಈ ಜಾತಿಯ ವಾದ್ಯಗಳನ್ನೆಲ್ಲಾ ಸಾಮಾನ್ಯವಾಗಿ Trumpets ಎಂಬ ಒಂದೇ ಹೆಸರಿನಿಂದ ಬರೆದುಬಿಡುತ್ತಾರೆ. ಆದರೆ, ಕನ್ನಡದಲ್ಲಿ ಪ್ರತ್ಯೇಕ ಹೆಸರುಗಳೇ ಇವೆ. ತುತ್ತೂರಿಗೂ ಪ್ರಾಚೀನ ಇತಿಹಾಸವಿದೆ. : 'ರೋಮನರಿಗೆ ಮುನ್ನ ಇಟಲಿಯಲ್ಲಿದ್ದ ಎಟ್ರುಸ್ಕನ್ ಜನ ಈ ಕಾಳಗ ಕಹಳೆಗಳನ್ನು ಮೊದಲು ಬಳಸಿದರೆನ್ನುತ್ತಾರೆ. ಮೆಸಪಟೋಮಿಯಾದ ಒಂದು ಮುದ್ರೆಯಲ್ಲೂ ತುತ್ತೂರಿ ಹೋಲುವ ವಾದ್ಯವಿದೆ. ಈಜಿಪ್ಟನಲ್ಲಿ ಕ್ರಿ. ಪೂ. ಸು. ೧೫೧೫ರ ವೇಳೆಗೇ ಯುದ್ಧದಲ್ಲಿ ತುತ್ತೂರಿ ಬಳಕೆಯಾಗುತ್ತಿದ್ದ ನಿದರ್ಶನಗಳಿವೆ. ಅವು ಸಾಕಷ್ಟು ಉದ್ದವಾದ ಕೊಳವೆಗಳಾಗಿದ್ದು, ಊದುವ ಭಾಗ ಕಿರಿದಾಗಿದ್ದರೆ, ಇನ್ನೊಂದು ತುದಿ ಆಲಿಕೆಯಂತೆ ಅಗಲವಾಗಿರುತ್ತದೆ.

ನಮ್ಮಲ್ಲೂ ಗಾಂಧಾರ, ಸಾಂಚಿಯ ಶಿಲ್ಪಗಳಲ್ಲಿ ತುತ್ತೂರಿಯ ಕೆಲ ಮಾದರಿಗಳಿವೆ. ಅಜಂತಾ ಗುಹೆಯಲ್ಲಿ ಮೊದಲ ಕಾಲ ಘಟ್ಟದಲ್ಲಿ ಬರೆದ ಭಿತ್ತಿ ಚಿತ್ರಗಳಲ್ಲಿನ ತುತ್ತೂರಿ ಸಾಕಷ್ಟು ಉದ್ದವಿರುವ ಒಂದು ಕೊಳವೆಯಾಗಿದ್ದು, ಅದರ ಒಂದು ತುದಿ ಚೂಪಾಗಿದ್ದು ಊದಲು ಸಣ್ಣ ಬಟ್ಟಲಿನಂತಹ ಸಾಧನ ಅಳವಡಿಸಿದ್ದರೆ, ಇನ್ನೊಂದು ತುದಿ ಅಗಲವಾಗಿದೆ. ಎರಡನೇ ಕಾಲಘಟ್ಟದಲ್ಲಿ ಬರೆದಿರುವ ಚಿತ್ರಗಳಲ್ಲಿನ ತುತ್ತೂರಿ ಚಿಕ್ಕದಾಗಿದ್ದರೂ ಮೊದಲಿನದಕ್ಕಿಂತ ಹೆಚ್ಚು ಅಲಂಕರಣದಿಂದ ಕೂಡಿದೆ. ಅಬುಲ್ ಫಜಲನ ವಿವರಣೆಗಳಿಂದ ಅಕ್ಬರ್‌ನಂತಹ ದೊರೆಗಳ ಆಸ್ಥಾನದ ವಾದ್ಯ ತಂಡದಲ್ಲಿ ಮೈಮೇಲೆ ರಂಧ್ರಗಳಿರುವ ತುತ್ತೂರಿ ("ಸೂರ್ನಾ") ಗಳು ಪ್ರಮುಖ ಸ್ಥಾನ ಪಡೆದಿದ್ದು (ಮುಖವೀಣೆಯ ಹಾಗೆ ಉಸಿರು ಹಾಗೂ ಬೆರಳುಗಳ ನಿಯಂತ್ರಣದಿಂದ ಇವುಗಳಲ್ಲಿ ರಾಗ ವೈವಿಧ್ಯ ಹೊರಡಿಸಬೇಕಾಗುತ್ತದೆ), ವಿಶೇಷ ಸಂದರ್ಭಗಳಲ್ಲಿ ಒಂಭತ್ತು ಸೂರ್ನಾಗಳು ಬಳಕೆಯಾಗುತ್ತಿದ್ದು, ಅವುಗಳೊಡನೆ "ನಫೀರ್" ಎಂಬ (ಮೈಮೇಲೆ ರಂಧ್ರಗಳಿರದವು - ಕೇವಲ ಉಸಿರಿನ ಏರಿಳಿತದಿಂದಲೇ ಇವುಗಳಲ್ಲಿ ರಾಗ -

ಧಾಟಿ ವೈವಿಧ್ಯ ತರಬೇಕಾಗುತ್ತದೆ) ತುತ್ತೂರಿಗಳೂ ಸೇರುತ್ತಿದ್ದುದಾಗಿ ತಿಳಿದು ಬರುತ್ತದೆ.

ಕೊಂಬು

ಪ್ರಾಣಿಗಳ ಕೊಂಬೇ ಈ 'ಕೊಂಬು' ವಾದ್ಯದ ಮೂಲ ಪ್ರೇರಣೆ. ಈಗಲೂ ಕೆಲ ಜೋಗಿಗಳು ಸಾರಂಗದ ಕೊಂಬನ್ನೇ 'ಸಿಂಗಿನಾದ'ವಾಗಿ ಊದುತ್ತಾರೆ. ದನನಗಳ ಕೊಂಬನ್ನೇ ಹೋಲುವ ಹಲವು ವಾದ್ಯಗಳ ಚಿತ್ರಣ ನಮ್ಮ ಪ್ರಾಚೀನ ಶಿಲ್ಪಗಳಲ್ಲಿವೆ. ಕ್ರಿ. ಶ. ೧ನೇ ಶತಮಾನಕ್ಕೆ ಸೇರಿದ ಒಂದು ಉಬ್ಬು ಶಿಲ್ಪದಲ್ಲಿ ಕೊಂಬುಗಳನ್ನು ಮೇಲೆತ್ತಿ ಊದುತ್ತಿರುವವರ ಚಿತ್ರಣವಿದೆ. ಡೆನ್‌ಮಾರ್ಕ್‌ನಲ್ಲಿ ದೊರೆತ ಒಂದು ಪ್ರಾಚೀನ ಬೆಳ್ಳಿ ಕೆಟಲ್ ಮೇಲೆ ಮೂವರು ಕೊಂಬುಗಳನ್ನು ಮೇಲೆತ್ತಿ ಊದುತ್ತಿರುವ ಚಿತ್ರವಿದ್ದು, ಆ ಕೊಂಬುಗಳ ಒಂದು ತುದಿ ಕಿರಿದಾಗಿದ್ದರೆ ಇನ್ನೊಂದು ತುದಿ ಅಗಲವಾಗಿದ್ದು, ಬಾಯಿತೆರೆದ ಕುದುರೆಮುಖದ ಅಲಂಕರಣ ಹೊಂದಿದೆ. ಕೊಂಬಿನ ಉದ್ದಕ್ಕೆ ಇರುವ ಮೂರ್‍ನಾಲ್ಕು ಉಬ್ಬಿದ ಉಂಗುರಗಳು ಈಗಿನ ನಮ್ಮ 'ಕೊಂಬು'ಗಳಲ್ಲಿನ ಉಬ್ಬು ರಚನೆಯನ್ನೇ ಹೋಲುತ್ತವೆ.

ಮೊಗಲ್ ಕಾಲದ ಕೊಂಬು - ಕಹಳೆಗಳನ್ನು ಹಿತ್ತಾಳೆ, ಬೆಳ್ಳಿ, ಕೆಲವೊಮ್ಮೆ ಚಿನ್ನದಿಂದಲೂ ಮಾಡುತ್ತಿದ್ದರೆನ್ನಲಾಗಿದೆ. ಕೊಂಬು ವಾದ್ಯದ ಒಂದು ರೂಪ 'ರಜ್ಮನಾಮ' ಎಂಬ ಪರ್ಷಿಯಾದ ಸಚಿತ್ರ ಹಸ್ತ ಪ್ರತಿಯೊಂದಲ್ಲಿ ಚಿತ್ರಿತವಾಗಿದೆ. ಅದೊಂದು ಉದ್ದದ ಮರದ ಕೊಳವೆಯಾಗಿದ್ದು, ಕೊಂಬಿನಂತೆ ಅರೆ ಬಾಗಿದೆ. ಕಿರಿದಾದ ತುದಿಗೆ ಸಣ್ಣ ಆಲಿಕೆಯಂತಹ ಸಾಧನವಿದ್ದರೆ, ಇನ್ನೊಂದು ತುದಿ ಅಗಲವಾಗಿದೆ.

ಡೊಂಕಾಗಿರುವ ಇಲ್ಲವೇ ಉದ್ದಕ್ಕೆ ನೇರವಾಗಿರುವ ಕೊಂಬುಗಳು ಶಿಲ್ಪಗಳಲ್ಲೂ, ಚಿಕಣಿ ಚಿತ್ರಗಳಲ್ಲೂ ಕಂಡುಬರುತ್ತವೆ. 'S' ಆಕಾರದ ಕೊಂಬುಗಳು ಈಚಿನ ಬೆಳವಣಿಗೆ ಎನ್ನಲಾಗಿದೆ.

ನಮ್ಮ ದಾಸಯ್ಯಗಳು ವಿಶೇಷವಾಗಿ ಬಳಸುವ 'ಭಾಂಕಿ'ಗಳು ಕೊಂಬು ವಾದ್ಯಗಳಲ್ಲೇ ಇನ್ನೊಂದು ಜಾತಿಯವು. ಇವು ಪಾಶ್ಚಾತ್ಯರಲ್ಲೂ, ಬಹು ಹಿಂದಿನಿಂದಲೂ ಇವೆ ಎಂಬುದಕ್ಕೆ ಸ್ಪಷ್ಟ ನಿದರ್ಶನಗಳಿವೆ.

ತಾಳಗಳು

ಸು. ಕ್ರಿ. ಪೂ. ೧೨೦೦ ರಷ್ಟು ಹಿಂದೆಯೆ ತಾಳಗಳಿದ್ದವೆಂಬುದು ಕೆಲ ಸಂಗ್ರಹಗಳಿಂದ ತಿಳಿದುಬರುತ್ತದೆ. ಬ್ಯಾಬಿಲೋನಿಯದಲ್ಲಿ ಮಂದವಾದ ಚಿಕ್ಕತಾಳಗಳಿದ್ದವು. ಗ್ರೀಕೋ ರೋಮನ್ ಕಲೆಯಲ್ಲೂ ಈ ಮಾದರಿಗಳು ಉಳಿದು ಬಂದಿದ್ದು, ಅವುಗಳನ್ನು ಪರಸ್ಪರ ಸಮಾನಾಂತರ ಚಲನೆಯಲ್ಲಿ ತಾಡಿಸಿ ಶಬ್ದ ಉಂಟುಮಾಡುತ್ತಿದ್ದರೆಂದು ಕಾಣುತ್ತದೆ. ಆದರೆ, ಅಸೀರಿಯ ಹಾಗೂ ಹಿಟ್ಟೈಟೆ ನಾಗರಿಕತೆಗಳ ಉಬ್ಬುಶಿಲ್ಪಗಳಲ್ಲಿನ ತಾಳಗಳು ಶಂಖಾಕೃತಿಯಲ್ಲಿದ್ದು, ಅವುಗಳನ್ನು ಲಂಬವಾಗಿ ಒಂದಕ್ಕೊಂದು ತಾಟಿಸುತ್ತಿರಬಹುದೆನಿಸುತ್ತದೆ. ಗ್ರೀಕರ ಕಾಲದಲ್ಲಿ ೧೫೦ ಮಿ. ಮೀ. ವ್ಯಾಸದಷ್ಟು ದೊಡ್ಡ ಆಕಾರದ ತಾಳಗಳಿದ್ದವೆಂಬುದು ಈಜಿಪ್ಟ್‌ನಲ್ಲಿ ದೊರೆತ ಜೇಡಿಮಣ್ಣಿನ ಮುದ್ರೆಗಳಲ್ಲಿ ಕಂಡುಬಂದಿದೆ. ಕ್ರಿ. ಶ. ೧ನೇ ಶತಮಾನದ ಇಟಲಿಯ ಒಂದು ಉಬ್ಬುಶಿಲ್ಪದಲ್ಲಿ ಕಾಣುವ ತಾಳಗಳು ಸಣ್ಣ ಬಟ್ಟಲಿನಂತಿದ್ದು, ಹೊರ ನಡು ಉಬ್ಬಿದೆ ಹಾಗೂ ಅಲ್ಲಿ ತಾಳ ಹಿಡಿಯಲು ಅಗತ್ಯ ಸಾಧನವಿದ್ದಂತಿದೆ. ಆದರೆ, ಕ್ರಿ. ಪೂ. ೨ನೇ ಶತಮಾನದ ಅಂತ್ಯಭಾಗಕ್ಕೆ ಸೇರಿದ ಇಟಲಿಯ ಮೊಸಾಯಿಕ್ ಚಿತ್ರದಲ್ಲಿನ ತಾಳಗಳು ಚಿಕ್ಕ ಆಕಾರದಲ್ಲಿದ್ದು, ಡಪ್ಪಿನಂತಹ ವಾದ್ಯ ಹಿಡಿದು ಸಾಭಿನಯ ಪೂರ್ವಕ ನುಡಿಸುತ್ತಿರುವವನಿಗೆ ಈ ತಾಳ ಹಾಕುತ್ತಿರುವುದು ಇಂದಿನ ಲಾವಣಿ/ ಕಥನ ಪ್ರದರ್ಶನವನ್ನೇ ಹೋಲುತ್ತದೆ.

ಅಜಂತಾದ ೧೭ನೇ ಗುಹೆಯ ಭಿತ್ತಿಚಿತ್ರದಲ್ಲಿ ದೊಡ್ಡ ಲೋಟದಂತಹ ತಾಳಗಳಿದ್ದು ಅವುಗಳಿಗೆ ಹಿಡಿಕೆಗಳೂ ಇವೆ. ಅವು ಇಂದಿನ ನಮ್ಮ ಭಾಗವತರ ತಾಳಗಳನ್ನೇ ಹೋಲುತ್ತಿವೆ. ಅರಳುಗುಪ್ಪೆಯ ಕಲ್ಲೇಶ್ವರ ದೇವಸ್ಥಾನದ (ಸು.

೯ನೇ ಶತಕ) ನಟರಾಜ ಶಿಲ್ಪದ ಜೊತೆಗೆ ಇರುವ ತಾಳಧಾರಿಯ ತಾಳಗಳು ಸಣ್ಣ ಬಟ್ಟಲಿನಂತಿದ್ದು, ಅವುಗಳನ್ನು ಹಿಂಬದಿಯಲ್ಲಿನ ಹಿಡಿಕೆಯಲ್ಲಿ ಬೆರಳು ತೂರಿಸಿ ಹಿಡಿದಿರುವಂತೆ ಚಿತ್ರಿಸಿದೆ. ಹಳೇಬೀಡಿನ ಶಿಲ್ಪವೊಂದರ (ಕ್ರಿ. ಶ. ೧೧೨೧) ವಾದ್ಯಗಾತಿಯೊಬ್ಬಳ ಕೈನಲ್ಲಿನ ತಾಳಗಳು ಚಿಕ್ಕಗಂಟೆಗಳಂತಿದ್ದು, ಹಿಡಿಯಲು ಉದ್ದವೂ ಸುಂದರವೂ ಆದ ಗೊಂಡೆಗಳಿವೆ. ಮೇವಾಡ (ರಾಜಸ್ಥಾನ) ಕಲಾವಿದ ಬರೆದ (ಕ್ರಿ. ಶ. ೧೬೫೦) 'ರಾಗಿಣಿವಸಂತ' ಚಿತ್ರದಲ್ಲಿ ಲಲನೆಯೊಬ್ಬಳು ಹಿಡಿದಿರುವ ತಾಳಗಳು ಮೊಟ್ಟೆಯ ಎರಡು ಹೋಳುಗಳಂತಿವೆ ; ಸುಂದರ ಗೊಂಡೆಗಳೂ ಇವೆ. ಬಾದಾಮಿ (೬ನೇ ಶತ.), ನಂದಿಯ ಭೋಗ ನಂದೀಶ್ವರ ದೇವಾಲಯ (ಸು. ಕ್ರಿ. ಶ. ೮೧೦), ಹರಿಹರದ ಹರಿಹರೇಶ್ವರ ದೇವಾಲಯಗಳ ಶಿಲ್ಪಗಳಲ್ಲಿ ದೊಡ್ಡ ಆಕಾರದ ತಾಳ 'ಜಾಲರಿ'ಗಳು ಕಂಡುಬರುತ್ತವೆ.

ಅಧ್ಯಯನಕಾರರೊಬ್ಬರ ಪ್ರಕಾರ 'ಕ್ರಿಸ್ತ ಶಕಕ್ಕೆ ಮೊದಲು ಚಿಕ್ಕ ಬಟ್ಟಲಿನಂತಹ 'ಕರತಾಳ'ಗಳೇ ಹೆಚ್ಚು ಜನಪ್ರಿಯವಾಗಿದ್ದಂತೆ ಕಾಣುತ್ತದೆ'. ಆದರೆ, ಇನ್ನೊಬ್ಬರ ಪ್ರಕಾರ - ' ಮೊದಲಿಗೆ ಈ ತಾಳಗಳು ಹೆಚ್ಚು ಅಗಲವಾಗಿಯೂ, ಸಮತಲವಾಗಿಯೂ ಇದ್ದವು ('ಕಾಂಸ್ಯತಾಳ' ಅಥವಾ 'ಜಾಲರಿ'ಗಳು). ೮ನೇ ಶತಮಾನದ ನಂತರ ಚಿಕ್ಕ ಬಟ್ಟಲಿನಂತಹ ತಾಳಗಳು ಬಳಕೆಗೆ ಬಂದವು. ೨ನೇ ಚಾಲುಕ್ಯರ ಕಾಲದಲ್ಲಿ ಈ ತಾಳಗಳ ಒಳಭಾಗದ ಗುಣಿ ಇನ್ನೂ ಆಳವಾಗಿ ಘಂಟೆ ಹೋಲುವ ತಾಳ ರೂಪುಗೊಂಡವು; ತಾಳ ಹಿಡಿಯಲು ಸಾಧಾರಣ ದಾರಕ್ಕೆ ಬದಲು ಸುಂದರ ಗೊಂಡೆಗಳೂ ಬಂದವು'.

ಹೀಗೆ, ತಾಳಗಳಷ್ಟೇ ಅಲ್ಲದೆ, ಚಿಟಕೆಗಳು, ಕಿರಿಕಿಟ್ಟಕ್ಕಗಳು, ಜಾಗಟೆ, ಗೆಜ್ಜೆಗಳೂ ಶಿಲ್ಪ ಚಿತ್ರಗಳಲ್ಲಿ ಚಿತ್ರಿತವಾಗಿವೆ. ಮಕ್ಕಳ ಆಟಿಕೆಯಾಗಿರುವ ಗಿಲಕೆಗಳಿಗೂ ಪ್ರಾಚೀನ ಇತಿಹಾಸವಿದ್ದು ಅಮರಾವತಿ, ನಾಗಾರ್ಜುನ ಕೊಂಡಗಳ ಉತ್ಖನನಗಳಲ್ಲಿ ಮಣ್ಣಿನಲ್ಲಿ ಮಾಡಿದ ಪ್ರಾಣಿ, ಪಕ್ಷಿ ರೂಪದ ಕೆಲ ಗಿಲಕೆಗಳು ದೊರೆತಿವೆ. ಮಣ್ಣಿನಿಂದ ಮಾಡಿದ ಕೆಲವು ಹಕ್ಕಿ ಗೊಂಬೆಗಳ ಒಳಗೆ ಹರಳುಗಳನ್ನು ತುಂಬಿರುವುದನ್ನು ನೋಡಿದರೆ, ಆ ಗೊಂಬೆಯನ್ನು ಗಿಲಕಿಯಂತೆ

ಬಳಸಲಾಗುತ್ತಿತ್ತೆಂದು ನಂಬಬಹುದಾಗಿದೆ. ಮೆಸಪಟೋಮಿಯ, ಬ್ಯಾಬಿಲೋನಿಯ, ಈಜಿಫ್ಟ್ ಮೊದಲಾದ ಪುರಾತನ ಸಂಸ್ಕೃತಿಗಳಲ್ಲಿಯೂ ಕ್ರಿ. ಪೂ. ೨ ಸಾವಿರ ವರ್ಷಗಳಿಗೂ ಮೊದಲೂ ಈ ರೀತಿಯ ಗಿಲಕೆ ಆಟಿಕೆಗಳಿದ್ದವೆಂಬುದು ಪಳೆಯುಳಿಕೆಗಳಿಂದ ತಿಳಿದು ಬರುತ್ತದೆ.

ಕೋಲಾಟ

ಜನ ಸಾಮಾನ್ಯರ ಅಚ್ಚುಮೆಚ್ಚಿನ ಕೋಲಾಟವನ್ನು ಶಿಲ್ಪಿಗಳು ಮರೆತಿಲ್ಲ. ಕೈವಾರದ ಭೀಮೇಶ್ವರ ದೇವಸ್ಥಾನ (ಸು. ೧೩ನೇ ಶತ.), ಪಾಳ್ಯದ ಜನಾರ್ಧನ ದೇವಾಲಯ (೧೪ನೇ ಶತ.) ಅಲ್ಲದೆ, ಹಂಪಿಯ ಶಿಲ್ಪಗಳಲ್ಲೂ (೧೬ನೇ ಶತ) ಕೋಲಾಟದ ಚಿತ್ರಣಗಳಿವೆ. ಇದಕ್ಕೂ ಹಿಂದಿನ ಸಾಂಚಿ, ನಾಗಾರ್ಜುನ ಕೊಂಡದ ಶಿಲ್ಪಗಳಲ್ಲೂ ಕೋಲಾಟ ಕಾಣಬರುತ್ತದೆ. ಮೆಸಪಟೋಮಿಯಾ ಸಂಸ್ಕೃತಿಯಲ್ಲೂ ಕೋಲಾಟವಿದ್ದ ಕುರುಹುಗಳಿವೆ. ಆ ಕೋಲುಗಳು ಕೆಲವೊಮ್ಮೆ ನೇರವಾಗಿದ್ದರೆ, ಹಲವೊಮ್ಮೆ ವಕ್ರವಾಗಿರುತ್ತಿದ್ದವು ಎನ್ನಲಾಗಿದೆ. ಕ್ರಿ. ಪೂ. ೨೬೦೦ರ ಕಾಲದ ಸುಮೇರಿಯನ್ನರಲ್ಲಿ ಈ ರೀತಿ ಕೋಲುಗಳಿದ್ದವೆಂಬುದನ್ನು ಉರ್ ಪ್ರದೇಶದಲ್ಲಿ ದೊರೆತಿರುವ - ವ್ಯಕ್ತಿಯೊಬ್ಬ ಬಾಗಿದ ಕೋಲುಗಳನ್ನು ಪರಸ್ಪರ ಬಡಿಯುತ್ತಿರುವ ಚಿತ್ರ ಸಾಬೀತು ಪಡಿಸುತ್ತದೆ.

ಚರ್ಮ ವಾದ್ಯಗಳು

ಕೊಂಬು, ತುತ್ತೂರಿಗಳ ಹಾಗೆ ತಮಟೆ, ಭೇರಿಯಂತಹ ಚರ್ಮ ವಾದ್ಯಗಳೂ ಸುದ್ದಿ ಸಂಕೇತವನ್ನು ಹೆಚ್ಚು ದೂರಕ್ಕೆ ರವಾನಿಸುವ ಉದ್ದೇಶಕ್ಕೆ ಹುಟ್ಟಿಕೊಂಡಂಥವು. ಇವುಗಳ ಶಬ್ದ ಹೆಚ್ಚು ದೂರ ಕ್ರಮಿಸಿದರೂ ತನ್ನ ಸಾಂಧ್ರತೆಯನ್ನು ಅಷ್ಟಾಗಿ ಕಳೆದುಕೊಳ್ಳದ ವಿಶೇಷ ಗುಣ ಇವಕ್ಕಿದೆ. ಬಹಳಷ್ಟು ಚರ್ಮವಾದ್ಯಗಳಿಗೆ ಶಬ್ದವರ್ಧಕ ವ್ಯವಸ್ಥೆ ಇರುತ್ತದೆ ಎಂಬ ಅಂಶವನ್ನು ವಿದ್ವಾಂಸರು ಗಮನಿಸಿದ್ದಾರೆ. ಚರ್ಮವಾದ್ಯಗಳಲ್ಲಿ ಅತಿಚಿಕ್ಕ ಗಾತ್ರದ ಬುಡುಬುಡಿಕೆಯಿಂದ ಹಿಡಿದು ದೊಡ್ಡ ಗಾತ್ರದ ಜಗ್ಗಲಗೆವರೆಗೂ ವಿವಿಧ ಗಾತ್ರ,

ಆಕಾರ, ಶಬ್ದ ವೈವಿಧ್ಯ ಪಡೆದ ಮಾದರಿಗಳಿವೆ. ಈ ವಾದ್ಯಗಳ ವಿಕಾಸ ಗುರುತಿಸಲು ಎಲ್ಲಾ ಪ್ರಾಚೀನ ನಾಗರಿಕತೆಗಳಲ್ಲೂ ತಕ್ಕ ನಿದರ್ಶನಗಳಿವೆ.

ಮೆಸಪಟೋಮಿಯಾದಲ್ಲಿ ದೊರೆತ ಕೆಲ ವಸ್ತುಗಳಿಂದ ಹಾಗೂ ಆದಬ್‌ನಲ್ಲಿ (ಕ್ರಿ. ಪೂ. ೩೦೦೦) ದೊರೆತ ಒಂದು ಕರಂಡಕದಿಂದ ಆಗ ತಮಟೆಯಂತಹ ಹಾಗೂ ಸಿಲಿಂಡರಿನಾಕಾರದ ('ಡ್ರಂ') ವಾದ್ಯಗಳಿದ್ದು ಅವುಗಳನ್ನು ಅಡ್ಡವಾಗಿ ಇಲ್ಲವೇ ಲಂಬವಾಗಿ ಇಟ್ಟು ನುಡಿಸುತ್ತಿದ್ದರೆಂದು ತಿಳಿಯಬರುತ್ತದೆ. ಪ್ರಾಚೀನ ಈಜಿಪ್ಟ್‌ನ ಒಂದು ವಾದ್ಯಕ್ಕೆ ಚರ್ಮವನ್ನು ಬಾರುಗಳಿಂಥ ಬಿಗಿದಿದ್ದು ಅದರ ಎರಡೂ ಮುಖಗಳನ್ನು ನುಡಿಸಲು ಬಡಿಯುವ ಹಾಗೂ ಉಜ್ಜುವ ಕಡ್ಡಿಗಳನ್ನು ಬಳಸುತ್ತಿದ್ದರೆಂಬ ಅಭಿಪ್ರಾಯವಿದೆ. ಆದರೆ, ಇನ್ನೊಂದು ಅಭಿಪ್ರಾಯದ ಪ್ರಕಾರ 'ಚರ್ಮವಾದ್ಯ ನುಡಿಸಲು ಬಳಸುವ ಕೋಣ ಅಥವಾ ಗುಣಿ (ಕೋಲು) ಪೂರ್ಣವಾಗಿ ಭಾರತೀಯ ಮೂಲದ್ದು. ಮೆಸಪಟೋಮಿಯ ಅಥವಾ ಈಜಿಫ್ಟ್‌ಗಳಲ್ಲಿ ಭಾರೀ ಚರ್ಮವಾದ್ಯಗಳಿದ್ದರೂ ಅವುಗಳನ್ನು ಕೋಲಿನಿಂದ ಬಡಿಯುತ್ತಿರಲಿಲ್ಲ. ಕ್ರಿ. ಶ. ೩ನೇ ಶತಮಾನದ ನಂತರ ಪಾಶ್ಚಾತ್ಯರಲ್ಲೂ ಇದು ರೂಢಿಗೆ ಬಂತು.'

ಪ್ರಾಚೀನ ಶಿಲ್ಪ, ಚಿತ್ರಗಳಲ್ಲಿ ಮೃದಂಗ, ಮುರಜ, ತಮಟೆ, ನಗಾರಿ ಮೊದಲಾದ ಹಲವಾರು ವಾದ್ಯಗಳ ಆಕಾರವನ್ನೂ, ನುಡಿಸುವ ಕ್ರಮವನ್ನು ಚಿತ್ರಿಸಿದೆ. ಇಲ್ಲಿ ಕೆಲವು ನಿದರ್ಶನಗಳನ್ನು ಗಮನಿಸಬಹುದಾಗಿದೆ.

ಮೃದಂಗ / ಮದ್ದಲೆ : ಸಾಂಚಿಯಿಂದ ಹೊಯ್ಸಳರವರೆಗಿನ ವಿವಿಧ ಕಾಲದ ನಮ್ಮ ಶಿಲ್ಪಗಳಲ್ಲಿ ಮೃದಂಗ ವಾದನದ ಬೇರೆ ಬೇರೆ ಕ್ರಮಗಳನ್ನು ಕಲಾವಿದರು ನಿರೂಪಿಸಿದ್ದಾರೆ. ವಾದ್ಯವನ್ನು ಎಡ ಕೈಯಿಂದ ಒತ್ತಿ ಹಿಡಿದು, ಬಲ ಕೈಯಿಂದ ನುಡಿಸುವ ಕ್ರಮದ 'ಅಂಕ್ಯ - ಮೃದಂಗ', ತಬಲಾದಂತೆ ಎಡಗೈಯಿಂದ 'ಅಂಕ್ಯ', ಬಲಗೈಯಿಂದ 'ಊರ್ಧ್ವ'ಗಳನ್ನು ನುಡಿಸುವ 'ಅಂಕ್ಯ - ಊರ್ಧ್ವ ಮೃದಂಗ', ನೆಲದ ಮೇಲೆ ಲಂಬವಾಗಿ ನಿಲ್ಲಿಸಿ ನುಡಿಸುವ ಊರ್ಧ್ವ ಮೃದಂಗ - ಹೀಗೆ, ಮೃದಂಗದ ನಾನಾ ಬಗೆಗಳು ಶಿಲ್ಪಗಳಲ್ಲಿ ಪಡಿ ಮೂಡಿವೆ. ವಾದ್ಯಗಳ ರಚನೆಗೆ

ಸಂಬಂಧಿಸಿಯೂ - ವಾದ್ಯದ ಎರಡೂ ಮುಖಗಳ ಚರ್ಮವನ್ನು 'ಬಾರು'ಗಳಿಂದ ಎಳೆದು ಕಟ್ಟಿರುವದು ಕೆಲವೊಮ್ಮೆ ಒಂದು ಮುಖದ ಮೇಲೆ 'ಕರಣೆ' ಅಂಟಿಸಿರುವುದು (ಅಜಂತಾದ ಚಿತ್ರ)... ಈ ಅಂಶಗಳೂ ಸ್ಪಷ್ಟವಾಗಿ ಕಾಣಬರುತ್ತವೆ. ಆದರೆ, ಈಗಿನಂತೆ ಶ್ರುತಿ ನಿಯಂತ್ರಣಕ್ಕಾಗಿ 'ಬಾರು'ಗಳ ನಡುವೆ ಬೆಣೆಗಳನ್ನು ಇರಿಸುವ ಪದ್ಧತಿ ಹಿಂದೆಯೂ ಇದ್ದದಕ್ಕೆ ಶಿಲ್ಪಗಳಲ್ಲಾಗಲೀ ಚಿತ್ರಗಳಲ್ಲಾಗಲೀ ನಿದರ್ಶನಗಳಿಲ್ಲ. ಬದಲಿಗೆ, ಬಾರುಗಳ ನಡುವೆ ಎಡ ಹಸ್ತ ತೂರಿಸಿ, ವಾದ್ಯ ಒತ್ತಿಹಿಡಿದು, ಹಿಡಿತವನ್ನು ಬಿಗಿ- ಸಡಿಲ ಮಾಡುವ ಮೂಲಕ ಶ್ರುತಿ ನಿಯಂತ್ರಣ ಮಾಡುವುದೇ ಆಗಿನ ಪದ್ಧತಿಯಾಗಿದ್ದಿರಬಹುದೆಂಬುದಕ್ಕೆ ಉದ್ದಕ್ಕೂ ಹಲವಾರು ನಿದರ್ಶನಗಳಿವೆ. ಕೊನಾರ್ಕದ ಈ ಜಾತಿಯ ಒಂದು ವಾದ್ಯದ ಎರಡೂ ಅಂಚುಗಳ ತುದಿ ಸುತ್ತಲೂ 'ಸ್ಕ್ರೂ' ಗಳಂತಹ ಸಾಧನಗಳಿರುವುದು ಕುತೂಹಲಕರವಾಗಿದೆ. ಕೆಲವು ಸಂದರ್ಭಗಳಲ್ಲಿ ಇವುಗಳನ್ನು ಕೋಲಿನಿಂದ (ಡೋಲಿನಂತೆ) ನುಡಿಸುತ್ತಿರುವುದೂ ಇದೆ.

ಈ ವಾದ್ಯಗಳ ಅಧ್ಯಯನಕ್ಕೆ ಸಂಬಂಧಿಸಿದ ಒಂದು ತಾಂತ್ರಿಕ ತೊಡಕು ಏನೆಂದರೆ - ಬಹುಮಟ್ಟಿಗೆ ಎಲ್ಲ ಅಧ್ಯಯನಕಾರರೂ ಮೃದಂಗ ಜಾತಿಯ ವಾದ್ಯಗಳನ್ನೂ, ಡೋಲು ಜಾತಿಯ ವಾದ್ಯಗಳನ್ನೂ - ಈ ಯಾವುದೇ ಕಂಡಾಗಲೂ 'ಡ್ರಂ' ವಾದ್ಯವೆಂದೇ ಹೆಸರಿಸಿಬಿಡುತ್ತಾರೆ. ಇದು ಸರಿಯಾದ ಕ್ರಮ ಅಲ್ಲವಾದ್ದರಿಂದ, ನಾವು ಅವುಗಳನ್ನು ಎಚ್ಚರಿಕೆಯಿಂದ ಹೆಸರಿಸಿ ಅಧ್ಯಯನ ಮಾಡಬೇಕಾಗುತ್ತದೆ.

ನಗಾರಿ : ಬ್ಯಾಬಿಲೋನಿಯನ್ನರಲ್ಲಿ 'ರಣಭೇರಿ (ನಗಾರಿ) ಇದ್ದ ನಿದರ್ಶನವಿದೆ. ಸಾಂಚಿಯ ಉಬ್ಬುಶಿಲ್ಪವೊಂದರಲ್ಲೂ ನಗಾರಿಯಂತಹ ವಾದ್ಯವನ್ನು ವಾದಕರು ಹೆಗಲಿಗೆ ನೇತುಹಾಕಿಕೊಂಡು ಕೋಲುಗಳಿಂದ ಬಡಿಯುತ್ತಿರುವ ಚಿತ್ರಣವಿದೆ. ವಾದ್ಯ ಗೋಷ್ಠಿಗಳಲ್ಲಿ ಸಹವಾದ್ಯವಾಗಿಯೂ ನಗಾರಿ ಬಳಕೆಯಾಗುತ್ತಿದ್ದುದನ್ನು ಹಲವಾರು ಚಿಕಣಿ ಚಿತ್ರಗಳಲ್ಲಿ ಕಾಣಬಹುದು. ಈ ಸಂದರ್ಭದ ನಗಾರಿಗಳು ಸ್ವಲ್ಪ ಚಿಕ್ಕ ಆಕಾರದವುಗಳಾಗಿದ್ದರೆ, ಬೇಟೆ,

ಮೆರವಣಿಗೆ ಮೊದಲಾದ ಸಂದರ್ಭದ ನಗಾರಿಗಳು ತುಸು ದೊಡ್ಡ ಆಕಾರದಲ್ಲಿರುವುದು ಕಂಡುಬರುತ್ತದೆ. ನಗಾರಿಗಳನ್ನು ಒಂಟೆ ಮೇಲೆ ನೇತು ಹಾಕಿ ಬಡಿಯುವ ದೃಶ್ಯ ಮೊಘಲರ ಕಾಲದ ವರ್ಣಚಿತ್ರಗಳಲ್ಲೂ, ಕರ್ನಾಟಕದ ಶಿಲ್ಪಕಲೆಗಳಲ್ಲೂ ಸಾಮಾನ್ಯವಾಗಿ ಕಾಣಬರುತ್ತದೆ. ಆ ನಗಾರಿಗಳ ಆಕಾರ, ಚರ್ಮವನ್ನು ಬಾರುಗಳಿಂದ ಬಿಗಿವ ರೀತಿ, ಬಡಿವ ಕೋಲುಗಳ ಹಿಡಿಕೆ ದಪ್ಪವಾಗಿದ್ದು, ತುದಿ ಕಿರಿದಾಗಿ ಬಾಗಿರುವುದು - ಈ ಎಲ್ಲವೂ ಇಂದೂ ಕಂಡುಬರುವ ಅಂಶಗಳೇ ಆಗಿವೆ. ಹಂಪಿಯ ವಿರೂಪಾಕ್ಷ ದೇವಾಲಯದ ಭಿತ್ತಿ ಚಿತ್ರದಲ್ಲಿ ವ್ಯಕ್ತಿಯೊಬ್ಬ ನೆಲದ ಮೇಲೆ ನಗಾರಿ ಇಟ್ಟು ಎರಡು ಕೋಲುಗಳಿಂದ ಬಡಿಯುತ್ತಿರುವಂತೆ ಚಿತ್ರಿಸಲಾಗಿದೆ. ನಗಾರಿಗೆ ಹಿಂದೆ ದುಂದುಬಿ, ಭೇರಿ ಎಂಬ ಹೆಸರುಗಳಿದ್ದವು.

ಗಾಂಧಾರದ ಶಿಲ್ಪವೊಂದರಲ್ಲಿ ವ್ಯಕ್ತಿಯೊಬ್ಬ ನಡುಬಾಗಿ ನಿಂತು, ತನ್ನ ಎರಡೂ ತೊಡೆಗಳ ನಡುವೆ ವಾದ್ಯವೊಂದನ್ನು ಒತ್ತಿ ಹಿಡಿದು, ಎರಡೂ ಹಸ್ತಗಳಿಂದ ಬಡಿಯುತ್ತಿರುವಂತೆ ಚಿತ್ರಿಸಿದೆ. ಇದು ಇಂದಿನ ನಗಾರಿ ಅಥವಾ 'ಡಂಕಣ'ವನ್ನು ಹೋಲುತ್ತದೆ ಎಂದು ಅಧ್ಯಯನಕಾರ ಕೃಷ್ಣಮೂರ್ತಿ ಅವರು ಅಭಿಪ್ರಾಯ ಪಟ್ಟಿದ್ದಾರೆ (Gandhara Sculptures, P - 88). ಬಹುಶಃ ಈ ಬಗೆಯ ವಾದ್ಯ ನಮ್ಮಲ್ಲಿನ "ಕುಣಿಮಿಣಿ" ಆಗಿದ್ದಿರಬಹುದೇ ?

ದಪ್ಪು

ಸು. ಕ್ರಿ. ಪೂ. ೬ನೇ ಶತಮಾನದಷ್ಟು ಪ್ರಾಚೀನವಾದ ಈ ವಾದ್ಯದ ಅಂದಿನ ಆಕಾರ, ನುಡಿಸುವ ಕ್ರಮ ಇಂದಿಗೂ ಅದೇ ರೀತಿ ಉಳಿದುಬಂದಿರುವುದು ಆಶ್ಚರ್ಯವೆನಿಸುತ್ತದೆಯೇ ? ಒಂದು ಅಸ್ಸೀರಿಯನ್ ಉಬ್ಬು ಶಿಲ್ಪದಲ್ಲಿ (ಸು. ಕ್ರಿ. ಪೂ. ೬೨೬) ಒಂದೆಡೆ ವಿವಿಧ ವಾದ್ಯಗಾರರ ಚಿತ್ರಣವಿದೆ. ಅದರಲ್ಲಿ ಒಬ್ಬ 'ದಪ್ಪು' ವಿನಂತಹ ವಾದ್ಯ ಹಿಡಿದಿದ್ದಾನೆ, ಅದರ ಆಕಾರ, ಎಡಹಸ್ತದಲ್ಲಿ ಹಿಡಿದು ಬಲಗೈ ಬೆರಳುಗಳಿಂದ ಅದರ ನಡುಭಾಗವನ್ನು ನುಡಿಸುತ್ತಿರುವ ರೀತಿ ಇಂದಿನ ನಮ್ಮ ಫಕೀರರ/ಲಾವಣಿಕಾರರ ದಪ್ಪುವಾದನ ಕ್ರಮವನ್ನೇ ಹೋಲುತ್ತದೆ.

ಸಾಂಚಿಯ ಒಂದು ಉಬ್ಬು ಶಿಲ್ಪದಲ್ಲೂ ಇದೇ ವಾದನ ಕ್ರಮವಿದೆ. ಗಾಂಧಾರದ ಒಂದು ಅಲಂಕರಣ ಶಿಲ್ಪದಲ್ಲಿ ಕಾಣುವ ಇಂತಹ ವಾದ್ಯ ಗ್ರೀಕರ ಟಿಂಪನ್ (Tympann) ಹೋಲುವುದಲ್ಲದೆ, ಆ ವಾದಕನ ವೇಷಭೂಷಣ, ಕೇಶವಿನ್ಯಾಸವೂ ಗ್ರೀಕ್ ನಾಗರಿಕನನ್ನೇ ಹೋಲುತ್ತದೆ.

ಇಷ್ಟಾಗಿಯೂ ಈ ವಾದ್ಯವನ್ನು ನಮ್ಮಲ್ಲಿ ಮುಸ್ಲಿಂ ಫಕೀರರೇ ಹೆಚ್ಚಾಗಿ ಬಳಸುವುದರಿಂದ, ಇದು ಹೊರದೇಶದಿಂದಲೇ ನಮಗೆ ಬಂದದ್ದಿರಬಹುದೆಂಬ ಅಭಿಪ್ರಾಯವಿದೆ.

ತಮಟೆ

ಪ್ರಾಚಿನ ಶಿಲ್ಪಗಳಲ್ಲಿ ತಮಟೆಯೂ ಇದೆ ಎಂಬುದು ಅದರ ಜನಪ್ರಿಯತೆಯ ಧ್ಯೋತಕವೇ ಆದೀತು. ಕ್ರಿ. ಪೂ. ೩-೪ ಸಹಸ್ರ ವರ್ಷಗಳಷ್ಟು ಹಳೆಯದಾದ ಬ್ಯಾಬಿಲೋನಿಯಾದ ಬಿಸ್ಮೈ ದೇವಸ್ಥಾನದಲ್ಲಿ ದೊರೆತ ಒಂದು ಪಾತ್ರೆಯ ಮೇಲಿನ ಚಿತ್ರದಲ್ಲಿ ಮೂವರು ವಾದ್ಯಗಾರರಿದ್ದು, ಅವರಲ್ಲಿ ಒಬ್ಬ ಮೆರವಣಿಗೆಯ ಮುಂದೆ, ತನ್ನ ಎಡಗೈಲಿ ತಮಟೆಯಂತಹ (Frame Drum) ವಾದ್ಯ ಹಿಡಿದು ನುಡಿಸುತ್ತಾ ಹೋಗುತ್ತಿರುವುದು ಕಂಡುಬರುತ್ತದೆ.

ಸಾಂಚಿಯ ಉಬ್ಬುಶಿಲ್ಪದಲ್ಲಿ 'ಸಾಂಬೋಧಿಯ ಮಹಾದ್ಭುತ' ಸನ್ನಿವೇಶ ದೃಶ್ಯದಲ್ಲಿ ಒಬ್ಬಾತ ನುಡಿಸುತ್ತಿರುವ ಒಂದು ವಾದ್ಯದ ರೂಪುರೇಷೆ, ಅದನ್ನು ಎದೆಯ ಮೇಲೆ ಎತ್ತಿ ಹಿಡಿದು (ಹೆಗಲಿಗೆ ಪಟ್ಟಿ ಸಹಾಯದಿಂದ ನೇತುಹಾಕಿಕೊಂಡು) ನುಡಿಸುತ್ತಿರುವ ರೀತಿ ಇಂದಿನ ತಮಟೆ ವಾದನವನ್ನೇ ಸ್ಪಷ್ಟವಾಗಿ ಹೋಲುತ್ತದೆ. ಒಂದು ಸಣ್ಣ ವ್ಯತ್ಯಾಸವೆಂದರೆ, ಬಲಗೈಲಿ ತಮಟೆ ನುಡಿಸಲು ಹಿಡಿದಿರುವ ಕೋಲಿನ ತುದಿ ಕೊಕ್ಕೆಯಂತೆ ಬಾಗಿದೆ ; ಎಡ ತೋಳು ತಮಟೆಯ ಮೇಲುಭಾಗವನ್ನು ಬಳಸಿ ಹಿಡಿದಿದ್ದು, ಎಡಗೈಯ ಬರೀ ಬೆರಳುಗಳಿಂದಲೆ ನುಡಿಸುತ್ತಿರುವಂತಿದೆ.

ಅಮರಾವತಿಯ ಒಂದು ಶಿಲ್ಪದಲ್ಲಂತೂ ಈ ವಾದ್ಯದ ಅತಿ ಸ್ಪಷ್ಟ

ಹಾಗೂ ಸುಂದರ ಚಿತ್ರಣವಿದೆ. ಅಲ್ಲಿ ಒಬ್ಬ ಗುಜ್ಜಾರಿ ವ್ಯಕ್ತಿ ಈ ವಾದ್ಯ ನುಡಿಸುತ್ತಿದ್ದು, ಅದಕ್ಕಾಗಿ ಆತ ಬಲಗೈಲಿ ಹಿಡಿದಿರುವ ಕೋಲಿನ ತುದಿ ಕೊಕ್ಕೆಯಂತೆ ಬಾಗಿದ್ದರೆ, ಮೇಲೆ, ಎಡಗೈಲಿ ಹಿಡಿದಿರುವ ಕೋಲಿನ ತುದಿ ಬುಗುಟಿನಂತೆ ದಪ್ಪಗಿದೆ. ವಾದ್ಯ ಸುಮಾರು ದೊಡ್ಡದಿದ್ದು, ದುಂಡಗಿನ ಚೌಕಟ್ಟಿನ ಒಂದು ಪಕ್ಕ ಚರ್ಮ ಹೊದಿಸಿದಂತಿದ್ದು, ಅದನ್ನು ಒತ್ತಿ ಬಡಿಯುತ್ತಿರುವುದು ಸಹಜ ಚಿತ್ರಣವಾಗಿದೆ. ಅಂದಿಗೂ ಇಂದಿಗೂ ಆಗಿರುವ ವ್ಯತ್ಯಾಸ ತಮಟೆ ಬಡಿಯುವ ಕೋಲುಗಳಲ್ಲಿನ ಆಕಾರದಲ್ಲಿ ಮಾತ್ರ.

ಹರೆ (ಪರೆ)

ವಿವಿಧ ರೀತಿಯ (ಪರೆ)ಗಳ ಉಲ್ಲೇಖ ವಿವಿಧ ಪ್ರಾಚೀನ ಕಾವ್ಯಗಳಲ್ಲಿ ಬರುತ್ತದೆಯಾದ್ದರಿಂದ ಅದೊಂದು ಜನಪ್ರಿಯ ವಾದ್ಯವಾಗಿದ್ದಿತೆಂದು ಭಾವಿಸಬಹುದಾಗಿದೆ. ಪಂಪ ಅದನ್ನೊಂದು ಮಂಗಳ ವಾದ್ಯ ಎಂಬಂತೆ ಪ್ರಸ್ತಾಪಿಸಿದ್ದಾನೆ. ಆದರೆ, ಅದರ ಆಕಾರ - ಸ್ವರೂಪದ ಬಗೆಗೆ ಅಸ್ಪಷ್ಟತೆ ಇದೆ. ಇಂದು 'ಹರೆ'ಯ ಬಳಕೆ ಧಾರ್ಮಿಕ ವಾತಾವರಣಕ್ಕೆ ಸೀಮಿತಗೊಂಡಿದೆ.

ಇವಲ್ಲದೆ ಜನಪದರ ವಾದ್ಯಗಳಾದ ರಂಡೋಲು, ತಾಸ, ಮುರಜ, ಚಕ್ರಾದಿ ಬಳೆಯಂತಹ ವಾದ್ಯಗಳೂ ಶಿಲ್ಪ-ಚಿತ್ರಗಳಲ್ಲಿ ಸ್ಥಾನ ಪಡೆದಿದ್ದು, ಅಧ್ಯಯನಕ್ಕೆ ಉತ್ತಮ ಆಕರಗಳಾಗಿವೆ.

ಹೀಗೆ, ವಾದ್ಯಗಳ ಚಾರಿತ್ರಿಕ ಅಧ್ಯಯನ ನಮಗೆ ಹಲವು ಕುತೂಹಲದ ಸಂಗತಿಗಳನ್ನು ತಿಳಿಸಿಕೊಡುತ್ತದೆ. ಕಿನ್ನರಿಯಂತಹ ಜನಪದರ ಸಾಮಾನ್ಯ ವಾದ್ಯ ವೀಣೆಯಂತಹ ಪ್ರಬುದ್ಧ ವಾದ್ಯಕ್ಕೆ ಜನ್ಮಕೊಟ್ಟಿದೆ. ಹೊಯ್ಸಳರ ಕಾಲದಲ್ಲೂ ಪ್ರಚಲಿತವಿದ್ದಿರಬಹುದಾದ ಕೆಲ ವಾದ್ಯಗಳು ಇಂದು ಕಾಲಗರ್ಭದಲ್ಲಿ ಸೇರಿಹೋಗಿದ್ದು, ಕೇವಲ ಶಿಲ್ಪಗಳಲ್ಲಿ ಮಾತ್ರ ಅವುಗಳ ಪ್ರತಿಕೃತಿ ಇವೆ. ಪ್ರಾಚ್ಯವಾದ್ಯಗಳ ಅಧ್ಯಯನದ ಮೂಲಕ ಪ್ರಪಂಚದ ನಾಗರಿಕತೆಗಳ ಮೂಲವನ್ನೋ ಅವರ ಪ್ರಸರಣವನ್ನೋ ಪರಸ್ಪರ ಪ್ರಭಾವವನ್ನೋ

ಗುರುತಿಸಬಹುದಾಗಿದೆ. ಭಾರತಕ್ಕೆ ಕೆಲ ವಾದ್ಯಗಳು ವಿದೇಶೀಯರ ಸಂಪರ್ಕದಿಂದಲೇ ಬಂದಿವೆ. ಇವುಗಳಲ್ಲಿ 'ಬಿಲ್ಲುವೀಣೆ' (Bow Shaped Veena), ಗಿಟಾರ್ ಮಾದರಿ ವೀಣೆಗಳು ಬಹು ಹಿಂದೆಯೇ ನಮಗೆ ಬಂದರೂ ಇಲ್ಲಿನ ಜನಜೀವನದಲ್ಲಿ ಪೂರ್ಣವಾಗಿ ಬೆರೆಯದೇ, 'ಪರಕೀಯ'ವಾಗಿಯೇ ಉಳಿದಿವೆ. ಆದರೆ, 'ಡಪ್ಪು'ವಿನಂತಹ ವಾದ್ಯ ಜನಸಾಮಾನ್ಯರಲ್ಲಿ ಬೆರೆತು. ನಮ್ಮ ಜನಪದ ಕಲಾವಿದರ ಬಹುಮುಖ್ಯ ವಾದ್ಯಗಳಲ್ಲಿ ಒಂದಾಗಿಹೋಗಿದೆ !

ಕುತೂಹಲಕರವಾದ ಇನ್ನೊಂದು ಅಂಶವೆಂದರೆ, ಈವರೆಗೆ ನೋಡಿದ ಬಹುಪಾಲು ವಾದ್ಯಗಳು ನೂರಾರು (ಕೆಲವೊಮ್ಮೆ ಸಾವಿರ) ವರ್ಷಗಳಿಂದಲೂ ತಮ್ಮ ಸ್ವರೂಪ, ವಾದನ ಕ್ರಮದಲ್ಲಿ ಹೆಚ್ಚಿನ ಬದಲಾವಣೆಗೆ ಒಳಗಾಗದಿರುವುದು ಮತ್ತು ಅಷ್ಟು ಹಿಂದೆಯೇ ಈ ಬಗೆ ಬಗೆಯ ವಾದ್ಯಗಳ ನಿರ್ಮಾಣ ಕೌಶಲವನ್ನು ಅವರು ತೋರಿರುವುದು. ವಾದ್ಯಗಳ ಬೆಳವಣಿಗೆಯಲ್ಲಿ ಆಗಿರುವ ತೀರಾ ಕೆಲವೇ ವ್ಯತ್ಯಾಸಗಳೆಂದರೆ, ಪ್ರಾರಂಭಿಕ ಹಂತದ ವಾದ್ಯಗಳು ತುಸು ಒರಟು ಹಾಗೂ ಭಾರವಾಗಿದ್ದರೆ ಕ್ರಮೇಣ ಅವು ನಾಜೂಕು ಹಾಗೂ ಹಗುರವಾಗಿ ಮಾರ್ಪಟ್ಟಿವೆ. ಅಂತೆಯೇ ಪ್ರಾರಂಭದ ಶಿಲ್ಪಗಳಲ್ಲಿ ಚರ್ಮವಾದ್ಯಗಾರರು ನೆಲದ ಮೇಲೆ ಕುಳಿತೇ ವಾದ್ಯ ನುಡಿಸುತ್ತಿದ್ದರೆ, ಮಧ್ಯಕಾಲದ ಶಿಲ್ಪಗಳಲ್ಲಿ ಅವರು ವಾದ್ಯಗಳನ್ನು ಎತ್ತಿಹಿಡಿದು, ನುಡಿಸುತ್ತಾ ನರ್ತಿಸುತ್ತಿರುವುದು ಕಂಡುಬರುತ್ತದೆ. ವಾದನದಲ್ಲಿ ಅವರು ಸಾಧಿಸಿದ ಪರಿಣತಿಯೂ ಅಲ್ಲಿ ವ್ಯಕ್ತವಾಗುತ್ತದೆ. ಕಾಲ ಬದಲಾದಂತೆ ವಾದ್ಯಗಳಲ್ಲಿ ವೈವಿಧ್ಯಗಳೂ ತಲೆದೋರಿವೆ. ನಮ್ಮ ಜನಪ್ರಿಯ ತಮಟೆಗಳು ಇಂದು ನವೀಕರಣಗೊಂಡಿವೆ. ಈಚೆಗಂತೂ ವಿಜ್ಞಾನ-ತಂತ್ರಜ್ಞಾನಗಳ ಪ್ರಗತಿಯಿಂದಾಗಿ ಚಿತ್ರ-ವಿಚಿತ್ರವೂ, ಸಂಕೀರ್ಣವೂ ಆದ ವಾದ್ಯಗಳು ಜನ್ಮ ತಳೆದು ಹೊಸ ತಲೆಮಾರಿನವರನ್ನು ತೀವ್ರವಾಗಿ ಆಕರ್ಷಿಸಿದ್ದರೂ ಜನಪದರ ವಾದ್ಯಗಳು ಜನಪದ ಬದುಕಿನಲ್ಲಿ ತಮ್ಮ ಹಿಡಿತವನ್ನು ಇನ್ನೂ ಉಳಿಸಿಕೊಂಡೇ ಬದುಕಿವೆ.

ಜಗತ್ತಿನ ಸಂಗೀತ ಸಾಮ್ರಾಜ್ಯದಲ್ಲಿ ಭಾರತೀಯ ಸಂಗೀತಕ್ಕೆ ತನ್ನದೇ

ಆದ ವಿಶೇಷ ಗುಣ ಲಕ್ಷಣಗಳಿವೆ. ಮಣ್ಣು, ಕರುಳು, ಚರ್ಮದಂತಹ ವಸ್ತುಗಳನ್ನೂ ಬಳಸಿ ಭಾರತವು ಐನೂರಕ್ಕೂ ಹೆಚ್ಚಿನ ವಾದ್ಯಗಳನ್ನು ಸೃಷ್ಟಿಸಿದೆ ಎಂಬ ಅಭಿಪ್ರಾಯವೂ ಇದೆ. ಆ ದೃಷ್ಟಿಯಿಂದಲೂ ವಾದ್ಯಗಳ ಕುರಿತ ಅಧ್ಯಯನಕ್ಕೆ ಹೆಚ್ಚಿನ ಅವಕಾಶವಿದೆ.

ಅಧ್ಯಯನ ಸೌಲಭ್ಯಕ್ಕಾಗಿ ವಿದ್ವಾಂಸರು ಎಲ್ಲಾ ಬಗೆಯ ವಾದ್ಯಗಳನ್ನು ಬಡಿಯುವ ವಾದ್ಯ (ಚರ್ಮವಾದ್ಯ), ಮೀಟುವ ವಾದ್ಯ (ತಂತಿವಾದ್ಯ),ತಟ್ಟುವ ವಾದ್ಯ (ಲೋಹವಾದ್ಯ) ಹಾಗೂ ಊದುವ ವಾದ್ಯ (ಗಾಳಿವಾದ್ಯ) ಗಳೆಂದು ವಿಭಾಗಿಸುವುಂಟು. ಇವುಗಳ ಜೊತೆಗೆ, ಗೆಜ್ಜೆಗಳು, ಗಿಲಕಿಗಳಂತಹ ಪರಿಕರಗಳನ್ನು ಕುಲುಕಿಸಿ, ಬೇಕಾದ ಲಯ - ನಾದ ಹೊರಡಿಸುವುದರಿಂದ, ಇವುಗಳಿಗಾಗಿ ಕುಲುಕು ವಾದ್ಯಗಳೆಂಬ ಪ್ರತ್ಯೇಕ ವಿಭಾಗವನ್ನು ಮಾಡಬಹುದೆನಿಸುತ್ತದೆ. ಈ ಬಗ್ಗೆ ವಿದ್ವಾಂಸರು ಪರಿಶೀಲಿಸಬಹುದು ಎಂಬುದನ್ನು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ.

ಒಟ್ಟಿನಲ್ಲಿ, ಜಾನಪದ ದಾಖಲೆಗಳನ್ನುಳಿಸುವಲ್ಲಿ 'ಅಕ್ಷರ' ಮಾಡದ ಕಾರ್ಯವನ್ನು ಬಹು ಪರಿಣಾಮಕಾರಿಯಾಗಿ ಪ್ರಾಚೀನ ಶಿಲ್ಪ-ಚಿತ್ರಗಳು ಮಾಡಿವೆ. ಆದ್ದರಿಂದ, ಇಂಥಾ ಎಷ್ಟೋ ಪ್ರಾಚೀನ ಸಾಂಸ್ಕೃತಿಕ ಬದುಕಿನ ವಿವಿಧ ಸಂಗತಿಗಳನ್ನು ತಮ್ಮ ಒಡಲಲ್ಲಿ ಹುದುಗಿಸಿಟ್ಟುಕೊಂಡಿರುವ ಈ ಎಲ್ಲಾ ಪ್ರಾಚ್ಯ ಸ್ಮಾರಕಗಳನ್ನೂ ಪ್ರತಿಯೊಬ್ಬ ಪ್ರಜೆಯೂ ಎಚ್ಚರಿಕೆಯಿಂದ ಉಳಿಸಿಕೊಳ್ಳುವ ಜವಾಬ್ದಾರಿ ಹೊರಬೇಕಾಗಿದೆ.

ಆಕರಗಳು

1. A History of Indian Painting
   - Krishna Chaitanya.
2. Ajanta, Ellora and Aurangabad caves
   - Ramesh Shankar Gupta.

3. Archaeology of Indian Musical Instruments
    - K. Krishna Murthy.

4. Art and Material Culture in the Paintings of Akbhar's Court-
    Som Prakash Varma.

5. Art Treasures of the World
    - Paul Hamlyn.

6. Classical Indian Dance in literature and the Arts
    - Kapila Vatsyayan.

7. Colour Encyclopaedia : Musical Instruments
    - Alexander Buchner.

8. Dance and Music in the Temple Architecture
    - Dr. Choodamani Nandagopal.

9. Deccan Painting.

10. Early Indian paintings.

11. Gandhara Sculptures : A Cultural Study
    - K. Krishna Murthy.

12. Historical Development of Indian Music
    - Swami Prajnanda.

13. India Art and Culture : 1300-1900
    - Stuart Carywelch.

14. Indian Miniatures in the India Office Library.

15. Indian Rock Art
    - S. K. Pandey.

16. Kangra Valley Paintings.

17. Konark
    - O. C. Gangoly.

18. Layavadyas
- P. Samba Moorthy.

19. Master Pieces of Hoysala Art.

20. Mewar Painting
- Lalitakala Academy Series No. 23.

21. Nataraja in Art, Thought and Literature
- C. Shiva murthy.

22. Paintings from the Akbar Nama
- Geetisen.

23. Raga Mala Paintings
- Klaus Ebeling.

24. The Music and Musical Instruments of Southern India and the Deccan
- C. R. Dey.

25. The Paintings in the Buddhist Cave Temples of Ajanta.

26. Tree and Serpent worship
- J. Fergusson.


27. ಕರ್ನಾಟಕ ಜನಪದ ವಾದ್ಯಗಳು
- ಜಿ. ಎ. ಸುಬ್ಬಲಕ್ಷ್ಮಿ (ಅಪ್ರಕಟಿತ ನಿಬಂಧ).

28. ಜನಪದ ವಾದ್ಯಗಳು
- ಪಿ. ಕೆ. ರಾಜಶೇಖರ.

29. ಭಾರತೀಯ ಸಂಗೀತ ವಾದ್ಯಗಳು
- ಜಿ. ಶಾಮಾಚಾರ್ಯ

ಜನಪದ ಮಹಾಕಾವ್ಯಗಳು ಜನಾಂಗಗಳ ವೃತ್ತಿಜೀವನದ ಸ್ಥಿತ್ಯಂತರಗಳನ್ನೂ ಅದಕ್ಕೆ ಸಂಬಂಧಿಸಿದ ಸಾಂಸ್ಕೃತಿಕ ವಿವರಗಳನ್ನೂ ರೂಪಕ ಮಾದರಿಯಲ್ಲಿ ಕಟ್ಟಿಕೊಟ್ಟಿವೆ. ಈ ರೂಪಕ ಗರ್ಭಗಳ ಪ್ರಾಚೀನತೆ ಎನ್ನುವುದು ಅಗಣಿತವಾದುದು. ಅಂದರೆ ಜಾನಪದಕ್ಕೆ ಸಂಬಂಧಿಸಿದಂತೆ ಇತಿಹಾಸ ಎನ್ನುವುದು ಕಾಲನಿರ್ದಿಷ್ಟತೆಯಲ್ಲಿ ಗಣಿತವಾಗುವುದಲ್ಲ; ಅದು ಅಗಣಿತವಾಗಿ ಕಥನಗರ್ಭದಲ್ಲಿ ವರ್ತಮಾನವೂ ಆಗಿ ಉಸಿರಾಡುತ್ತಿರುವ ಸಂಸ್ಕೃತಿ ದ್ರವ್ಯ. ಇದನ್ನು ಗ್ರಹಿಸಬೇಕಾದರೆ ಹೊರಗಿನ ಮಾರ್ಗೀಯ ಸಾಧನೆ ಸಲಕರಣಗಳು ದೃಷ್ಟಿಧೋರಣೆಗಳು ಅಷ್ಟು ಸಹಾಯಕ ವಾಗಲಾರವು. ಪರಂಪರೆಯೊಳಗೇ ಇರುವ ಪ್ರಜ್ಞೆಯ ಕೀಲಿಕೈಗಳು ಮಾತ್ರ ಆ ಲೋಕದೊಳಗನ್ನು ಅನಾವರಣಗೊಳಿಸಬಲ್ಲವು. ಆದ್ದರಿಂದ ಈಗಲೂ ಜಾನಪದದ ಪ್ರಾಚ್ಯಸ್ಥಿತಿಯ ಕಾಲ್ಪನಿಕ ಪುನಾರಚನೆಗೆ ಮೌಖಿಕ ಪರಂಪರೆಯ ನೆಲೆಯಲ್ಲಿ ಸಿಗುವ ಆಧಾರಗಳು ಆಕರಗಳು ಪ್ರಧಾನವಾಗಿ ಅಧ್ಯಯನಕ್ಕೆ ಒದಗಬೇಕಾದ ನಿಜವಾದ ಪ್ರಮಾಣಗಳು.

■ ಎಸ್.ಜಿ. ಸಿದ್ಧರಾಮಯ್ಯ



ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು

ISBN : 81-7713-142-7